# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

, ಸೆಪ್ಟಂಬರ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೭

ಚಂದಾ ರೂ. ೨೦೦/- (೨೦೧೯ರ ಅಕ್ಟೋ.ನಿಂದ ಸೆಪ್ಟಂ. ೨೦೨೦ರವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೧

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಈ ಸಂಚಿಕೆ ಕಳೆದ ವಿಶೇಷ ಸಂಚಿಕೆಯಲ್ಲಿ ತಿಳಿಸಿದಂತೆ ಸ್ವಲ್ಪ ತಡವಾಗಿ ನಿಮ್ಮ ಕೈ ಸೇರುತ್ತಿದೆ. ವಿಶೇಷಾಂಕದ ಕೆಲಸದ ಒತ್ತಡದಿಂದ ಸ್ವಲ್ಪ ವಿಶ್ರಾಂತಿ ಅಗತ್ಯವೆನಿಸಿದ್ದರಿಂದ ಮತ್ತು ನಾನು ಒಂದು ಗಡುವಿನೊಳಗೆ ನನ್ನ ಗಾಂಧಿ ಪುಸ್ತಕ 'ಗಾಂಧಿ ಕಥನ'ವನ್ನು ಮುಗಿಸಿಕೊಡಬೇಕಾಗಿ ಬಂದದ್ದರಿಂದ ಈ ವಿಳಂಬ ಅನಿವಾರ್ಯವಾಗಿದೆ, ಕ್ಷಮೆ ಇರಲಿ. ನಮ್ಮ ವಿಶೇಷಾಂಕಕ್ಕೆ ನಿಮ್ಮಿಂದ ದೊರೆತಿರುವ ಸ್ವಾಗತ ಮತ್ತ ಮೆಚ್ಚುಗೆ ನಮ್ಮನ್ನು ವಿನೀತಗೊಳಿಸಿವೆ. ಇದು ಲೇಖಕ ಮತ್ತು ಅನುವಾದಕರ ಬಳಗ ಮತ್ತು ಆಪ್ತ ಗೆಳೆಯ-ಗೆಳತಿಯರನ್ನೊಳಗೊಂಡ ಒಂದು ತಂಡದ ಕೆಲಸವಾಗಿದ್ದುದರಿಂದ ನಿಮ್ಮ ಮೆಚ್ಚುಗೆ ಈ ಎಲ್ಲರಿಗೂ ಸಲ್ಲುತ್ತದೆ. ಹೌದು, ನಮ್ಮ ಮುಖ್ಯ ಲೇಖಕರಿಗೆ ವರ್ಷದ ಸಾಂಕೇತಿಕ ಸಂಭಾವನೆ ನೀಡಬೇಕು. ಅದಕ್ಕೆ ಮೊದಲು ವಿಶೇಷಾಂಕದ ಜಾಹೀರಾತುಗಳ ಎಲ್ಲ ಹಣ ಸಂಗ್ರಹವಾಗಬೇಕು. ಇದಾದೊಡನೆ ಎಲ್ಲ ವಿವರ ತಿಳಿಸುವೆ.

ಕಳೆದ (ವಿಶೇಷ) ಸಂಚಿಕೆಹೊರಬಂದ ಒಂದೂವರೆ ತಿಂಗಳನಿಂದೀಚೆಗೆ ದೇಶದಲ್ಲಿ ಸಾಕಷ್ಟು ಗಮನಾರ್ಹ ಬೆಳವಣಿಗೆಗಳು ನಡೆದುಹೋಗಿವೆ. ಮೋದಿ ಸರ್ಕಾರ ತನ್ನ ಎರಡನೆಯ ಅವಧಿಯ ಆರಂಭದಲ್ಲೇ ಬಹು ಅವಸರದಲ್ಲಿದ್ದಂತೆ ಕೆಲ ನಿರ್ಣಾಯಕ ಮಸೂದೆಗಳನ್ನು ಅಂಗೀಕರಿಸಿದೆ. ಆತ್ಮ ವಿಶ್ವಾಸ ಕಳೆದುಕೊಂಡ ಕೆಲ ವಿಧೇಯ ವಿರೋಧ ಪಕ್ಷಗಳ ಸಹಕಾರದಿಂದಷ್ಟೇ ಇದು ಸಾಧ್ಯವಾಗಿದೆ. ಅದು ತ್ರಿವಳಿ ತಲಾಖ್‌ಗೆ ಸಂಬಂಧಿಸಿದ್ದಿರಲಿ, ಮಾಹಿತಿ ಹಕ್ಕು ಕಾಯಿದೆಗೆ ಸಂಬಂಧಿಸಿದ್ದಿರಲಿ ಅಥವಾ ಐತಿಹಾಸಿಕವಾದ ಜಮ್ಮು ಕಾಶ್ಮೀರದ ವಿಶೇಷಾಧಿಕಾರ ರದ್ದತಿ ಮತ್ತು ಆ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಒಡೆದುದಕ್ಕೆ ಸಂಬಂಧಿಸಿದ್ದೇ ಆಗಿರಲಿ, ಈ ಎಲ್ಲ ಮಸೂದೆಗಳು ಪೂರ್ಣ ಪ್ರಮಾಣದ ಸಂಸದೀಯ ಪ್ರಜಾಸತ್ತಾತ್ಮಕ ಚರ್ಚೆಗಳಿಗೆ ಒಳಗಾಗದೆ ಅನುಮೋದಿತವಾಗಿರುವುದು, ಕಳೆದ ಚುನಾವಣೆಯಲ್ಲಿ ವ್ಯಕ್ತವಾದ ಏಕಪಕ್ಷೀಯ ಜನತಾ ತೀರ್ಪು ನಮ್ಮ ಪ್ರಜಾಸತ್ತೆಗೆ ತಂದೊಡ್ಡಬಹುದಾದ ನಿರ್ಣಾಯಕ ಅಪಾಯಗಳ ಮುನ್ಸೂಚನೆಯೇ ಆಗಿದ್ದಂತಿದೆ. ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷಾಧಿಕಾರವನ್ನು ಹಿಂತೆಗೆದುಕೊಂಡ ನಿರ್ಧಾರ ಹೊಸ 'ದೇಶಭಕ್ತ' ಸಮೂಹದಿಂದ ಬಹುದಿಟ್ಟತನದ್ದೆಂದು ವರ್ಣಿಸಲ್ಪಡುತ್ತಿದೆಯಾದರೂ ಈ ಕ್ರಮ ಇನ್ನೂ ನ್ಯಾಯಾಲಯದಲ್ಲಿ ಸಾಂವಿಧಾನಿಕ ಪರಿಶೀಲನೆಯನ್ನು ದಾಟಿಹೋಗಬೇಕಿದೆ ಎಂಬುದನ್ನೂ ನಾವು ಗಮನಿಸಬೇಕು. ಮುಖ್ಯವಾಗಿ ಈ ರದ್ದತಿಗೆ ರಾಜ್ಯ ವಿಧಾನ ಸಭೆಯ ಒಪ್ಪಿಗೆ ಬೇಕೆನ್ನುವ ಕಾನೂನನ್ನು ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸಿ ಅದರ ಅಧಿಕಾರ ವಹಿಸಿಕೊಂಡ ರಾಜ್ಯಪಾಲರ ಒಪ್ಪಿಗೆ ಮೂಲಕ ಪಾಲಿಸಲಾಗಿದೆ ಎಂಬ ವ್ಯಾಖ್ಯಾನ ಪ್ರಜಾಸತ್ತೆಯ ಅಣಕ ಮಾತ್ರವೆನಿಸುತ್ತದೆ.

ಇದನ್ನು ತಾಂತ್ರಿಕ ನೆಲೆಯಲ್ಲಿ ಒಪ್ಪಿಕೊಂಡರೂ, ಒಂದೂವರೆ ತಿಂಗಳಿನಿಂದ ಕಾಶ್ಮೀರ ಕಣಿವೆಯ ತುಂಬ ಸೇನೆ-ಅರೆಸೇನೆ ದಳಗಳನ್ನಿಟ್ಟು ನಾಗರಿಕ ಹಕ್ಕುಗಳನ್ನು ನಿರ್ಬಂಧಿಸಿ ಶಾಸನವನ್ನು ಜಾರಿಗೆ ತರುತ್ತಿರುವ ಕ್ರಮ ಯಾವ ರೀತಿಯಲ್ಲೂ ಪ್ರಜಾಸತ್ತಾತ್ಮಕವೆನಿಸದೆ, ಜನತೆಯಲ್ಲಿ ದೇಶದ ಬಗ್ಗೆ ಇದ್ದಬದ್ದ ನಂಬಿಕೆಯನ್ನೂ ಹಾಳುಮಾಡಿಕೊಳ್ಳುವಲ್ಲಿ ಪರ್ಯಾವಸಾನವಾದಲ್ಲಿ ಆಶ್ಚರ್ಯವಿಲ್ಲ. ದೇಶದ ಸಮಗ್ರತೆ ಮತ್ತು ಭದ್ರತೆಗೆ ಒಮ್ಮೊಮ್ಮೆ ಕಠಿಣ ಕ್ರಮ ಬೇಕಾಗುತ್ತದಾದರೂ ಅದು ಹೀಗೆ ಇಡೀ ಜನಸಮೂಹವೊಂದನ್ನು ಉಸಿರುಗಟ್ಟಿಸುವ ಪರಿ ದೇಶದ ಘನತೆಯನ್ನು ಖಂಡಿತ ಹೆಚ್ಚಿಸುವಂಥದ್ದಂತೂ ಅಲ್ಲ. ಈ ಬಗ್ಗೆ ಈ ಸಂಚಿಕೆಯಲ್ಲಿ ಸುಧೀಂದ್ರ ಕುಲಕರ್ಣಿಯವರು ನಮ್ಮ ಪತ್ರಿಕೆಗಾಗಿಯೇ ಬರೆದ ಒಂದು ಪುಟ್ಟ ಲೇಖನವಿದೆ. ಓದಿರಿ.

**ಗಮನಿಸಿ : ನಿಮ್ಮ ಚಂದಾ ಮುಗಿದಿದೆ**

**ಈ ಸಂಚಿಕೆಯೊಂದಿಗೆ ನಮ್ಮ ಬಹಳಷ್ಟು ಓದುಗರ ಚಂದಾ ಮುಗಿದಿದ್ದು, ಇದೇ 25ರೊಳಗಾಗಿ ಅಂತಹವರು ಚಂದಾ ನವೀಕರಿಸದಿದ್ದಲ್ಲಿ ಅಕ್ಟೋಬರ್ ಸಂಚಿಕೆಯನ್ನು ಕಳಿಸಲಾಗುವುದಿಲ್ಲ. 200 ರೂ. ಗಳ ವಾರ್ಷಿಕ ಚಂದಾವನ್ನು ಚೆಕ್/ಡಿಡಿ/ಎಂ.ಓ ಮೂಲಕ ಅಥವಾ ಶಿವಮೊಗ್ಗದ ಎಸ್‌ಬಿಐ.ನ ಗೀತಾಕೃಪಾಶಾಖೆಯಲ್ಲಿ(ifsc: sbin 040444) 'ಸಂಪಾದಕರು: ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ಹಣ ವಗಾವಣೆ ಮಾಡಬಹುದು. ನಗದು ವರ್ಗಾವಣೆ ಬೇಡ. ಚಂದಾ ಪಾವತಿಯಾದ ನಂತರ 9449242284 ಈ ಸಂಖ್ಯೆಗೆ ಪಾವತಿಯ ಬಗ್ಗೆ ಕರೆ ಅಥವಾ ಸಂದೇಶದ ಮೂಲಕ ತಿಳಿಸಲು ವಿನಂತಿ-ಸಂ**

ಇನ್ನು ಮೋದಿ ಸರ್ಕಾರ ದೇಶದ ಆರ್ಥಿಕತೆಯನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ. ಜಿಡಿಪಿ ಮತ್ತು ನಿರುದ್ಯೋಗದ ಅಂಕಿ ಅಂಶಗಳನ್ನು ತನ್ನದೇ ಹೊಸ ರೀತಿಯಲ್ಲಿ ಮಂಡಿಸಿ ತನ್ನ ಆರ್ಥಿಕ ಆಡಳಿತದ ಸಾಮರ್ಥ್ಯವನ್ನು ಚುನಾವಣೆಗಳ ಸಂದರ್ಭದಲ್ಲಿ ಸಮರ್ಥಿಸಿಕೊಂಡು ಪಾರಾಗಿದ್ದ ಸರ್ಕಾರ ಈಗ ಮುಖಕ್ಕೆ ರಾಚುವಂತಿರುವ ಆರ್ಥಿಕ ಹಿಂಜರಿತದ ಸ್ಪಷ್ಟ ಲಕ್ಷಣಗಳಾದ ಕೈಗಾರಿಕಾ ಉತ್ಪಾದನೆ ಮತ್ತು ರಫ್ತು ಕುಸಿತ, ಭಾರಿ ಉದ್ಯೋಗ ನಷ್ಟ, ಅಂತಾರಾಷ್ಟ್ರೀಯ ಮಟ್ಟದಲ್ಲಿ ರೂಪಾಯಿ ಬೆಲೆಯ ಕುಸಿತ ಮುಂತಾದ ಕಟು ವಾಸ್ತವಗಳನ್ನು ನಿಭಾಯಿಸುವ ದಕ್ಷತೆ ಇಲ್ಲದೆ ಒದ್ದಾಡುತ್ತಿದೆ. ಮೋದಿಯವರ ಅಗ್ಗದ ಜನಪ್ರಿಯತೆಗಾಗಿ ಜಾರಿಗೆ ತಂದ ನೋಟು ರದ್ದತಿ ಮತ್ತು ಕ್ರಾಂತಿಕಾರಕ ಆರ್ಥಿಕ ಉಪಕ್ರಮವೆಂದು ಹೇಳಿಕೊಂಡು ಜಾರಿಗೆ ತಂದ ಜಿಎಸ್‌ಟಿ ಇದಕ್ಕೆ ಬಹುಮಟ್ಟಿಗೆ ಕಾರಣವೆಂದು ಆರ್ಥಿಕ ತಜ್ಞರು ಹೇಳುತ್ತಿದ್ದರೂ ಸರ್ಕಾರ ಇದು ಜಾಗತಿಕ ಪ್ರವೃತ್ತಿಯ ಒಂದು ಭಾಗ ಮಾತ್ರವಾಗಿದೆ ಎಂದು ವಾದಿಸುತ್ತಿರುವುದು ಅದರ ಅಸಹಾಯಕತೆಯನ್ನಷ್ಟೇ ಸೂಚಿಸುತ್ತಿರುವಂತಿದೆ. ಈ ಬಗ್ಗೆ ಈ ಸಂಚಿಕೆಯಲ್ಲಿ ಟಿ.ಎಸ್. ವೇಣುಗೋಪಾಲ್ ಬರೆದಿದ್ದಾರೆ.

ಈ ರಾಜಕೀಯ ವಿವಾದಗಳ ಬಿಸಿಯ ನಡುವೆ ಈ ವರ್ಷದ ಭೀಕರ ಮಳೆ ಯಾವುದೇ ರಾಷ್ಟ್ರೀಯ ಚರ್ಚೆಯನ್ನು ಸೃಷ್ಟಿಸದಿರುವುದು ಆಶ್ಚರ್ಯಕರವಷ್ಟೇ ಅಲ್ಲ, ಭಯಾನಕ ಕೂಡ. ನಮ್ಮ ಜಿಡಿಪಿ ವರ್ಧನೆ ಆಧಾರಿತ ಅಭಿವೃದ್ಧಿ ನೀತಿ ಜನರ ಬದುಕನ್ನು ಸರ್ವನಾಶದತ್ತ ಒಯ್ಯುತ್ತಿದೆ ಎಂಬ ಸಂದೇಶ ತೀವ್ರವಾಗಿ ಯಾರಿಗೂ ಮುಟ್ಟಿದಂತೆಯೇ ಇಲ್ಲ. ಮೋದಿಯವರಿಂದ ಹಿಡಿದು ನಮ್ಮ ಯಡಿಯೂರಪ್ಪನವರವರೆಗೆ ಎಲ್ಲರೂ ಹೆಚ್ಚೆಚ್ಚು ಸುಖ ಸೌಲಭ್ಯಗಳ ಆಸ್ತಿ ನಿರ್ಮಾಣವೇ ದೇಶದ ಅಭಿವೃದ್ಧಿಯ ಹಾದಿ ಎಂಬ ಹಳೆಯ ಮಾತುಗಳನ್ನೇ ಆಡುತ್ತಾ ಜನರನ್ನು ಥಕತೈ ಕುಣಿಸುತ್ತಿದ್ದಾರೆ. ಜನರೂ ಕುಣಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಯಾರಿಗೆ ಏನು ಹೇಳುವುದು?

ಯಡಿಯೂರಪ್ಪನವರು ಅಮಿತ್ ಶಾ ಮತ್ತು ಬಿ.ಎಲ್ ಸಂತೋಷ್ ನಡುವಿನ ಇಕ್ಕಳದಲ್ಲಿ ತಮ್ಮ ಅರೆಬರೆ ಸರ್ಕಾರವನ್ನು ನಡೆಸುತ್ತಿರುವ ಪರಿ ಮರುಕಕ್ಕೆ ಮಾತ್ರ ಅರ್ಹವಾಗಿದೆ. ಇನ್ನು ಕುಮಟಳ್ಳಿ, ಬಿ.ಸಿ. ಪಾಟೀಲ, ಶಂಕರ್, ಮುನಿರತ್ನ ಮುಂತಾದ ಅನರ್ಘ್ಯ ಮುತ್ತು ರತ್ನಗಳು ಈ ಅರೆಬರೆ ಸರ್ಕಾರವನ್ನು ಪೂರ್ಣಗೊಳಿಸಿದಾಗ ಇದರ ಕಥೆ ಏನಾಗಬೇಡ! ಕಾಂಗ್ರೆಸ್ ಚಿದಂಬರಂ ಮತ್ತು ಡಿಕೆಶಿ ರೂಪಗಳಲ್ಲಿ ತರತರನೆ ನಡುಗುವ ಹಡಗಿನಂತಾಗಿರುವ ಈ ಸಂದರ್ಭದಲ್ಲಿ ಕರ್ನಾಟಕದ ಜನರನ್ನು ದೇವರೇ-ಅವನಿದ್ದರೆ-ಕಾಪಾಡಬೇಕು!

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ.

'ಹೊಸ ಮನುಷ್ಯ; ವಾರ್ಷಿಕ ವಿಶೇಷ ಸಂಚಿಕೆ ತುಂಬ ಚೆನ್ನಾಗಿ ಬಂದಿದೆ. ರಾಜಕೀಯ ವೈಚಾರಿಕ ಲೇಖನಗಳೊಂದಿಗೆ ಸಾಹಿತ್ಯಕವಾಗಿಯೂ ಮೈದುಂಬಿಕೊಂಡು ಬಂದಿದೆ. ಹಾರ್ದಿಕ ಅಭಿನಂದನೆಗಳು.

**–ಚೆನ್ನವೀರ ಕಣವಿ,** ಧಾರವಾಡ

ವಿಶೇಷ ಸಂಚಿಕೆ ನೀವೇ ಹೇಳಿರುವಂತೆ ಸಮೃದ್ಧವಾಗಿದೆ. ಮೊದಲಿಗೆ, ಯಾವತ್ತೂ ಇಷ್ಟವಾಗುವ ನಿಮ್ಮ ಸಂಪಾದಕರ ಟಿಪ್ಪಣಿಗಳ ಬಗ್ಗೆ ಹೇಳಲೇಬೇಕಾದ ಒಂದು ಮಾತು. ಸಮಾಜವಾದದ ಪರಿಕಲ್ಪನೆಯ ಸ್ಪಷ್ಟ ಗ್ರಹಿಕೆಗೆ ಆ ಕುರಿತ ನಿಮ್ಮ ವ್ಯಾಖ್ಯಾನ ತುಂಬಾ ಸಹಕಾರಿಯಾಗಿದೆ. 'ಅದೊಂದು ಗುರಿ–ಮಾರ್ಗಗಳ ಅವಿಭಿನ್ನತೆಯ ರಾಜಕೀಯ ಚಿಂತನೆ' ಎನ್ನುವ ಮೂಲ ಸತ್ಯವನ್ನು ಮರೆತು, ಎಲ್ಲರೂ ಸಮಾಜವಾದಿ ಮುಖವಾಡ ಧರಿಸಿ ಮೆರೆಯುತ್ತಿರುವುದು ಆ ತತ್ವಕ್ಕೆ ಒದಗಿ ಬಂದಿರುವ ದೌರ್ಭಾಗ್ಯ. ಮತ್ತೆ ಗಾಂಧಿ–ಸರಳಾದೇವಿ ಒಡನಾಟದ ವಿಚಾರ ನನಗೆ ಹೊಸತು; ಇದು ಗಾಂಧಿ ಮನುಷ್ಯ ಮತ್ತು ಮಹಾತ್ಮ ಎರಡೂ ಆಗಿದ್ದರು ಎನ್ನುವ ಸತ್ಯವನ್ನು ಅರಿಯಲು ಪೂರಕವಾದ ಪ್ರಸಂಗ. ಮಾನವತಾವಾದಿಗಳಾಗಿ ಮಾರ್ಕ್ಸ್ ಮತ್ತು ಗಾಂಧಿ ಇಬ್ಬರೂ ನನಗೆ ಪ್ರಿಯವಾದವರು; ಅವರ ತಾತ್ವಿಕ ನಿಲುವುಗಳ ನಡುವೆ ಸಾಮ್ಯತೆಗಳನ್ನು ಗುರುತಿಸುವ ಅಕೀಲ್ ಬಿಲ್ಗ್ರಾಮಿ ಸಂದರ್ಶನ ವಿಭಿನ್ನ ವ್ಯಕ್ತಿತ್ವಗಳ ಬಗೆಗಿನ ನನ್ನ ಅಸಂಗತ ಒಲವಿಗೆ ಒಂದು ಸಮರ್ಥನೆಯನ್ನು ಒದಗಿಸಿ ಕೊಟ್ಟಿದೆ. ಸಂಚಿಕೆಯ ಉಳಿದೆಲ್ಲ ಲೇಖನಗಳೂ ಸೇರಿದಂತೆ ಇದೊಂದು ಉತ್ತಮ ಬರೆಹಗಳ ಸಂಗ್ರಹವಾಗಿದೆ.

**–ಪ್ರೊ. ಎಚ್.ಎಸ್. ಈಶ್ವರ,** ಬೆಂಗಳೂರು

'ಹೊಸಮನುಷ್ಯ'ದ ಏಳನೆ ವಾರ್ಷಿಕ ವಿಶೇಷ ಸಂಚಿಕೆಯು ಪಕ್ವತೆ ಮತ್ತು ಪ್ರಬುದ್ಧತೆಯಿಂದ ಕೂಡಿದ್ದು, ನಿಸ್ಸಂಶಯವಾಗಿಯೂ ಓದುಗರ ಅರಿವಿನ ಪರಿಧಿಯನ್ನು ವಿಸ್ತರಿಸಲು ಸಹಾಯಕವಾಗಿದೆ. ಸಮಾಜವಾದಿ ಮಾಸಿಕ ಎಂದು ಕರೆದುಕೊಂಡಿದ್ದರೂ, ಸಮಾಜವಾದಿಗಳನ್ನೊಳಗೊಂಡು ಎಲ್ಲರನ್ನು ನೇರ–ನಿಷ್ಠುರ ಒರೆಗಲ್ಲಿಗೆ ಹಚ್ಚಿ, ಪುಟವಿಟ್ಟಂತೆ ಮಾಡುತ್ತಿರುವ ವಿಶ್ಲೇಷಣೆಗಳು, ಸಹಜತೆಯಿಂದ ಕೂಡಿದ್ದು, ಸತ್ಯದ ಪರವಾಗಿವೆ. ಅದಕ್ಕಾಗಿ ಅಭಿನಂದನೆಗಳು.

ಪ್ರತಿಯೊಂದು ಲೇಖನದ ಪ್ರಾರಂಭದಲ್ಲಿ ನೀಡುವ ಸಂಪಾದಕರ ಟಿಪ್ಪಣಿಯಂತೂ ಓದುಗರು ಆಸಕ್ತಿಯಿಂದ, ತನ್ಮಯತೆಯಿಂದ ಓದಲು ಪ್ರೇರೇಪಿಸುತ್ತದೆ. ಸಂಚಿಕೆಯ ಆರೂ ಕವನಗಳು, ಜಿ. ರಾಜಶೇಖರ, ತೋಳ್ಪಾಡಿ, ಪಲ್ಲೀಕರ್, ಸಮರ್ ಬಾಗ್ಚಿಯವರ ಲೇಖನಗಳು ಚಿಂತನೆಗೆ ಹಚ್ಚುತ್ತವೆ. ಡಿಎಸ್ನೆನ್ ಅವರ 'ಗಾಂಧಿ ಕಥನ'ದ ಪ್ರಸಂಗವು, ಪುಸ್ತಕವನ್ನು ಕಾತುರದಿಂದ ಕಾಯುವಂತೆ ಮಾಡಿದೆ. ಏಕೆಂದರೆ ಬುದ್ಧ, ಬಸವ, ಗಾಂಧಿ, ಲೋಹಿಯಾರನ್ನು ಮನುಷ್ಯರೆಂದು ತಿಳಿದು ಅಧ್ಯಯನ ಮಾಡಬೇಕೇ ಹೊರತು, ಆರಾಧನೆ ಮಾಡಬಾರದು. 'ಹೊಸ ಮನುಷ್ಯ' ದಲ್ಲಿ ಸಂಜಯ ಪಲ್ಲೀಕರ್ ಅವರು ಹಲವು ಸಾರಿ ಗಾಂಧೀಜಿಯವರನ್ನು ಕುರಿತು ಬರೆದ ಲೇಖನಗಳನ್ನು ಪುಸ್ತಕ ರೂಪದಲ್ಲಿ ತರಬಹುದಾದಷ್ಟು ಚೆನ್ನಾಗಿವೆ. ಪ್ರಸ್ತುತ ಸಂದರ್ಭದ ನಮ್ಮ ಸಾಹಿತ್ಯ ಸಂಸ್ಕೃತಿಗಳನ್ನು ವಿಶ್ಲೇಷಿಸಿ ಎಚ್ಚೆಸ್ಸಾರ್ ಅವರು ಬರೆದಿರುವ ಲೇಖನ ನಮ್ಮೆಲ್ಲರನ್ನು ಎಚ್ಚರದಿಂದ ಇರುವಂತೆ ಮಾಡುತ್ತದೆ. ಹನೂರರು ಓದುಗರೆಲ್ಲರಿಗೂ ಕೋಳಿವಾಡದ ದರ್ಶನ ಮಾಡಿಸಿದ್ದಕ್ಕೆ ವಂದನೆಗಳು.

ಜೆರೂಸಲೇಮ್‌ನಲ್ಲಿ ಜನ್ನ, ಪೋಲೆಂಡಿನಲ್ಲಿ ಪಂಪನ ಕಂಪನ್ನು ಪಸರಿಸಿದ ವಿವೇಕ ರೈಗಳನ್ನು ಅಭಿನಂದಿಸಿ ಸಂಭ್ರಮಿಸುವಾಗಲೇ ಮರುಕ್ಷಣ ಕನ್ನಡ ನಾಡಲ್ಲೆ ರನ್ನ, ಜನ್ನ, ಪಂಪರು ಅಪರಿಚಿತರಾಗುತ್ತಿರುವುದನ್ನು ನೆನೆದು ಮನಸ್ಸು ಮುದುಡುತ್ತದೆ.

ಎಲ್ಲ ಸರಿ, ಇಷ್ಟೆಲ್ಲಾ ಸಮೃದ್ಧ, ವಿಚಾರ ಪ್ರಚೋದಕ ಪತ್ರಿಕೆ, ಕನ್ನಡ ಬಲ್ಲ ಪ್ರತಿಯೊಂದು ಕಾಲೇಜು, ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲೂ ಇರಬೇಕು. ಇದ್ದರೆ ಯುವ ಪೀಳಿಗೆಯ ಕೆಲವರಾದರೂ ಕಣ್ಣಾಡಿಸಿ ಓದಲು ಪ್ರಾರಂಭಿಸುತ್ತಾರೆ. ಆದರೆ ಜಡತ್ವದಿಂದ ಸತ್ತಂತಿರುವವರನ್ನು ಬಡಿದೆಬ್ಬಿಸುವರಾರು?

**–ಸಿ.ಚನ್ನಬಸವಣ್ಣ,** ಬಳ್ಳಾರಿ

ಗಾಂಧಿ ಮತ್ತು ಮಾರ್ಕ್ಸ್, ಗಾಂಧಿ ಮತ್ತು ಅಂಬೇಡ್ಕರ್ ನಂತಹ ಮಹತ್ವದ ಲೇಖನಗಳು ನಮ್ಮ ಇದುವರೆಗಿನ ಸಂಕುಚಿತ ಸೆಕ್ಟೇರಿಯನ್ ಹಾಗೂ ಎದುರು–ಬದುರಾಗಿ ನಿಂತ ಬೈನರಿ ಓದುಗಳಿಂದ ನಮ್ಮನ್ನು ಹೊರತಂದು ನಮ್ಮೊಳಗೆ ಹೊಸ ತಿಳಿವನ್ನು ಉದ್ದೀಪಿಸುತ್ತವೆ. ಹಾಗೆಯೆ ಗಾಂಧಿ–ಟ್ಯಾಗೋರರ ಪ್ರಸ್ತುತತೆ, ಎಚ್.ಎಸ್. ರಾಘವೇಂದ್ರರಾವ್ ಹಾಗೂ ಕೆ.ಸತ್ಯನಾರಾಯಣ ಅವರ ಲೇಖನಗಳು ವಿಚಾರ ಪ್ರಚೋದಕವಾಗಿವೆ. ಎಮ್.ಎಸ್.ಶ್ರೀರಾಮ್ ಅವರ 'ಸತ್ಯಾಗ್ರಹ ಸೌಧ' ಕಥೆಯಂತು ಸದ್ಯದ ರಾಜಕಾರಣದ ದುರಂತವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಇವೆಲ್ಲವೂ ನಮ್ಮೊಳಗೆ 'ಹೊಸ ಮನುಷ್ಯ'ನನ್ನು ರೂಪಿಸಬಲ್ಲ ಹೊಸ ಚಿಂತನಶೀಲ ಚೈತನ್ಯವನ್ನು ಹೊಂದಿವೆ.

ಲಕ್ಷ್ಮೀಶ ತೋಳ್ಪಾಡಿಯವರು ನಮ್ಮ ನಡುವಿನ ಸೂಕ್ಷ್ಮಗ್ರಾಹೀ ವಿದ್ವಾಂಸರು. ಅವರ 'ಅದ್ವೈತದ ಹೆಜ್ಜೆ ಗುರುತುಗಳು' ಲೇಖನ ಈ ಜಗತ್ತನ್ನು ಅರ್ಥೈಸುವ ಬುದ್ಧ, ಶಂಕರ ಹಾಗೂ ಮಧ್ವರ ಸೂಕ್ಷ್ಮ ಗ್ರಹಿಕೆಗಳನ್ನು ತಾತ್ವಿಕವಾಗಿ ಮುಂದಿಡುತ್ತಾ ಹೋದರೂ, ಕೊನೆಯಲ್ಲಿ ಮಧ್ವಾಚಾರ್ಯರ ದಾರ್ಶನಿಕತೆಯನ್ನು ಸಮರ್ಥಿಸುವ ಪ್ರಯತ್ನವಾಗಿ ಕಾಣುತ್ತದೆ. ಮಧ್ವಾಚಾರ್ಯರು ಜೀವಗಣದಲ್ಲಿ ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರು ಎಂಬ ವಿಂಗಡಣೆಯನ್ನು ಮಾಡುತ್ತಾರೆ. ಈ ವಿಂಗಡಣೆಯನ್ನು ಮಾಡಿದವರಲ್ಲಿ ಮಧ್ವರು ಮೊದಲಿಗರೇನಲ್ಲ ಮತ್ತು ಇದು ಅವರ ಸ್ವತಂತ್ರ ಕಲ್ಪನೆಯೂ ಅಲ್ಲ. ಇದು ಜೈನಧರ್ಮದಲ್ಲಿ, ಈಶಾವಾಸ್ಯೋಪನಿಷತ್ತಿನಲ್ಲಿ, ಸ್ವಯಂ ಭಗವಂತನಾಡಿದ ಭಗವದ್ಗೀತೆಯಲ್ಲಿ ಅನುರಣಿಸಿದೆ ಎನ್ನುತ್ತಾರೆ ತೋಳ್ಪಾಡಿಯವರು. ಜೊತೆಗೆ 'ಯಾರು ಎಂಥವರೋ ಅವರು ಅಂಥವರೇ ಆಗುತ್ತಾರೆ ಎನ್ನುವುದಷ್ಟೆ ಮಥಿತಾರ್ಥ' ಎಂದೂ ವ್ಯಾಖ್ಯಾನಿಸುತ್ತಾರೆ. ಬಹುಶಃ ಈ ಮೂರು ಜೀವಗಣಂಗಳಲ್ಲಿನ ಭೇದ ಶಾಶ್ವತವಾದದ್ದು ಎನ್ನುವುದಷ್ಟೆ ಈ ವ್ಯಾಖ್ಯಾನದ ಮಥಿತಾರ್ಥ ಇರಬಹುದು.

ಇದಿಷ್ಟೇ ಆಗಿದ್ದರೆ ಲಕ್ಷ್ಮೀಶ ತೋಳ್ಪಾಡಿಯವರ ಉತ್ಸುಕ ಸಮರ್ಥನೆಯ ಇಂಗಿತವನ್ನು ಅರ್ಥಮಾಡಿಕೊಳ್ಳಬಹುದಿತ್ತು, ಆದರೆ ಮುಂದುವರೆದು ಹೇಳುತ್ತಾರೆ: 'ಚೋದ್ಯವೆಂದರೆ ಕೃಷ್ಣನನ್ನು ಮೆಚ್ಚುವವರು, ಉಪನಿಷತ್ತನ್ನು ಹೊಗಳುವವರು–ಮಧ್ವರನ್ನು ಮಾತ್ರ ಈ ಕಾರಣಕ್ಕೆ ಕಟುವಾಗಿ ಟೀಕಿಸುವರು. ನಗಬೇಕಷ್ಟೆ!' ಆದರೆ ಮನುಷ್ಯರನ್ನು ವಿಭಜಿಸುವ ಯಾವುದೇ ತತ್ವ ಅದು ಮಧ್ವರಿರಲಿ, ಜೈನಧರ್ಮವಿರಲಿ, ಉಪನಿಷತ್ತೇ ಇರಲಿ ಅಥವಾ ಸ್ವಯಂ ಭಗವಂತನಾಡಿದ ಗೀತೆಯೇ ಆಗಿರಲಿ–ಅದು ಜೀವವಿರೋಧಿಯೇ ಆಗುತ್ತದೆ ಮತ್ತು ಖಂಡನೀಯವೂ ಆಗಿರುತ್ತದೆ. ಇದು ನಗಬೇಕಾದ ಸಂಗತಿಯಲ್ಲ; ಬದಲಿಗೆ ವಿಷಾದನೀಯವಾದದ್ದು.

**–ಸಾಸ್ವೆಹಳ್ಳಿ ಶಿವಾನಂದ,** ಬೆಂಗಳೂರು

ವಿಶೇಷ ಸಂಚಿಕೆ ಹಲವು ಕಾರಣಗಳಿಂದ ಗಮನ ಸೆಳೆಯುತ್ತದೆ.. ಪ್ರತಿಯೊಂದು ಲೇಖನವನ್ನು ಓದುವಾಗಲೂ ಅನೇಕ ಭಾವಗಳು ಉಕ್ಕಿವೆ. ಒಮ್ಮೆ ವ್ಯಗ್ರಭಾವ, ಮತ್ತೊಮ್ಮೆ ವಿಷಾದ, ಮಗದೊಮ್ಮೆ ಹೊಸ ಒಳನೋಟವೊಂದು ಸಿಕ್ಕ ಖುಷಿ–ಹೀಗೆ ಹಲವಾರು ಭಾವಗಳ ಸಂಚಾರವನ್ನು ಅನುಭವಿಸಿದ್ದೇನೆ.

ನಿಮ್ಮ ಸಂಪಾದಕೀಯ ಟಿಪ್ಪಣಿಗಳು ನನಗೆ ಅಚ್ಚು ಮೆಚ್ಚು. ಸಾಮಾಜಿಕ ನ್ಯಾಯವನ್ನು ಅಥವಾ ಸಿದ್ಧಾಂತದ ಪಕ್ಷಪಾತವನ್ನು ಅನುಸರಿಸಿ ಪೊಲಿಟಿಕಲ್ ಕರೆಕ್ಟೆನೆಸ್‌ಗಾಗಿ ಸತ್ಯವನ್ನು ಬಲಿಕೊಡುವವರು ನೀವಲ್ಲ. ಸಮಕಾಲೀನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸರಿಯಾಗಿಯೇ ಒರೆಗೆ ಹಚ್ಚುತ್ತೀರಿ. ಇದರಿಂದ ನಿಮಗೆ ಏಕಕಾಲಕ್ಕೆ ಪ್ರಗತಿಶೀಲರೂ ಮತ್ತು ಸಂಪ್ರದಾಯವಾದಿಗಳ ವಿರೋಧವಿದ್ದರೂ ಹೇಳಬೇಕಾದ್ದನ್ನು ಹೇಳಿಯೇ ತೀರುತ್ತೀರಿ.

ಜನಪ್ರಿಯ ಧಾಟಿಗೆ ಬಲಿಯಾಗದೆ ಯುವಜನರ ಮನಸ್ಸನ್ನು ತಲುಪಲು ಸೂಕ್ತವಾದ ವಿಚಾರಗಳ ಲೇಖನಗಳು ಇಡೀ ಸಂಚಿಕೆಯಲ್ಲಿ ತುಂಬಿವೆ. ಚಿಂತಕ ಜಿ. ರಾಜಶೇಖರ್ ಅನುವಾದಿಸಿರುವ ಗಾಂಧಿ ವಿದ್ವಾಂಸ ಅಕೀಲ್ ಬಿಲ್ಗ್ರಾಮಿ ಓದುಗರಿಗೊಂದು ಬೋನಸ್. ಹಿರಿಯರಾದ ಪ್ರೊ. ಎಚ್. ಎಸ್. ರಾಘವೇಂದ್ರರಾವ್ ಅವರ 'ವಿಶ್ವಮಾನವ' ಮತ್ತು 'ಗ್ಲೋಬಲ್ ವಿಲೇಜ್' ಇವುಗಳ ಹಗ್ಗ ಜಗ್ಗಾಟದಲ್ಲಿ 'ಕನ್ನಡ ಸಾಹಿತ್ಯ' ಒಂದು ವಿಶಿಷ್ಟ ಒಳನೋಟಗಳ ಲೇಖನ. ನಮ್ಮ ಕಾಲದ ದುರಾದೃಷ್ಟವೆಂದರೆ ಗಾಂಧಿ ಮತ್ತು ಅಂಬೇಡ್ಕರ್ ಸಿದ್ಧಾಂತಗಳ ನಡುವಿನ ವ್ಯತ್ಯಾಸಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಅವರನ್ನು ಪರಮಶತ್ರುಗಳೆಂಬಂತೆ ನಂಬುತ್ತಿರುವ ಯುವಜನರ ಸಂಖ್ಯೆ ಏರುತ್ತಿರುವುದು. ಅದರಲ್ಲೂ ಗಾಂಧಿ ಬ್ಯಾಷಿಂಗ್ ವ್ಯಸನವೆನ್ನುವಷ್ಟರ ಮಟ್ಟ ತಲುಪಿದೆ. ಗಾಂಧಿ–ಅಂಬೇಡ್ಕರ್ ಮುಖಾಮುಖಿ (ಸಂಜಯ್ ಪಲ್ಲೀಕರ್/ಎಂ.ರಾಜು) ಲೇಖನ ಈ ದಿಕ್ಕಿನಲ್ಲಿ ಗಾಂಧಿಯ ವಿಚಾರ ಒಪ್ಪದವರು ಕನಿಷ್ಠ ಅವರಿಬ್ಬರ ಸಂಕಥನಗಳು ಬೇರೆ ಬೇರೆ ಎಂಬ ತಿಳಿವನ್ನಾದರೂ ಮೂಡಿಸಬಲ್ಲವೇ, ನೋಡಬೇಕು.

ಸಾಹಿತ್ಯ, ಸಂಸ್ಕೃತಿ, ವಿಚಾರ, ರಾಜಕೀಯ, ಆರ್ಥಿಕತೆ ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದ ಲೇಖನಗಳ ಜೊತೆಗೆ ವಾಗ್ವಾದಗಳನ್ನು ಹುಟ್ಟುಹಾಕುತ್ತಿರುವ ಹೊಸ ಮನುಷ್ಯದ ಪ್ರಯತ್ನವು ಪತ್ರಿಕೆಗಳ ಸಮೂಹದಲ್ಲಿ ವಿಶಿಷ್ಟವಾದುದು.

**–ಡಾ. ಕೆ.ಪುಟ್ಟಸ್ವಾಮಿ,** ಬೆಂಗಳೂರು

**(ಇನ್ನೆರಡು ಪತ್ರಗಳಿಗಾಗಿ ೧೧ನೇ ಪುಟ ನೋಡಿ)**

# ಕೊನೆಯುಸಿರಿನವರೆಗೂ ಜೀವ ತೇಯುವ ಹಿರಿಜೀವಗಳು!

–ಸುಶಿ ಕಾಡನಕುಪ್ಪೆ




'ಕರೆಂಟ್ ಬಿಲ್ಲು, ವಾಟರ್ ಬಿಲ್ಲು ಕಟ್ಟೇ ಇಲ್ಲ. ಇವತ್ತೇ ಕೊನೆ ದಿನ. ಹೋಗ್ಲಿ ಕೊಡು ನಾನೇ ಹೋಗಿ ಕಟ್ಟಿ ಬರ್ತೀನಿ' ಹಿರಿಯ ದಂಪತಿ ಪ್ರತಿ ತಿಂಗಳು ಇದನ್ನೇ ಮಾತನಾಡಿಕೊಳ್ಳುತ್ತಾರೆ. ತಮ್ಮ ಇಬ್ಬರು ಗಂಡು ಮಕ್ಕಳನ್ನು ಈ ದಂಪತಿ ಬೆಳೆಸಿ ವಿದ್ಯಾವಂತರನ್ನಾಗಿ ಮಾಡಿದ್ದಾಯ್ತು. ಈಗ ಒಳ್ಳೇ ಕೆಲಸದಲ್ಲಿದ್ದಾರೆ. ಒಳ್ಳೆ ಸಂಬಳ ತರುವ ವಿದ್ಯಾವಂತ ಹುಡುಗಿಯರನ್ನು ಮದುವೆಯಾಗಿ ಕೈತುಂಬಾ ದುಡಿಯುತ್ತಿದ್ದಾರೆ. ಮೊಮ್ಮಕ್ಕಳು ಮನೆ ತುಂಬಿದ್ದಾರೆ. 'ನಮ್ಮ ಸಂಸಾರ ಆನಂದ ಸಾಗರ' ಎಂದು ನೆಮ್ಮದಿಯಿಂದ ಇರುವ ವಯಸ್ಸಿನಲ್ಲಿ ರಂಗಪ್ಪ ಕಮಲ ದಂಪತಿಗೆ ಮನೆ ಜವಾಬ್ದಾರಿ ಮೊದಲಿಗಿಂತಲೂ ಹೆಚ್ಚಾಗಿದೆ. ಮೊಮ್ಮಕ್ಕಳನ್ನು ಶಾಲೆಗೆ ಕರೆದೊಯ್ಯುವುದು, ಬಿಲ್ ಪಾವತಿ, ತರಕಾರಿ, ದಿನಸಿ, ಅಡುಗೆ, ಕಂದಾಯ ಇತ್ಯಾದಿ ದಿನನಿತ್ಯದ ಸಂಸಾರ ನಡೆಸುವ ಹೊಣೆ ಬಹುಪಾಲು ಈ ಹಿರಿಯ ದಂಪತಿಗಳದ್ದೇ. ಆಯಾಸವಾದರೂ 'ನಮ್ಮ ಮಕ್ಕಳಿಗೆ ತಾನೆ' ಎಂದು ಮಾಡುತ್ತಾರೆ.

ಕೆಲವೊಮ್ಮೆ ಮಗ–ಸೊಸೆಯಂದಿರಿಂದ ಬೈಗುಳಗಳ ಸುರಿಮಳೆಯೂ ಆಗುತ್ತದೆ. 'ಏನಮ್ಮ ನಿಮಗೆ ಇಷ್ಟೂ ಗೊತ್ತಾಗಲ್ವ? ಎಷ್ಟು ಹೇಳಿದರೂ ಯಾಕೆ ನೀವು ಹೀಗೆ? ಯಾಕೆ ಹೇಳಿದ್ದೇ ಹೇಳ್ತಾನೆ ಇರ್ತೀರಲ್ಲ. ಸುಮ್ನೆ ಇರಕಾಗಲ್ವಾ? ನಿಮ್ಮ ಮಾತು ಕೇಳಿಸ್ಕೊಂಡು ಈ ಮನೇಲಿ ಇರ್ಬೇಕಲ್ಲ'. ಹೀಗೆ. 'ಈ ಮನೆಯ ನಿಜವಾದ ಮಾಲಿಕರಿಗೇ ಈ ಮಾತುಗಳನ್ನು ಆಡುತ್ತಿದ್ದೇವೆ; ವಯಸ್ಸಾದ ವ್ಯಕ್ತಿಗೆ ಮಾನಸಿಕ–ದೈಹಿಕ ಕ್ಷಮತೆ ಕ್ಷೀಣಿಸಿರುತ್ತದೆ' ಎಂಬುದನ್ನೇ ಮರೆಯುತ್ತಾರೆ ಮಕ್ಕಳು.

ಮಗಳು ಚೆನ್ನಾಗಿ ಓದಿ ಹೆಸರಾಂತ ಕಂಪನಿಯೊಂದರಲ್ಲಿ ಉದ್ಯೋಗಿ. ದೊಡ್ಡ ಹೆಸರು ಮಾಡಿ ಕೈತುಂಬ ದುಡಿಯುತ್ತಿದ್ದಾಳೆ. ಅವಳ ಆಸೆಯಂತೆಯೇ ಮದುವೆಯಾಗಿ ಮಗುವಾಗಿದೆ. ಮುದ್ದಾದ ಮೊಮ್ಮಗು, ಚಿನ್ನದಂತಹ ಅಳಿಯ. ಮತ್ತಿನ್ನೇನು ಬೇಕು ಜನ್ಮ ಸಾರ್ಥಕವಾಗಲು. ಮಗುವಿನ ಆರೈಕೆಗೆ ಮಗಳು–ಅಳಿಯನ ಬಳಿ ಸಮಯವಿಲ್ಲ. 'ಬಿಡುವಿಲ್ಲದ ಉದ್ಯೋಗದ ಜವಾಬ್ದಾರಿಗಳು ಅಮ್ಮ' ಎನ್ನುತ್ತಾರೆ. ಮೊಮ್ಮಗುವಿಗೆ ಅಜ್ಜಿ–ತಾತ ಮತ್ತು ಕೆಲಸದ ಹುಡುಗಿಯ ಆರೈಕೆ. ಮಗುವಿನ ಅರಿವಿಗೆ, 'ಅಮ್ಮ–ಅಪ್ಪ ದಿನವೂ ಸ್ವಲ್ಪ ಹೊತ್ತು ನನ್ನ ಜೊತೆ ಆಟವಾಡಿ ನನ್ನ ಆರೈಕೆದಾರರಿಗೆ ನಿರ್ದೇಶನ ಹೇಳಿ ಹೋಗುವ ವ್ಯಕ್ತಿಗಳು'. ಮಗುವಿನ ಲಾಲನೆ ಪಾಲನೆಗೆ ಬೇಕಾಗುವಷ್ಟು ಮಾನಸಿಕ–ದೈಹಿಕ ಕ್ಷಮತೆ ಅರವತ್ತರ ವಯಸ್ಸಿನಲ್ಲಿ ಕಡಿಮೆಯಾಗಿದೆ. ಸುಸ್ತಾಗುತ್ತದೆ. ಆದರೆ ಮಗುವಿನ ಪಾಲನೆಗೆ ಯಾವುದೇ ಸಬೂಬು ಕೊಡಲಾಗದ ಅನಿವಾರ್ಯ ಪರಿಸ್ಥಿತಿ. ಮಗಳಿಗೆ ಅಮ್ಮನನ್ನು ನೋಡಿ ಅಯ್ಯೋ ಎನಿಸುತ್ತದೆ. ಆದರೆ ಅದು ಮಾತುಗಳಲ್ಲೇ ಮುಗಿದುಹೋಗುತ್ತದೆ. ಎಂದಿನಂತೆ ತನ್ನ 'ಬ್ಯುಸಿ' ಜೀವನಕ್ಕೆ ಇಳಿದುಬಿಡುತ್ತಾಳೆ.

ಮದುವೆಯಾಗಿ ಮೂರು ವರ್ಷಗಳಾದ ಮೇಲೆ ಮಗು ಮಾಡಿಕೊಂಡ ದಂಪತಿ. ಸೊಸೆಗೆ ಅತ್ತೆ ಜೊತೆ ಹೊಂದಿಕೊಳ್ಳಲು ಆಗುತ್ತಿಲ್ಲ. ಎಲ್ಲದಕ್ಕೂ ಅಸಹನೆ. ಆಗ ಮನೆಯಲ್ಲಿ ಜಗಳ ರಂಪಾಟ. ಇದರಿಂದ ಗಾಬರಿಗೊಳ್ಳುವ ಮಗುವೂ ತನ್ನ ದನಿ ಸೇರಿಸಿ ಜೋರಾಗಿ ಅಳುವುದು ದಿನನಿತ್ಯದ ಬದುಕಾಗಿ ಬಿಟ್ಟಿದೆ. ಹೇಗೋ ನಾಲ್ಕು ವರ್ಷಗಳು ಉರುಳಿವೆ. ಈಗ ಎರಡನೆ ಮಗುವಾಗಿದೆ. ಸೊಸೆಗೆ ಈಗ ತಡೆಯಲಾಗುತ್ತಿಲ್ಲ. ಬೇರೆ ಮನೆ ಮಾಡಲೇಬೇಕು ಎಂದು ಹಟ ಹಿಡಿದು ಈ ಮನೆಯಿಂದ ಎರಡು ರಸ್ತೆಯಾಚೆಗೆ ಬಾಡಿಗೆ ಮನೆ ಮಾಡುತ್ತಾರೆ. ಮನೆಕೆಲಸಕ್ಕೆ ಒಬ್ಬಳು, ಮಗುವಿನ ಆರೈಕೆಗೆ ಒಬ್ಬಳು ಕೆಲಸದವಳನ್ನು ಇರಿಸಿಕೊಂಡಿದ್ದಾರೆ. ರಸ್ತೆಯಾಚೆಗೆ ಅತ್ತೆ ಮಾವನವರಿದ್ದರೂ ಅವರೇನೂ ಇಲ್ಲಿಗೆ ಬರಲು ಅವಕಾಶವಿಲ್ಲ. ಸೊಸೆ ಈಗ ಮನೆಯಿಂದಲೇ ಐಟಿ ಕೆಲಸವನ್ನು ಮಾಡಲು ಶುರು ಮಾಡಿದ್ದಾಳೆ. ಮಗುವಿಗೆ ಇನ್ನೂ ಒಂದು ವರ್ಷ. 'ಇಬ್ಬರು ಮಕ್ಕಳ ಆರೈಕೆಯೂ ಮಾಡಬೇಕು, ಉದ್ಯೋಗವೂ ಬೇಕು' ಎನ್ನುವ ಸೊಸೆಯ ಮನಸ್ಥಿತಿ ಯಾವ ಕೆಲಸವನ್ನೂ ಸರಿಯಾಗಿ ಮಾಡದ ಅವಸ್ಥೆಗೆ ಇಳಿದಿದೆ. ಇದರಿಂದ ಗೊಂದಲಕ್ಕೊಳಗಾಗುವ ಆಕೆ 'ನಾನು ಎಲ್ಲವನ್ನೂ ನಿಭಾಯಿಸುತ್ತಿದ್ದೇನೆ' ಎಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಾಳೆ. ಮಕ್ಕಳ ಆರೈಕೆಗೆ ಗಂಡ ಎಷ್ಟು ಜೊತೆ ಕೊಟ್ಟರೂ ತಾಯಿಯ ಆರೈಕೆಗೆ ಮಕ್ಕಳು ಹಾತೊರೆಯುತ್ತವೆ. 'ಅತ್ತೆಯವರ ಜೊತೆ ಇದ್ದಾಗಲೇ ಚೆನ್ನಾಗಿತ್ತು' ಎಂದು ಸೊಸೆಗೆ ಒಮ್ಮೊಮ್ಮೆ ಅನಿಸುತ್ತದೆ. ಆದರೆ ಆಕೆಯ ಯೌವನದ ಅಹಂ ಅದನ್ನು ಒಪ್ಪಿಕೊಳ್ಳಲು ಬಿಡದು. ಅತ್ತೆಯವರಿಗೆ ಸೊಸೆಗೆ ಸಹಾಯ ಮಾಡುವ ಮನಸ್ಸಿದ್ದರೂ ಸಹಾಯವನ್ನು ಖಡಾಖಂಡಿತವಾಗಿ ತಿರಸ್ಕರಿಸುವ ಸೊಸೆಯನ್ನು ನೆನೆದು ಭಯಗೊಳ್ಳುತ್ತಾರೆ. ತಮ್ಮ ಅಸಹಾಯಕತೆ ಮತ್ತು ಅವಮಾನವನ್ನು ಒಳಗೇ ನುಂಗಿಕೊಳ್ಳುತ್ತಾರೆ. ಇಳಿವಯಸ್ಸಿನ ದಂಪತಿ ಆರೋಗ್ಯ ತಪಾಸಣೆಗೆ ಹೋಗಿ ಎರಡು ವರ್ಷಗಳೇ ಆಗಿವೆ. ಬೆಂಗಳೂರಿನ ಆಸ್ಪತ್ರೆಗಳಿಗೆ ಒಬ್ಬರೇ ಹೋಗಲು ಕಷ್ಟ. ಮಗನಿಗೆ ಕಾಯಬೇಕು. ಆದರೆ ಆತನಲ್ಲಿ ಸಮಯವಿಲ್ಲ.

ಮೇಲಿನ ಸನ್ನಿವೇಶಗಳು ನಮ್ಮ 'ಬಿಡುವಿಲ್ಲದ' ನಗರ ಜೀವನದ ದಿನನಿತ್ಯದ ಚಿತ್ರಣವೇ ಆಗಿವೆ. ನಮ್ಮಂತಹ ಬಿಡುವಿಲ್ಲದ ಉದ್ಯೋಗಸ್ಥ ಗೃಹಸ್ಥರ ನಡುವೆ ಬದುಕುತ್ತಿರುವ ಹಿರಿಯ ಜೀವಿಗಳ ಸಮಸ್ಯೆಗಳು ಅಪಾರ. ನಾವು ಈಗ ನಮ್ಮ ಹಿರಿಯರಿಗಿಂತ ಹೆಚ್ಚು ಬುದ್ಧಿವಂತರು, ಪ್ರಗತಿಪ್ರಿಯರು, ಆರ್ಥಿಕ ಸುಭದ್ರತೆಯುಳ್ಳವರೂ ಆಗಿದ್ದೇವೆ ಎಂದು ಹೆಮ್ಮೆ ಪಡುತ್ತೇವೆ ಅಲ್ಲವೆ?. 'ನಿಮ್ಮ ಕಾಲದ ಹಾಗೆ ಅಲ್ಲ, ಈಗ



## ಸೆಪ್ಟಂಬರ ೨೮ರ ಭಾನುವಾರ ಬೆಂಗಳೂರಿನಲ್ಲಿ 'ಗಾಂಧಿ ಉತ್ಸವ'

ಬೆಂಗಳೂರಿನ ಎಂ. ಚಂದ್ರಶೇಖರ ಪ್ರತಿಷ್ಠಾನ ಮತ್ತು ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನಗಳು ಸೇರಿ ಸೆಪ್ಟಂಬರ್ ೨೮ರ ಭಾನುವಾರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ ೧೦ ಘಂಟೆಯಿಂದ ಆರಂಭವಾದಂತೆ ಗಾಂಧಿಯವರ ೧೪೫ನೇ ಜನ್ಮೋತ್ಸವ ಆಚರಣೆಯ ಅಂಗವಾಗಿ ಶ್ರೀ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಗಾಂಧೀಜಿಗೆ ಪ್ರಿಯವಾಗಿದ್ದ ಗೀತೆಗಳ ಗಾಯನ ಮತ್ತು ನಾಟಕ ಪ್ರದರ್ಶನಗಳನ್ನೊಳಗೊಂಡಂತೆ ಇಡೀ ದಿನದ 'ಗಾಂಧಿ ಉತ್ಸವ ಏರ್ಪಡಿಸಿವೆ.

'ಗಾಂಧಿ ಕಥನ' ಪುಸ್ತಕವನ್ನು ಕನ್ನಡದ ಹಿರಿಯ ಲೇಖಕ ಶ್ರೀ ದೇವನೂರ ಮಹಾದೇವ ಬಿಡುಗಡೆ ಮಾಡುವರು. ಅಧ್ಯಕ್ಷತೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಚ್.ಎಸ್. ದೊರೆಸ್ವಾಮಿಯವರದ್ದು, ಚಿಂತಕ ಡಾ, ನಿತ್ಯಾನಂದ ಬಿ. ಶೆಟ್ಟಿ ಪುಸ್ತಕದ ಬಗ್ಗೆ ಮಾತಾಡುವರು. ಎಂ. ಚಂದ್ರಶೇಖರ ಪ್ರತಿಷ್ಠಾನದ ಶ್ರೀಮತಿ ಸರೋಜಾ ಚಂದ್ರಶೇಖರ್ ಉಪಸ್ಥಿತರಿರುವರು.

'ಇಂದಿಗೆ ಬೇಕಾದ ಗಾಂಧಿ' ವಿಷಯವಾಗಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ವಿಚಾರ ಗೋಷ್ಠಿಗಳಿದ್ದು ಅವುಗಳಲ್ಲಿ ಸರ್ವಶ್ರೀ ಸುಧೀಂದ್ರ ಕುಲಕರ್ಣಿ, ಜಿ.ಎನ್. ದೇವಿ, ಎಸ್. ಚಂದ್ರಶೇಖರ, ರಾಜೇಂದ್ರ ಚೆನ್ನಿ ಮತ್ತು ಲಕ್ಷ್ಮೀಶ ತೋಳ್ಪಾಡಿಯವರು ಭಾಗವಹಿಸುವರು.

ಇವುಗಳ ಜೊತೆಗೇ ಶ್ರೀಮತಿ ಸಂಗೀತ ಕಟ್ಟಿಯವರಿಂದ ಗೀತೆಗಳ ಗಾಯನ ಹಾಗೂ ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧಾರಿತ 'ಪಾಪು–ಬಾಪು' ನಾಟಕ ಪ್ರದರ್ಶನವಿರುತ್ತದೆ. ನಿರ್ದೇಶನ : ಶ್ರೀಪಾದ ಭಟ್. ಈ ಸಂದರ್ಭದ ಸಂವಾದ ಕಾರ್ಯಕ್ರಮದಲ್ಲಿ ಸರ್ವಶ್ರೀ ವುಡೇ ಪಿ. ಕೃಷ್ಣ, ಪ್ರಸನ್ನ, ಎನ್. ಆರ್. ವಿಶುಕುಮಾರ್ ಹಾಗೂ ಅರವಿಂದ ಚೊಕ್ಕಾಡಿ ಹಾಜರಿರುತ್ತಾರೆ


**ತಮಗೆಲ್ಲರಿಗೂ ಆದರದ ಸ್ವಾಗತ**

**ಪ್ರಚಲಿತ**

# ಜಮ್ಮು ಮತ್ತು ಕಾಶ್ಮೀರ: ಮುಂದೇನು?

**–ಸುಧೀಂದ್ರ ಕುಲಕರ್ಣಿ**

**ಸಂವಿಧಾನದ ೩೭೦ನೇ ವಿಧಿಯ ರದ್ದತಿಯ ಆದೇಶವನ್ನು ಹಿಂತೆಗೆದುಕೊಳ್ಳುವಂತಿಲ್ಲ. ಆದರೆ ಕಾಶ್ಮೀರಕ್ಕೆ ಶಾಶ್ವತ ಪರಿಹಾರವನ್ನೊದಗಿಸಲು ಭಾರತ-ಪಾಕಿಸ್ತಾನದ ನಡುವೆ ಮುತ್ಸದ್ದಿ ರಾಜಕಾರಣದ ಅವಶ್ಯಕತೆಯಿದೆ.**



**ಸಂ**ವಿಧಾನದ ೩೭೦ನೇ ವಿಧಿಯ ರದ್ದತಿಯ ಬಗ್ಗೆ ಮೊದಲು ನನ್ನ ನಿಲುವನ್ನು ಸ್ಪಷ್ಟಪಡಿಸಿ ಮುಂದುವರೆಯುತ್ತೇನೆ.ಈ ವಿಧಿಯ ರದ್ದತಿಯನ್ನು ಯೋಗ್ಯ ರೀತಿಯಲ್ಲಿ ಅನುಷ್ಠಾನಗೊಳಿಸುವುದನ್ನುನಾನು ಬೆಂಬಲಿಸುತ್ತೇನೆ. ನರೇಂದ್ರ ಮೋದಿಯವರ ಸರ್ಕಾರ ಇದನ್ನು ನಿರ್ವಹಿಸಿರುವ ರೀತಿಯು ನಿರ್ವಿವಾದವಾಗಿ ತಪ್ಪು ಹಾಗೂ ಪ್ರಜಾಪ್ರಭುತ್ವ ವಿರೋಧಿಯಾದದ್ದುಎಂದೂ ನಾನು ಹೇಳಬಯಸುತ್ತೇನೆ. ಆದಷ್ಟು ಬೇಗ ಕಾಶ್ಮೀರದಲ್ಲಿ ಶಾಂತಿ ಮತ್ತು ಸಹಜತೆಗಳನ್ನು ಪುನರ್‌ಸ್ಥಾಪಿಸುವ ಮೂಲಕ ತನ್ನ ಈ ತಪ್ಪನ್ನು ಅದು ಸರಿಪಡಿಸಿಕೊಳ್ಳಬೇಕಿದೆ. ಆದಷ್ಟು ಬೇಗ ಬಂಧನದಲ್ಲಿರುವ ಪ್ರಮುಖ ರಾಜಕೀಯ ನಾಯಕರುಗಳನ್ನು ಬಿಡುಗಡೆಗೊಳಿಸಬೇಕು; ಕಣಿವೆಯಲ್ಲಿ ಸಂವಹನ ಸೇವೆಗಳನ್ನು ಪುನರಾರಂಭಿಸಬೇಕು; ವಿಶೇಷಾಧಿಕಾರವನ್ನು ಕಳೆದುಕೊಂಡಿರುವ ಜಮ್ಮು ಮತ್ತು ಕಾಶ್ಮೀರದ ಪ್ರಜೆಗಳಿಗೆ, ಆದಷ್ಟು ಬೇಗ, ಕೇಂದ್ರಾಡಳಿತ ಕೊನೆಗೊಂಡು ಪೂರ್ಣಪ್ರಮಾಣದಲ್ಲಿ ರಾಜ್ಯದ ಸ್ಥಾನಮಾನವನ್ನು ಗಳಿಸುತ್ತದೆಂಬ ಸಮಯಾಧಾರಿತ ಭರವಸೆಯನ್ನು ಕೊಡಬೇಕು. ಕಾಶ್ಮೀರಿಗಳು ಭಾರತೀಯರೇ; ಆದ್ದರಿಂದ, ಅವರನ್ನು ಅನುಮಾನಿಸುವುದನ್ನಾಗಲೀ, ಬಲಾತ್ಕರಿಸುವುದನ್ನಾಗಲೀ ಯಾವ ರೀತಿಯಿಂದಲೂ ಸಮರ್ಥಿಸಲು ಸಾಧ್ಯವಿಲ್ಲ.

ಆದಾಗ್ಯೂ, ಈ ನಿರ್ಧಾರಗಳ ಹಿಂದಿನ ಮೂಲಭೂತ ಉದ್ದೇಶಗಳಿಗಿಂತ ಹೆಚ್ಚಾಗಿ, ಮೋದಿ ಸರ್ಕಾರ ಅನುಸರಿಸಿದ ಮಾರ್ಗದ ಮೇಲೆ ಮಾತ್ರ ಚರ್ಚೆಯನ್ನು ನಡೆಸುವುದರಿಂದ ಯಾವ ಪ್ರಯೋಜನವೂ ಇಲ್ಲ. ೩೭೦ನೇ ವಿಧಿಯನ್ನು ಕೈಬಿಟ್ಟು, ಭಾರತೀಯ ಒಕ್ಕೂಟದಲ್ಲಿ ಜಮ್ಮು–ಕಾಶ್ಮೀರವನ್ನು ಸಾಂವಿಧಾನಿಕವಾಗಿ ಸಂಪೂರ್ಣ ಸೇರ್ಪಡೆಗೊಳಿಸಿರುವುದರ ಸಕಾರಾತ್ಮಕ ಅಂಶವೆಂದರೆ, ಕಾಶ್ಮೀರದ 'ಆಜಾದಿ'ಯ (ಸ್ವಾತಂತ್ರ್ಯದ) ಬೇಡಿಕೆಗೆ ಯಾವುದೇ ಆಧಾರವಾಗಲೀ ಅವಕಾಶವಾಗಲೀ ಇಲ್ಲದಂತೆ ಇತಿಶ್ರೀ ಹಾಡಿರುವುದು. ಭಾರತ ಮತ್ತು ಪಾಕಿಸ್ತಾನದಿಂದ ಸ್ವತಂತ್ರವಾದ 'ಮುಕ್ತ ಕಾಶ್ಮೀರ' ಕಲ್ಪನೆಗೆ ಯಾವುದೇ ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ಅಥವಾ ರಾಜಕೀಯ ಆಧಾರ ಯಾವತ್ತೂ ಇರಲಿಲ್ಲ.

೧೯೪೭ರಲ್ಲಿ ಗೊಂದಲಮಯವಾದ ರೀತಿಯಲ್ಲಿ ನಡೆದ ಭಾರತ ವಿಭಜನೆ ಮತ್ತು ಜಮ್ಮು–ಕಾಶ್ಮೀರಗಳ ಸೇರ್ಪಡೆಯ ನೀತಿಗಳಲ್ಲಿ ಕಾಶ್ಮೀರ ಸಮಸ್ಯೆಯ ಮೂಲ ಬೇರುಗಳು ಅಡಗಿವೆ. ನಂತರದ ಅನೇಕ ಹಿಂಸಾತ್ಮಕ ಬೆಳವಣಿಗೆಗಳಿಂದ ಈ ಸಮಸ್ಯೆ ಮತ್ತಷ್ಟು ಜಟಿಲಗೊಂಡಿತು. ಇದು ಭಾರತ ಮತ್ತು ಪಾಕಿಸ್ತಾನದ ನಡುವಿನ ಹಗೆತನವನ್ನು ಇನ್ನಷ್ಟು ಹೆಚ್ಚಿಸಿತು.

೧೯೪೪ರಲ್ಲಿ ಗಾಂಧಿ–ಜಿನ್ನಾರ ನಡುವೆ, ಬಾಂಬೆಯಲ್ಲಿ ನಡೆದ ಸುದೀರ್ಘ ಮಾತುಕತೆಯ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ನೀಡಿದ್ದ ವಿವೇಕಯುತ ಸಲಹೆಯನ್ನು ಮೊಹಮ್ಮದ್ ಅಲಿ ಜಿನ್ನಾ ಅವರು ಗಂಭೀರವಾಗಿ ಪರಿಗಣಿಸಿದ್ದರೆ, ೧೯೪೭ರಲ್ಲಿ ಪಾಕಿಸ್ತಾನವು ಸಂಪೂರ್ಣವಾಗಿ ವಿಭಿನ್ನವಾದ, ಒಂದು ಸೌಹಾರ್ದಯುತ, ಶಾಂತಿಯುತ ಒಕ್ಕೂಟದಲ್ಲಿ ಅಸ್ತಿತ್ವಕ್ಕೆ ಬರಬಹುದಿತ್ತು. 'ವಿಭಜನೆ ಅನಿವಾರ್ಯವೇ ಆದರೆ, ಸೋದರರ ನಡುವೆ ನಡೆಯುವಂತೆ ಭಾಗವಾಗಲಿ' ಎಂದು ಗಾಂಧಿ ಜಿನ್ನಾರಿಗೆ ಸಲಹೆಯನ್ನಿತ್ತಿದ್ದರು. ದುಃಖಕರ ವಿಚಾರವೆಂದರೆ, ಮುಸ್ಲಿಮರು ಮತ್ತು ಹಿಂದೂಗಳು ಯಾವುದೇ ಸಮಾನ ಅಂಶಗಳಿಲ್ಲದ ಎರಡು ಪ್ರತ್ಯೇಕ ರಾಷ್ಟ್ರಗಳ ಪ್ರಜೆಗಳೆಂದು ಸಾಧಿಸುವ, ವಿಷಪೂರಿತ 'ಎರಡು ರಾಷ್ಟ್ರಗಳ ಸಿದ್ಧಾಂತ'ಕ್ಕೆ ಜಿನ್ನಾ ಕಟ್ಟುಬಿದ್ದರು.

೧೯೩೦ರಲ್ಲಿ ಅಲಹಾಬಾದ್‌ನಲ್ಲಿ ನಡೆದ ಅಖಿಲ ಭಾರತ ಮುಸ್ಲಿಂ ಲೀಗ್ ಅಧಿವೇಶನದಲ್ಲಿ, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಇಂದಿಗೂ ಪಾಕಿಸ್ತಾನಕ್ಕೆ ಎಷ್ಟು ಸೇರುವರೋ ಅಷ್ಟೇ ಭಾರತಕ್ಕೂ ಸೇರಿದವರಾದ, ಉರ್ದು ಕವಿ ಅಲ್ಲಮ ಇಕ್ಬಾಲ್ ಅವರು, ತಮಗೆ 'ಭಾರತದೊಳಗೊಂದು ಮುಸ್ಲಿಂ ಭಾರತ' ಬೇಕು ಎಂದು ನೀಡದ ಹೇಳಿಕೆ ಗಾಂಧೀಜಿಯವರ ಭಾರತ–ಪಾಕ್ ಮಹಾಸಂಘದ ಪರಿಕಲ್ಪನೆಯನ್ನು ಸ್ಪಷ್ಟಗೊಳಿಸುವಂತೆಯೇ ಇತ್ತು..

ಈ ಆಧಾರದ ಮೇಲೆ ಪಾಕಿಸ್ತಾನವು ಅಸ್ತಿತ್ವಕ್ಕೆ ಬಂದಿದ್ದರೆ, ನಂತರದ ಈ ನಮ್ಮ ಉಪಖಂಡದ ಇತಿಹಾಸವೇ ಸಂಪೂರ್ಣ ಬೇರೆಯಾಗಿರುತ್ತಿತ್ತು. ಪ್ರೀತಿಯನ್ನೇ ಹರಡಿದ ಸೂಫಿ ಸಂತರು ಮತ್ತು ಋಷಿಮುನಿಗಳ ನೆಲೆಯಾದ ಕಾಶ್ಮೀರವು, ಭಾರತ–ಪಾಕ್ ಒಕ್ಕೂಟದ ಭವ್ಯವಾದ ಕಿರೀಟವಾಗಿ ಕಂಗೊಳಿಸುತ್ತಿತ್ತು. ಆದರೇನು ಮಾಡುವುದು, ಇತಿಹಾಸವು ದುರಂತಮಯ ತಿರುವನ್ನು ಪಡೆದುಕೊಂಡುಬಿಟ್ಟಿತು.

ಜಮ್ಮು–ಕಾಶ್ಮೀರದ ಸಂದರ್ಭದಲ್ಲಿ, ವಾಸ್ತವವಾಗಿ 'ಎರಡು ರಾಷ್ಟ್ರಗಳ ಸಿದ್ಧಾಂತ'ವನ್ನು ಇನ್ನಷ್ಟು ವಿಷಮಯಗೊಳಿಸಿದ್ದು 'ಮೂರು ರಾಷ್ಟ್ರಗಳ' ಸಿದ್ಧಾಂತವೆಂದು ಕರೆಯಬಹುದಾದ ಕಲ್ಪನೆ. ಜಮ್ಮು–ಕಾಶ್ಮೀರದ 'ಆಜಾದಿ'ಗಾಗಿ ಮೊಟ್ಟಮೊದಲು ಧ್ವನಿ ಎತ್ತಿದ ವ್ಯಕ್ತಿ ಒಬ್ಬ ಮುಸ್ಲಿಂ ಅಲ್ಲ, ಹಿಂದೂ. ಮಹಾರಾಜ ಹರಿಸಿಂಗ್‌ಗೆ (ಬ್ರಿಟಿಷ್ ಸರ್ಕಾರ, ೧೮೪೬ರಲ್ಲೇ ಕಾಶ್ಮೀರ ಕಣಿವೆಯನ್ನು ಆಗ ಜಮ್ಮುವಿನ ರಾಜನಾಗಿದ್ದ, ಹರಿಸಿಂಗ್‌ನ ಪೂರ್ವಜನಾದ ಗುಲಾಬ್‌ಸಿಂಗ್‌ಗೆ ಅಕ್ರಮವಾಗಿ ಮಾರಾಟ ಮಾಡಿತ್ತು.) ಭಾರತ ಮತ್ತು ಪಾಕಿಸ್ತಾನದಿಂದ ಮುಕ್ತವಾದ ಸ್ವತಂತ್ರ ರಾಜ್ಯವನ್ನು ಆಳಬೇಕೆಂಬ ಕನಸಿತ್ತು. ಹಾಗಾಗಿ ೧೯೪೭ ಆಗಸ್ಟ್ ೧೫ರಂದು ಸ್ವತಂತ್ರಗೊಂಡ ಭಾರತದಲ್ಲಿ ವಿಲೀನಗೊಳ್ಳಲು ಆತ ನಿರಾಕರಿಸಿದ್ದ. ಆದರೆ ಅದೇ ವರ್ಷ ಪಾಕಿಸ್ತಾನ ಬೆಂಬಲಿತ ದಾಳಿಕೋರರಿಂದ ಆಕ್ರಮಣಕ್ಕೊಳಗಾದಾಗ, ತಪ್ಪಿಸಿಕೊಂಡು ಜಮ್ಮುವಿಗೆ ಪಲಾಯನ ಮಾಡಿ, ಕೊನೆಗೆ ಅಕ್ಟೋಬರ್ ೨೬ ರಂದು ಭಾರತೀಯ ಒಕ್ಕೂಟಕ್ಕೆ ಸೇರಲು ಸಮ್ಮತಿಸಿದ.

ಅನತಿ ಕಾಲದಲ್ಲೇ ರಾಜಾ ಹರಿಸಿಂಗ್ ತನ್ನ ರಾಜ ಮಾನ್ಯತೆಯನ್ನು ಕಳೆದುಕೊಂಡು ಇತಿಹಾಸದಲ್ಲಿ ಒಂದು ಅಡಿಟಿಪ್ಪಣಿಯಾಗಿಬಿಟ್ಟ. ಆದರೆ ಶೇಖ್ ಅಬ್ದುಲ್ಲಾ ಸೇರಿದಂತೆ ಕೆಲವು ಕಾಶ್ಮೀರಿಗಳ ಮನಸ್ಸಿನಲ್ಲಿ 'ಆಜಾದಿ' ಎಂಬ ಪ್ರಚೋದಕ ಕಲ್ಪನೆ ಜೀವಂತವಾಗಿತ್ತು. ೩೭೦ನೇ ವಿಧಿ ರದ್ದತಿಯ ಪ್ರಮುಖ ಫಲಿತಾಂಶವೆಂದರೆ, ಜಮ್ಮು–ಕಾಶ್ಮೀರದ ಭಾರತೀಯ ಒಕ್ಕೂಟದೊಂದಿಗಿನ ಏಕೀಕರಣವನ್ನು ಭದ್ರಗೊಳಿಸಿದ್ದು. ಆ ಮೂಲಕ ಕಾಶ್ಮೀರದ 'ಆಜಾದಿ' ಬೇಡಿಕೆಗೆ ಸಾಂವಿಧಾನಿಕ ಅವಕಾಶಗಳಾವುವೂ–ಅಂಥ ಅವಕಾಶ ಎಂದಾದರೂ ಇದ್ದ ಪಕ್ಷದಲ್ಲಿ–ಇಲ್ಲದಂತೆ ಮಾಡಿದ್ದು. ಕೇಂದ್ರದಲ್ಲಿ ಸತತ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರಗಳು ೩೭೦ನೇ ವಿಧಿಯ ಮೌಲ್ಯವನ್ನು ದುರ್ಬಲಗೊಳಿಸಿದ್ದರೂ, ಪ್ರಧಾನಿ ಜವಾಹರಲಾಲ್ ನೆಹರೂ ಹೊರತುಪಡಿಸಿ ಬೇರೆ ಯಾರೂ ಇದು ಭಾರತೀಯ ಸಂವಿಧಾನದಲ್ಲಿ ಕೇವಲ ತಾತ್ಕಾಲಿಕ ನಿಬಂಧನೆ ಎಂದು ಸೂಚಿಸದಿದ್ದರೂ ಸಹ, ಕಾಶ್ಮೀರದ ರಾಜಕೀಯ ವ್ಯವಸ್ಥೆಯ ವಿವಿಧ ವಿಭಾಗಗಳು, ಇದನ್ನಾಧರಿಸಿ 'ಜಮ್ಮು–ಕಾಶ್ಮೀರದ ವಿಲೀನ ಪ್ರಕ್ರಿಯೆಯು ತಾತ್ಕಾಲಿಕವಷ್ಟೇ ಅಲ್ಲ, ಶರತ್ತುಬದ್ಧ ಕೂಡ' ಎಂಬ ತಮ್ಮ ವಾದವನ್ನು ಮುನ್ನೆಲೆಗೆ ತಂದರು. ಈ ವ್ಯಾಖ್ಯಾನವು 'ಆಜಾದಿ'ಯ ಬೇಡಿಕೆಗೆ ಪ್ರೇರಣೆಯಾಯಿತು ಮತ್ತು ಆ ಕನಸನ್ನು ಹಾಗೇ ಜೀವಂತವಾಗಿರಿಸಿತು.

೧೯೪೭–೪೮ರಲ್ಲಿ ಕಾಶ್ಮೀರ ಕಣಿವೆಯ ಮೇಲೆ ಆಕ್ರಮಣ ಮಾಡುವ ಮೂಲಕ ಪಾಕಿಸ್ತಾನವು ಕಣಿವೆ ರಾಜ್ಯದ ಸಂಪೂರ್ಣ ಭೂಪ್ರದೇಶದ ಮೇಲೆ ಹಿಡಿತ ಸಾಧಿಸುವಲ್ಲಿ ವಿಫಲವಾದ ಕಾರಣ, ಆ ನಂತರದ ದಿನಗಳಲ್ಲಿ, ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಪ್ರಚೋದನೆ ನೀಡುವುದರ ಜೊತೆಗೆ ನೆರವನ್ನೂ ನೀಡಲಾರಂಭಿಸಿತು. ಮುಂದುವರೆದು ಈ ಬೆಂಬಲ ಮತ್ತು ಪ್ರಚೋದನೆಗೆ ತನ್ನ ಮತ್ತೊಂದು ಮಾರಕ ಅಸ್ತ್ರವಾದ, ಇಸ್ಲಾಮಿಕ್ ಮೂಲಭೂತವಾದಿಂದ ಪ್ರಚೋದಿತವಾದ ಭಯೋತ್ಪಾದನೆಯನ್ನೂ ಸೇರಿಸಿತು. ಭಾರತದ ಏಕತೆ, ಸಮಗ್ರತೆ ಮತ್ತು ಸುರಕ್ಷತೆಗೆ ಸವಾಲಾಗಿದ್ದ ಇದನ್ನು ಎದುರಿಸಲು, ಭಾರತೀಯ

ಸರ್ಕಾರಗಳು(ಕಾಂಗ್ರೆಸ್ ಸರ್ಕಾರವೋ, ಬಿಜೆಪಿ ಸರ್ಕಾರವೋ ಎಂಬುದನ್ನು ಲೆಕ್ಕಿಸದೆ) ಸತತವಾಗಿ ಮಿಲಿಟರಿಯನ್ನೇ ಆಶ್ರಯಿಸಿದವು ಮತ್ತು ಹೆಚ್ಚಾಗಿ ಅದನ್ನೇ ಅವಲಂಬಿಸಿದವು.


'ಗೋಲಿ'(ಬುಲೆಟ್)ಯ ಮೇಲೆ ಹೆಚ್ಚಿದ ಮತ್ತು 'ಬೋಲಿ'ಯ(ಕಾಶ್ಮೀರ ಸಮಾಜದ ವಿವಿಧ ವರ್ಗಗಳೊಂದಿಗೆ ಪ್ರಾಮಾಣಿಕ ಸಂವಹನ) ಮೇಲೆ ಕಡಿಮೆಯಾದ ಭಾರತದ ಅವಲಂಬನೆಯು ಅತ್ಯಂತ ಕ್ರೂರ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳಲ್ಲಿ ಪರಿಣಮಿಸಿತು. ಅನಿವಾರ್ಯವಾಗಿ ಕಾಶ್ಮೀರ ಕಣಿವೆಯ ಜನರು ಭಾರತ ಮತ್ತು ಅದರ ಪ್ರಭುತ್ವದಿಂದ ದೂರವಾಗಲು ಇವು ಕಾರಣವಾದವು. ನಿರೀಕ್ಷಿತವಾಗಿಯೇ ಪಾಕಿಸ್ತಾನವು ಇದರ ದುರುಪಯೋಗ ಮಾಡಿಕೊಂಡು ಅವರ 'ಆಜಾದಿ' ಭಾವನೆಯನ್ನು ಕೆರಳಿಸುತ್ತಾ ಬಂತು.

ಈ ವಿಷಚಕ್ರವನ್ನು ಮುರಿಯಲೇಬೇಕಿತ್ತು. ೩೭೦ನೇ ವಿಧಿಯ ರದ್ದತಿಯು ಅದನ್ನು ಮಾಡಿದೆ. ಮೋದಿ ಸರ್ಕಾರದ ನಿರ್ಧಾರವನ್ನು ಇನ್ನು ಬದಲಿಸಲಾಗದು. ಭವಿಷ್ಯದ ಯಾವುದೇ ಸರ್ಕಾರ, ಕಾಂಗ್ರೆಸ್ ಸರ್ಕಾರವೇ ಆದರೂ ಕೂಡ, ಇದನ್ನು ಹಿಂತೆಗೆದುಕೊಳ್ಳುವಂತಿಲ್ಲ.

ಅದೇ ಸಮಯದಲ್ಲಿ, ಮೋದಿ ಸರ್ಕಾರ ತೆಗೆದುಕೊಂಡಿರುವ ನಿರ್ಧಾರಗಳನ್ನೇ ಕಾಶ್ಮೀರ ಸಮಸ್ಯೆಗಳಿಗೆ 'ಅಂತಿಮ ಪರಿಹಾರ' ಎಂದು ಪರಿಗಣಿಸಿದರೆ, ಭಾರತವು ಬಹು ಮಾರಕವಾದ ಭಾರಿ ದೊಡ್ಡ ತಪ್ಪನ್ನು ಮಾಡಿದಂತಾಗುತ್ತದೆ. ಹಾಗೆ ಯೋಚಿಸುವುದು ಕೂಡಾ ತೀರಾ ಆತ್ಮವಂಚನೆಯಾಗುತ್ತದೆ. ಭಾರತ ಮತ್ತು ಪಾಕಿಸ್ತಾನವು 'ದ್ವಿಪಕ್ಷೀಯ ಮಾತುಕತೆಗಳ ಮೂಲಕ, ಶಾಂತಿಯುತ ವಿಧಾನಗಳಿಂದ ತಮ್ಮ ಭಿನ್ನಾಭಿಪ್ರಾಯಗಳನ್ನು' ಪರಿಹರಿಸಿದಾಗ ಮತ್ತು 'ಜಮ್ಮು-ಕಾಶ್ಮೀರದ ಬಗೆಗೆ ಅಂತಿಮ ನಿರ್ಧಾರ'ವನ್ನು ಮಾಡಿದಾಗ ಮಾತ್ರ ಈ ಸಮಸ್ಯೆಗೆ ನ್ಯಾಯಯುತ ಮತ್ತು ಶಾಶ್ವತ ಪರಿಹಾರ ಸಾಧ್ಯವಾಗುತ್ತದೆ.' ಇಂದಿರಾ ಗಾಂಧಿ ಮತ್ತು ಜ಼ಡ್.ಎ. ಭುಟ್ಟೋ ಅವರು, ೧೯೭೨ರ ಜುಲೈ ೨ರಂದು ಸಹಿ ಹಾಕಿರುವ ಶಿಮ್ಲಾ ಒಪ್ಪಂದದಲ್ಲಿ ಇದನ್ನು ಕಡ್ಡಾಯಗೊಳಿಸುವ ಮೂಲಕ ಇದನ್ನು ಬಹಳ ಸ್ಪಷ್ಟವಾಗಿ ಹೇಳಲಾಗಿದೆ.

ಶಿಮ್ಲಾ ಒಪ್ಪಂದವು ಅನೂರ್ಜಿತವಾಗಿದೆಯೆಂದು ಅಥವಾ ಭಾರತ ಅದನ್ನು ಹಿಂತೆಗೆದುಕೊಂಡಿದೆಯೆಂದು, ಪ್ರಧಾನಮಂತ್ರಿ ನರೇಂದ್ರ ಮೋದಿಯವರಾಗಲೀ ಗೃಹ ಮಂತ್ರಿ ಅಮಿತ್ ಶಾರವರಾಗಲೀ ಈವರೆಗೆ ಎಲ್ಲೂ ಘೋಷಿಸಿಲ್ಲ. ಹಾಗಿದ್ದ ಮೇಲೆ ಯಾವೊಬ್ಬ ಭಾರತೀಯನೂ ಜಮ್ಮು-ಕಾಶ್ಮೀರದ ಸಮಸ್ಯೆ ಅಂತಿಮವಾಗಿ ಇತ್ಯರ್ಥವಾಯಿತೆಂದು ಭಾವಿಸುವಂತಿಲ್ಲ. ಮೋದಿ ಸರ್ಕಾರ, ಸಮಸ್ಯೆಯ ಆಂತರಿಕ ಆಯಾಮವನ್ನು ಪರಿಹರಿಸಲು ಕೆಲವು ಪ್ರಮುಖ ಮತ್ತು ಸಕಾರಾತ್ಮಕ ಕ್ರಮಗಳನ್ನು ಮಾತ್ರ ತೆಗೆದುಕೊಂಡಿದೆ. ಸಮಸ್ಯೆಯ ಬಾಹ್ಯ ಆಯಾಮವನ್ನು ಸಕಾರಾತ್ಮಕವಾಗಿ ಪರಿಹರಿಸಲು ಇದು ಇನ್ನೂ ಅದೇ ದೃಢತೆಯನ್ನು ಪ್ರದರ್ಶಿಸಬೇಕಾಗಿದೆ.

ಭಾರತ-ಪಾಕಿಸ್ತಾನಗಳ ನಡುವೆ ಎಲ್ಲವೂ ಸಹಜವಾಗದೇ ಕಾಶ್ಮೀರದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸಲು ಸಾಧ್ಯವಿಲ್ಲ. ಮತ್ತು ಇಂದು ನವದೆಹಲಿ ಮತ್ತು ಇಸ್ಲಾಮಾಬಾದ್ ಎರಡರಲ್ಲೂ ವಿವೇಕಯುತ ರಾಜನೀತಿಯ ಕೊರತೆಯಿದ್ದು, ಕಾಶ್ಮೀರ ಸಮಸ್ಯೆಗೆ ರಾಜಿಸೂತ್ರಗಳನ್ನು ಆಧರಿಸಿದ ಶಾಶ್ವತ ಮತ್ತು ಸೌಹಾರ್ದಯುತ ಪರಿಹಾರವನ್ನು ಕಂಡುಕೊಳ್ಳಲು ಮುತ್ಸದ್ದಿ ರಾಜಕಾರಣದ ಅಗತ್ಯವಿದೆ.



**(ಸುಧೀಂದ್ರ ಕುಲಕರ್ಣಿಯವರು ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಸಲಹೆಗಾರರಾಗಿದ್ದರು. ಅವರು ಇತ್ತೀಚೆಗೆ 'ಭಾರತ-ಪಾಕಿಸ್ತಾನ-ಚೀನಾ ಸಹಕಾರ ತತ್ವಾಧಾರಿತ-'ನವ ದಕ್ಷಿಣ ಏಷ್ಯಾಕ್ಕಾಗಿರುವ ವೇದಿಕೆ'ಯನ್ನು ('ಫೋರಮ್ ಫಾರ್ ಎ ನ್ಯೂ ಸೌತ್ ಏಷ್ಯಾ') ವನ್ನು ಸ್ಥಾಪಿಸಿದ್ದಾರೆ. ಟೀಕೆ-ಟಿಪ್ಪಣಿಗಳನ್ನು ಅವರ ಈ ಇ-ಮೇಲ್‌ಗೆ ಕಳಿಸಬಹುದು:: *sudheenkulkarni@gmail.com)***

(ಕನ್ನಡಕ್ಕೆ: ಟಿ.ಎಲ್ ರೇಖಾಂಬ)

**ಶ್ರದ್ಧಾಂಜಲಿ**

# ಅಪ್ಪಟ ಸಮಾಜವಾದಿಯಾಗಿ ಬದುಕಿದ ಹುಚ್ಚಪ್ಪ ಮಾಸ್ತರ್



**ಸ**ಮಾಜವಾದಿ ಮೌಲ್ಯಗಳನ್ನು ಪ್ರತಿಪಾದಿಸುವುದರ ಜೊತೆಗೆ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದ ತಲೆಮಾರಿಗೆ ಸೇರಿದವರು ಸಾಗರ ತಾಲ್ಲೂಕಿನ ಹುಚ್ಚಪ್ಪ ಮಾಸ್ತರ್. ಕಳೆದ ಜುಲೈ ೧೭ರಂದು ನಮ್ಮನ್ನು ಅಗಲಿದ ಈ ಹಿರಿಯ ಜೀವ ಬಹುತೇಕ ಸಮಾಜವಾದಿಗಳಂತೆಯೇ ಸಾಹಿತ್ಯ, ಸಂಸ್ಕೃತಿಯ ಜೊತೆ ಒಡನಾಡುತ್ತಲೇ ತಳಸಮುದಾಯದ ಬೆಳವಣಿಗೆಯ ಆಶಯದೊಂದಿಗೆ ಕಾರ್ಯಕ್ಷೇತ್ರವನ್ನೂ ನಡೆಸಿದ ಅಪರೂಪದ ವ್ಯಕ್ತಿ. ಸಾಗರ ತಾಲ್ಲೂಕಿನ ಕುಗ್ವೆ ಎಂಬ ಪುಟ್ಟ ಗ್ರಾಮದಲ್ಲಿ ಬಡ ಗೇಣಿ ರೈತರ ಕುಟುಂಬದಲ್ಲಿ ಜನಿಸಿದ ಹುಚ್ಚಪ್ಪ ಅವರು ಬಾಳಿ ೭೦ ರ ದಶಕದಲ್ಲೆ ಪ್ರೌಢ ಶಿಕ್ಷಣ ಮುಗಿಸಿದ್ದ ಅವರು ಮನಸ್ಸು ಮಾಡಿದ್ದರೆ ಕೈ ತುಂಬಾ ಸಂಬಳ ಬರುವ ನೌಕರಿ ಹಿಡಿಯಬಹುದಿತ್ತು. ಆದರೆಹಾಸನ ಜಿಲ್ಲೆಯ ಯಗಚಿ ಗ್ರಾಮದ ವಿದ್ಯಾಪೀಠದಲ್ಲಿ ತರಬೇತಿಯೊಂದರಲ್ಲಿ ಭಾಗವಹಿಸಿದಾಗ ಗಾಂಧಿ ಸಾಹಿತ್ಯವನ್ನು ಅಧ್ಯಯನ ಮಾಡಿದ್ದು ಅವರರ ಬದುಕಿಗೆ ದೊಡ್ಡ ತಿರುವು ನೀಡಿತ್ತು. ಅಷ್ಟೊತ್ತಿಗಾಗಲೆ ಅವರು ಲೋಹಿಯಾರ ಚಿಂತನಧಾರೆಗಳಿಂದಲೂ ತೀವ್ರವಾಗಿ ಪ್ರಭಾವಿತಗೊಂಡಿದ್ದರು. 'ಸಮಾಜದಲ್ಲಿ ನನ್ನ ಕೆಲಸ ಬೇರೆಯೆ ಇದೆ' ಎಂಬ ತೀರ್ಮಾನಕ್ಕೆ ಬಂದವರಂತೆ ಸಾಗರಕ್ಕೆ ಮರಳಿ ಬಂದವರೆ ಅವರು ಸೇವೆಗೆ ಆರಿಸಿಕೊಂಡಿದ್ದು ಹಿರೇಮನೆ ಗ್ರಾಮದ ಗಿರಿಜನ ಆಶ್ರಮವನ್ನು. ಅಲ್ಲಿನ ಶಾಲೆಗೆ ಶಿಕ್ಷಕರಾಗಿ ತೆರಳಿದ ಅವರು ಕಾಡಿನ ಮಕ್ಕಳಿಗೆ ಶಿಕ್ಷಣವೆಂಬ ಬೆಳಕಿನ ದಾರಿ ತೋರಿದರು. ಅಸ್ಪೃಶ್ಯರಾಗಿದ್ದ ಗಿರಿಜನರನ್ನು ಮುಟ್ಟಲು 'ನಾಗರಿಕ ಸಮಾಜ' ಹಿಂಜರಿಯುತ್ತಿದ್ದ ಕಾಲದಲ್ಲಿ ಗಿರಿಜನರ ಮಕ್ಕಳಿಗೆ ಸ್ವತಃ ಕ್ಷೌರ ಮಾಡಿದ ಮಾಸ್ತರರು ಈ ಮೂಲಕ ಅವರಿಗೆ ಸ್ವಚ್ಛತೆಯ ಪಾಠ ಕಲಿಸಿದ್ದರು. ಜೊತೆಗೆ ಗಿರಿಜನ ಸಂಸ್ಕೃತಿಯ ಹಾಡು, ಹಸೆಗಳ ಪರಿಚಯವನ್ನೂ ಮಾಡಿಸಿದರು.ಅಲ್ಲಿಂದ ಹುಚ್ಚಪ್ಪ ಹುಚ್ಚಪ್ಪ ಮಾಸ್ತರು ಆದರು.

ಇಷ್ಟಕ್ಕೆ ಮಾಸ್ತರರ ಚಟುವಟಿಕೆ ನಿಲ್ಲಲಿಲ್ಲ. ದೊಡ್ಡಾಟದ ಬಗ್ಗೆ ಅವರಿಗೆ ವಿಪರೀತ ಆಸಕ್ತಿ.. ಕಂಚಿನ ಕಂಠಸಿರಿ ಹೊಂದಿದ್ದ ಅವರಿಗೆ ಹೆಗ್ಗೋಡಿನ 'ನೀನಾಸಂ' ಸಂಪರ್ಕ ಬೆಳೆದಿತ್ತು. ಅದು 'ಸಂಗ್ಯಾಬಾಳ್ಯ' ನಾಟಕದ ಪ್ರಯೋಗದ್ಲಿ ತೊಡಗಿದಾಗ ಅವರು, ಅದರ ಮುಖ್ಯ ಹಾಡುಗಾರರಾಗಿ ರಾಜ್ಯಾದ್ಯಂತ ಸುತ್ತಿದರು. ಶಿವರಾಮಕಾರಂತ ರಂಗಮಂದಿರ ಕಟ್ಟಿ ಆರ್ಥಿಕವಾಗಿ ಕಷ್ಟದಲ್ಲಿದ್ದ ನೀನಾಸಂಗೆ ಈ ನಾಟಕ ಚೈತನ್ಯ ನೀಡಿದ್ದನ್ನು ಮರೆಯುವಂತಿಲ್ಲ. ಹಾಗೇ ಮುಂದೆ ಮಂಚಿಕೇರಿಯ ಸಿದ್ದಿ ಜನಾಂಗದವರಿಗೆ ನೀನಾಸಂ 'ಕಪ್ಪು ಜನ, ಕೆಂಪು ನೆರಳು' ಎಂಬ ನಾಟಕ ಆಡಿಸಲು ಮುಂದಾದಾಗ ಅಕ್ಷರವೇ ಬಾರದ ಪಾತ್ರಧಾರಿಗಳಿಗೆ ಕೋಲಾಟದ ಹಾಡುಗಳನ್ನು ಕಲಿಸುವ ಮೂಲಕ ಅವರನ್ನು ರಂಗದ ಮೇಲೆ ತರುವಲ್ಲಿ ಮಾಸ್ತರರು ಪ್ರಮುಖ ಪಾತ್ರ ವಹಿಸಿದ್ದರು.

ಸಾಗರದಲ್ಲಿ ಆರಂಭಗೊಂಡ ಕಾಗೋಡು ರಂಗಮಂಚ, ರಂಗಸಂಕುಲ ತಂಡಗಳ ಸಾಂಸ್ಕೃತಿಕ ಕ್ರಿಯಾಶೀಲತೆಯಲ್ಲಿ ಮಾಸ್ತರರ ಭಾಗವಹಿಸುವಿಕೆ ಎದ್ದು ಕಾಣುತ್ತಿತ್ತು. ಸಾಹಿತ್ಯದ ಕುರಿತು ಅವರ ಪ್ರೀತಿಗೆ ಅವರ ಮನೆ ದೊಡ್ಡ ಗ್ರಂಥ ಭಂಡಾರವೇ ಸಾಕ್ಷಿಯಾಗಿತ್ತು.. ಮಲೆನಾಡಿನ ದೀವರ ಸಂಸ್ಕೃತಿಯ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದ ಅವರು ಈ ಸಂಬಂಧ ಸಂಶೋಧನೆ ನಡೆಸುವ, ದಾಖಲೀಕರಣ ಮಾಡುವ ಉತ್ಸಾಹಿಗಳಿಗೆ ಮಾರ್ಗದರ್ಶಿಯಾಗಿದ್ದರು. ತಮ್ಮ ಬದುಕಿನುದ್ದಕೂ ಜಾತ್ಯತೀತತರಾಗಿ ಹಲವು ಶಿಸ್ತುಗಳನ್ನು ಅಳವಡಿಸಿಕೊಂಡು ಬಂದಿದ್ದ ಅವರು ಕೊನೆಯವರೆಗೂ ಅದನ್ನು ಒಂದು ವ್ರತದಂತೆ ಪಾಲಿಸಿದವರು.

ಜಾನಪದ ವಿದ್ವಾಂಸ, ರಂಗನಟ, ಗಾಯಕ, ಸಂಘಟಕ, ವಿಚಾರವಾದಿ ಹೀಗೆ ಹತ್ತು ಹಲವು ಚಹರೆಗಳನ್ನು ಹೊಂದಿದ್ದ ಮಾಸ್ತರರು ಯಾವತ್ತೂ ತಾವು ನಂಬಿದ್ದ ತತ್ವ, ಸಿದ್ಧಾಂತಕ್ಕೆ ವಿರುದ್ಧವಾದ ವಿಚಾರ ಬಂದಾಗ ಅದರೊಂದಿಗೆ ರಾಜಿ ಮಾಡಿಕೊಂಡವರಲ್ಲ. ಅಗಾಧ ಪ್ರೀತಿಯನ್ನು ತಮ್ಮ ಸಂಪರ್ಕಕ್ಕೆ ಬಂದವರಿಗೆ ತೋರುತ್ತಿದ್ದ ಅವರು ತಮ್ಮ ಕಡು ಸಿಟ್ಟಿಗೂ ಹೆಸರಾಗಿದ್ದವರು.

ಸಾಮಾಜಿಕವಾಗಿ ಹಿಂದುಳಿದವರು ಶೈಕ್ಷಣಿಕವಾಗಿ ಬೆಳವಣಿಗೆ ಸಾಧಿಸುವುದು ಎಷ್ಟು ಮುಖ್ಯ ಎಂಬ ಅರಿವು ಮಾಸ್ತರರಿಗೆ ಇತ್ತು. ಈ ಕಾರಣದಿಂದಲೆ ಅವರು ತಮ್ಮ ಎಲ್ಲಾ ಮಕ್ಕಳಿಗೂ ಅತ್ಯುತ್ತಮ ಶಿಕ್ಷಣ ಕೊಡಿಸಿ, ಅವರು ಉನ್ನತ ಹುದ್ದೆಗೆ ಏರುವಂತೆ ಮಾಡಿದ್ದಾರೆ. ತಮ್ಮ ಇಳಿ ವಯಸ್ಸಿನಲ್ಲೂ ಸ್ವಾಭಿಮಾನದ ಕಾರಣಕ್ಕೆ ಮಕ್ಕಳ ಜೊತೆ ಇರದೆ, ಪತ್ನಿ ಗೌರಮ್ಮ ಅವರೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದುಕೊಂಡೆ ಅವರು ತಮ್ಮ ೮೨ನೇ ವಯಸ್ಸಿನಲ್ಲಿ ಬದುಕಿಗೆ ಅಂತಿಮ ವಿದಾಯ ಹೇಳಿದ್ದಾರೆ. ಮಲೆನಾಡಿನ ಸಾಂಸ್ಕೃತಿಕ, ಬೌದ್ಧಿಕ, ಹೋರಾಟದ ಲೋಕದಲ್ಲಿ ಅಳಿಸಲಾಗದ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿಯೆ ಹುಚ್ಚಪ್ಪ ಮಾಸ್ತರರು ನಮ್ಮಿಂದ ದೂರವಾಗಿದ್ದಾರೆ.

**-ಎಂ. ರಾಘವೇಂದ್ರ**

ಒಂದು ಬಹಿರಂಗ ಪತ್ರ

# ಅಸೀಮ ಧೈರ್ಯ ತೋರಿದ ಸಂಜೀವ್ ಭಟ್ ಅವರಿಗೆ...

–ಹರ್ಷ್ ಮಂದರ್



೨೦೦೨ರ ಗುಜರಾತ್ ನರಮೇಧದ ಸಂಬಂಧದ ತನಿಖೆಯ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿಯವರ ವಿರುದ್ಧ ಸಾಕ್ಷಿ ನುಡಿದಿದ್ದ ಆ ರಾಜ್ಯದ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಈಗ ಬಹು ಹಳೆಯ  ಲಾಕಪ್ ಸಾವಿನ ಸಂಬಂಧದ ಮೊಕದ್ದಮೆಯೊಂದರಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿ ಸೇರಿದ್ದಾರೆ. ನರಮೇಧ ನಡೆಯುತ್ತಿದ್ದಾಗ ಯಾವುದೇ ಕ್ರಮ ಕೈಗೊಳ್ಳದಂತೆ ನರೇಂದ್ರ ಮೋದಿಯವರು ರಾಜ್ಯ ಪೋಲಿಸ್ ಅಧಿಕಾರಗಳ ಒಂದು ಸಭೆಯಲ್ಲಿ ಸೂಚನೆ ನೀಡಿದ್ದರು ಎಂಬುದು ಸಂಜೀವ ಭಟ್ ಹೇಳಿದ್ದರು. ಹಾಗಾಗಿ ಭಟ್ ಅವರಿಗೆ ಈಗ ವಿಧಿಸಲಾಗಿರುವ ಶಿಕ್ಷೆ ಸೇಡಿನ ಕಾರ್ಯಾಚರಣೆಯಾಗಿದೆ ಎಂಬ ಅಭಿಪ್ರಾಯ ಪ್ರಚಲಿತವಿದೆ. ಈ ಸಂಬಂಧವಾಗಿ ಮಾಜಿ ಐಎಎಸ್ ಅಧಿಕಾರಿಯೂ ಆಗಿರುವ ಹರ್ಷ ಮಂದರ್ ಅವರು ಸಂಜೀವ ಭಟ್ ಅವರಿಗೆ ಬರೆದಿರುವ ಈ ಪತ್ರ ಈ ಇಡೀ ಮೊಕದ್ದಮೆಯ ಮೇಲೆ ವಿಶೇಷ ಬೆಳಕು ಚೆಲ್ಲುವಂತಿದೆ-ಸಂ.

ಪ್ರಿಯ ಸಂಜೀವ್,

ನೀವು ಈ ಪತ್ರವನ್ನು ಓದುವಿರೋ ಇಲ್ಲವೋ ತಿಳಿಯದು, ಒಂದು ವೇಳೆ ಓದಿದರೂ ಯಾವಾಗ ಎಂಬುದೂ ತಿಳಿಯದು. ಬಹುಷಃ ಶ್ವೇತಾ ಭಟ್, ಅದಮ್ಯ ಚೇತನದ ನಿಮ್ಮ ಜೀವನ ಸಂಗಾತಿ ಮುಂದಿನ ಸಲ ನಿಮ್ಮನ್ನು ಕಾರಾಗೃಹದಲ್ಲಿ ಭೇಟಿಯಾಗಲು ಬರುವಾಗ ಈ ಪತ್ರಿಕೆಯ ಒಂದು ಪ್ರತಿಯನ್ನು ನಿಮಗೆ ತಂದುಕೊಡಬಹುದು. ಆದರೆ ಈ ಕ್ಷಣದಲ್ಲಿ ಅವರಿಗೆ ಹೋರಾಡುವುದಕ್ಕೆ, ನಿಭಾಯಿಸುವುದಕ್ಕೆ ಎಷ್ಟೊಂದು ಇದೆಯೆಂದರೆ ಈ ಪತ್ರದಂತಹ ಸಾಮಾನ್ಯ ವಿಷಯವನ್ನು ಅವರು ಮರೆತೂ ಬಿಡಬಹುದು.

ಅಂತಿಮವಾಗಿ ಈ ಪತ್ರವೇನಾದರೂ ನಿಮ್ಮ ಕೈ ಸೇರಿದರೆ ಎಲ್ಲೋ ಜಾಮ್‌ನಗರದ ಕಾರಾಗೃಹದ ಬ್ಯಾರಕ್‌ನ ಕಠೋರವಾದ ಏಕಾಂತದಲ್ಲಿ ನೀವು ಇದನ್ನು ಓದುವುದನ್ನು ಕಲ್ಪಿಸಿಕೊಂಡರೆ ನನಗೆ ದುಃಖವಾಗುತ್ತದೆ. ನಾನು ನನ್ನ ನಾಗರೀಕ ಸೇವೆಯ ಕಾಲದಲ್ಲಿ ಭಾರತದ ಹಲವಾರು ಜಿಲ್ಲಾ ಕಾರಾಗೃಹಗಳನ್ನು ನೋಡಿದ್ದೇನೆ. ಆದ್ದರಿಂದ ಪ್ರತಿಯೊಂದು ದಿನವೂ ಒರಟು ನೆಲದ ಮೇಲೆ ಮಲಗುತ್ತ, ದುರ್ಗಂಧ ಬೀರುವ ಸಾರ್ವಜನಿಕ ಶೌಚಾಲಯವನ್ನು ಬಳಸುತ್ತ, ಬೇಸಿಗೆಯ ಶೆಖೆಯಿಂದ ರಕ್ಷಣೆಯಿಲ್ಲದೆ ಸೊಳ್ಳೆ ನೊಣಗಳ ಕಾಟದಲ್ಲಿ ಪ್ರತಿದಿನವನ್ನೂ ಏಕತಾನತೆಯಲ್ಲಿ ಕಳೆಯುವುದು ಎಷ್ಟು ಕಷ್ಟ ಎಂಬುದನ್ನು ನಾನು ಕಲ್ಪಿಸಿಕೊಳ್ಳಬಲ್ಲೆ.

ನೀವು ಈಗಾಗಲೇ ಒಂಭತ್ತು ತಿಂಗಳನ್ನು ಕಾರಾಗೃಹದಲ್ಲಿ ಕಳೆದಿದ್ದೀರಿ. ಎಷ್ಟೇ ಕಷ್ಟವಾದರೂ ನೀವು ಭಾರತದ ಯಾವುದೋ ಒಂದು ನ್ಯಾಯಾಲಯ – ಜಿಲ್ಲಾ ಸೆಷನ್ಸ್ ನ್ಯಾಯಾಲಯ, ಅಥವಾ ಕೊನೇ ಪಕ್ಷ ದೆಹಲಿ ಅಥವಾ ಅಹಮದಾಬಾದ್‌ನಲ್ಲಿರುವ ಭಾರತದ ಅತ್ಯುನ್ನತ ನ್ಯಾಯಾಲಯ – ನಿಮಗೆ ನ್ಯಾಯವನ್ನು ದೊರಕಿಸಿಕೊಡಬಹುದು ಎಂಬ ನಂಬಿಕೆಯನ್ನು ಆಶ್ರಯಿಸಿರುತ್ತೀರಿ.

ಇದಕ್ಕೆ ಪ್ರತಿಯಾಗಿ ನಿಮಗೆ ೩೦ ವರ್ಷಗಳ ಜೈಲು ಶಿಕ್ಷೆ ವಿಧಿಸಿದ ಜಾಮ್‌ನಗರದ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಆದೇಶವು ಬಹಳ ಬಲವಾದ ಆಘಾತವನ್ನು ನೀಡಿರಬೇಕು. ಏನೇ ಆದರೂ ನೀವು ಒಬ್ಬ ಅಪಾರ ಧೈರ್ಯವುಳ್ಳ ದೃಢವಾದ ಹೋರಾಟಗಾರರೆಂಬುದನ್ನು ನಾನು ಬಲ್ಲೆ.  ನ್ಯಾಯಕ್ಕಾಗಿ ಹೋರಾಡಿ, ನಿಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸಿ ಒಂದು ದಿನ ಮುಕ್ತರಾಗಲು ಉತ್ಸಾಹ ಕಳೆದುಕೊಳ್ಳದೆ ಹೋರಾಟವನ್ನು ಮುಂದುವರಿಸುತ್ತೀರಿ ಎಂಬುದು ನನಗೆ ಗೊತ್ತು.

ಶಕ್ತಿಗುಂದಿಸುವ ಜೈಲುಕೋಣೆಯ ಕಠಿಣವಾದ ಏಕಾಂತದಲ್ಲಿ, ಒಂಟಿತನದ ಕ್ಷಣಗಳಲ್ಲಿ, ನೀವು ನಿಮ್ಮ ಜೀವನದ ಅತಿ ಕಷ್ಟದ ಹೋರಾಟವನ್ನು ನಡೆಸುತ್ತಿರುವಾಗ ನಿಮ್ಮ ಜೊತೆ ನಿಲ್ಲುವ ಜನ ಭಾರತದಲ್ಲಿ ಹಾಗೆಯೇ ಪ್ರಪಂಚದಾದ್ಯಂತ ಇದ್ದಾರೆ ಎಂಬುದನ್ನು ನೀವು ತಿಳಿಯಬೇಕೆಂದು ನಾನು ಬಯಸುತ್ತೇನೆ. ನಿಮ್ಮ ನಿರಪರಾಧಿತ್ವದಲ್ಲಿ ನಮಗೆ ನಂಬಿಕೆ ಇದೆ. ಈ ದೇಶದಲ್ಲಿ ಅತ್ಯಂತ ಪ್ರಬಲನಾದ ವ್ಯಕ್ತಿಯ ವಿರುದ್ಧ ಸಾಕ್ಷ್ಯ ಹೇಳುವ ವಿಶಿಷ್ಟ ಧೈರ್ಯ ಹೊಂದಿರುವುದಕ್ಕಾಗಿ, ೨೦೦೨ ರಲ್ಲಿ ಸ್ವತಂತ್ರ ಭಾರತದೇಶವು ಕಂಡ ಅತ್ಯಂತ ಕ್ರೂರವಾದ ಕಗ್ಗೊಲೆಗಳಲ್ಲಿ ಆತನ ಅಪರಾಧವನ್ನು ಸಾಬೀತುಪಡಿಸಲು ನೀವು ಪ್ರಯತ್ನಿಸಿದ್ದಕ್ಕಾಗಿ ನಿಮ್ಮನ್ನು ಬಲಿಪಶು ಮಾಡಲಾಗಿದೆ ಎಂಬುದು ನಮಗೆ ತಿಳಿದಿದೆ.

ನೀವು ಏನನ್ನು ಅನುಭವಿಸುತ್ತಿದ್ದೀರೋ ಅದು ಸ್ಪಷ್ಟವಾಗಿ ಆತನ ಮತ್ತು ಇಂದು ದೇಶದಲ್ಲಿ ಎರಡನೆ ಅತ್ಯಂತ ಪ್ರಬಲ ವ್ಯಕ್ತಿಯ ತೀವ್ರ ದುರಹಂಕಾರದ ಪರಿಣಾಮ, ಮತ್ತು ಒಂದು ಸಂಚು ಬಯಲು ಮಾಡಿದ ಧೈರ್ಯವಂತ, ನಿರ್ಭೀತ, ವ್ಯಕ್ತಿಯ ವಿರುದ್ಧ ಕ್ಷುಲ್ಲಕ ಸೇಡಿಗಾಗಿ ರಾಜ್ಯಾಧಿಕಾರವನ್ನು ದುರ್ಬಳಕೆ ಮಾಡಿದ್ದರ ಪರಿಣಾಮ. ಒಬ್ಬ ಹಿರಿಯ ಅಧಿಕಾರಿಯಾದ ನೀವು ಉನ್ನತ ಅಧಿಕಾರ ಸ್ಥಾನವನ್ನು ಹೊಂದಿರುವವರ ವಿರುದ್ಧ ದನಿಯೆತ್ತುವ ಧೈರ್ಯ ಮಾಡಿದ್ದಕ್ಕಾಗಿ ನಿಮಗೆ ನೀಡಿರುವ ಶಿಕ್ಷೆಗೆ ಸಮನಾದ ಶಿಕ್ಷೆಗೆ ಒಳಗಾದ ಮತ್ತೊಬ್ಬ ಅಧಿಕಾರಿಯ ಪ್ರಸಂಗ – ಅಂದರೆ ಜೀವನದ ಮೂರು ದಶಕಗಳನ್ನು ಜೈಲಿನಲ್ಲಿ ಕಳೆಯಬೇಕಾದ ಸ್ಥಿತಿಗೆ ದೂಡಲ್ಪಟ್ಟ ಪ್ರಸಂಗ – ನನಗೆ ನೆನಪಿಗೆ ಬರುವುದಿಲ್ಲ.

ನಿಮ್ಮನ್ನು ಈ ರೀತಿಯಲ್ಲಿ ಶಿಕ್ಷಿಸಬಹುದು ಎಂಬ ವಿಷಯವು ಭಾರತದ ಅಪರಾಧ ನ್ಯಾಯ ಸಂಸ್ಥೆಗಳ(institutions of criminal justice) – ತನಿಖಾ ಏಜೆನ್ಸಿಗಳು, ನ್ಯಾಯಾಂಗ, ಮತ್ತು ಅಧಿಕೃತ ಮಾನವ ಹಕ್ಕುಗಳ ಸಂಸ್ಥೆಗಳ – ಹೇಡಿತನದಿಂದಾಗಿ ಪ್ರಾಮಾಣಿಕತೆ, ಸ್ವಾತಂತ್ರ್ಯಗಳು ಕುಸಿದಿರುವುದಕ್ಕೆ ಹಿಡಿದ ಕನ್ನಡಿ. ಕೊನೆಯಲ್ಲಿ ಖಾಕಿ ಸಮವಸ್ತ್ರದಲ್ಲಿರುವ ನಿಮ್ಮ ಸಹೋದರ ಸಹೋದರಿಯರು ನಿಮ್ಮ ಜೀವಾವಧಿ ಶಿಕ್ಷೆಯ ಘೋಷಣೆಯ ನಂತರದಲ್ಲಿ ಮೌನ ವಹಿಸುವ ಮೂಲಕ ನಿಮ್ಮನ್ನು ನಿರಾಸೆಗೊಳಿಸಿದ್ದು ನಿಮಗೆ ಅಪಾರವಾದ ನೋವನ್ನು ಉಂಟುಮಾಡಿರಬಹುದು.

ಮಾಧ್ಯಮಗಳಲ್ಲಿ ಯಾವುದೇ ರೀತಿಯ ಆಕ್ರೋಶ ವ್ಯಕ್ತವಾಗದೆ ಹೋದದ್ದು, ರಾಜ್ಯಾಧಿಕಾರವನ್ನು ಬಹಿರಂಗವಾಗಿ ಸ್ವೇಚ್ಛೆಯಿಂದ ದುರ್ಬಳಕೆ ಮಾಡುವುದನ್ನು ಯಾವುದೇ ಪ್ರತಿರೋಧ ಅಥವಾ ಕೋಪವಿಲ್ಲದೆ ನೋಡುತ್ತ ಕೂರಲು ಅವು ಸಿದ್ಧ ಎನ್ನುವುದನ್ನು ತೋರಿಸುತ್ತದೆ.

ಸಾಂವಿಧಾನಿಕ ಸಂಸ್ಥೆಯಾದ ಕೇಂದ್ರ ಲೋಕಸೇವಾ ಆಯೋಗವು ಸಹ ನಿಮ್ಮ ವಿಚಾರದಲ್ಲಿ ಅಪಮಾನಕರವಾದ ನಡವಳಿಕೆಯನ್ನು ಪ್ರದರ್ಶಿಸಿರುವುದು ಸರ್ಕಾರೀ ಸಂಸ್ಥೆಗಳ ಕುಸಿತದ ಮಟ್ಟವನ್ನು ತೋರಿಸುತ್ತದೆ. ೨೦೧೫ ರಲ್ಲಿ ಕೆಲವು ದಿನಗಳ ಕಾಲ ಅನಧಿಕೃತವಾಗಿ ಕರ್ತವ್ಯಕ್ಕೆ ಹಾಜರಾಗಿಲ್ಲವೆಂಬ ಅತಿ ಸಣ್ಣ ತಪ್ಪು ನಡವಳಿಕೆಯ ನೆಪವೊಡ್ಡಿ, ಕೇಂದ್ರ ಲೋಕಸೇವಾ ಆಯೋಗದ ಸಮ್ಮತಿಯೊಡನೆ, ನಿಮ್ಮನ್ನು ಸೇವೆಯಿಂದ ವಜಾ ಮಾಡಿದ ಸಂದರ್ಭದಲ್ಲಿ ನನ್ನ ನಿರಾಶೆಯನ್ನು ಕುರಿತು ನಾನು ಸ್ಕ್ರೋಲ್.ಇನ್ ನಲ್ಲಿ ಕೇಂದ್ರ ಲೋಕಸೇವಾ ಆಯೋಗದ (ಸಂವಿಧಾನದ ವಿಧಿ ೩೧೫ ರ ಅಡಿಯಲ್ಲಿ ನಾಗರೀಕ ಸೇವೆಯನ್ನು ರಕ್ಷಿಸುವುದಕ್ಕಾಗಿ ರಚಿಸಲ್ಪಟ್ಟದ್ದು) ಅಳ್ಳೆದೆಯ ಮೌನದ ಬಗ್ಗೆ ಬರೆದಿದ್ದೇನೆ.

ಸೇವೆಯಿಂದ ವಜಾ ಎಂಬುದು ಒಬ್ಬ ಸಾರ್ವಜನಿಕ ಅಧಿಕಾರಿಗೆ ಅತಿ ಅಪರೂಪದ ಸಂದರ್ಭಗಳಲ್ಲಿ ಅತಿ ಗಂಭೀರವಾದ ಅಪರಾಧಗಳಿಗೆ ಮಾತ್ರವೇ ನೀಡಬಹುದಾದ ಶಿಕ್ಷೆ. ಆದರೂ ನಿಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶವನ್ನೂ ಸಹ ನೀಡದೆ ಕೇಂದ್ರ ಲೋಕಸೇವಾ ಅಯೋಗವು ನಿಮ್ಮನ್ನು ಸೇವೆಯಿಂದ ವಜಾ ಮಾಡಿ ಆಜ್ಞೆ ಹೊರಡಿಸಿತು. ಅಧಿಕೃತ ಅನುಮತಿ ಇಲ್ಲದೆ ಕರ್ತವ್ಯಕ್ಕೆ ಗೈರುಹಾಜರಾಗಿ ವರ್ಷಗಟ್ಟಲೆ ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸಿದವರು, ಕೆಲವೊಮ್ಮೆ ವಿದೇಶಗಳಲ್ಲಿ ಬೇರೆ ಹುದ್ದೆಗಳನ್ನು ನಿರ್ವಹಿಸಿದವರು ಕೂಡ ಸೇವೆಯಿಂದ ವಜಾ ಆಗುವುದಿರಲಿ,

ಯಾವುದೇ ರೀತಿಯ ಶಿಕ್ಷೆಯಿಲ್ಲದೆ ತಪ್ಪಿಸಿಕೊಂಡಿರುವುದನ್ನು ನಾನು ಬಲ್ಲೆ.

ನಿಮ್ಮ ಗೈರುಹಾಜರಿಯು ಅನಧಿಕೃತವೆಂದು ಒಪ್ಪಿಕೊಂಡರೂ ಕೂಡ – ನೀವು ಅದನ್ನು ಪ್ರಶ್ನಿಸಿದ್ದೀರಿ– ಒಂದು ಲಿಖಿತ ಎಚ್ಚರಿಕೆ ಅಥವಾ ಅಸಮ್ಮತಿ ತೋರುವ ಒಂದು ಪತ್ರ, ಗೈರು ಹಾಜರಾದ ಅವಧಿಗೆ ಸಂಬಳ ಕಟಾವು ಮಾಡುವುದು ಇತ್ಯಾದಿ ಯಾವುದಾದರೂ ಲಘು ಶಿಕ್ಷೆ, ನಾನು ಆಗ ಬರೆದ ಹಾಗೆ, ಆರೋಪಿಸಲ್ಪಟ್ಟ ತಪ್ಪು ನಡವಳಿಕೆಗೆ ಸೂಕ್ತವೂ ಪ್ರಮಾಣಬದ್ಧವೂ ಆದ ದಂಡವಾಗಿರುತ್ತಿತ್ತು.

ಈ ನೆಲದ ಅತ್ಯುನ್ನತ ಅಧಿಕಾರವು ನಿಮ್ಮನ್ನು ಸೇವೆಯಿಂದ ವಜಾ ಮಾಡಲು ಏಕೆ ಅಷ್ಟೊಂದು ದೃಢ ನಿರ್ಧಾರ ಮಾಡಿತ್ತು ಎಂಬ ನಿಗೂಢತೆಯು ಆ ಅನಧಿಕೃತ ಗೈರುಹಾಜರಿಯ ಸಮಯವನ್ನು ನೀವು ಹೇಗೆ ವಿನಿಯೋಗಿಸಿದಿರಿ ಎಂಬುದರಿಂದ ಸ್ಪಷ್ಟಗೊಂಡಿದೆ. ನೀವು ಗುಜರಾತ್ ಕೇಡರ್‌ನ ಒಬ್ಬ ಧೈರ್ಯವಂತ ಸೇವಾನಿರತ ಐ ಪಿ ಎಸ್ ಅಧಿಕಾರಿಯಾಗಿ, ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ವಿರುದ್ಧ, ಅವರು ಒಂದು ಸಮೂಹ ಹತ್ಯೆಯಲ್ಲಿ ಶಾಮೀಲಾಗಿದ್ದರೆಂಬ ಆರೋಪದ ಪರ ಸಾಕ್ಷ್ಯ ನುಡಿದಿದ್ದಿರಿ.

ನೀವು ಇದಕ್ಕೂ ಮುನ್ನ ಸರ್ವೋಚ್ಚ ನ್ಯಾಯಾಲಯದ ವಿಶೇಷ ತನಿಖಾ ತಂಡದ ಎದುರು, ಮತ್ತು ಸರ್ವೋಚ್ಚ ನ್ಯಾಯಾಲಯದ ಅಮೈಕಸ್‌ಕ್ಯೂರಿಯ (ನಿಷ್ಪಕ್ಷಪಾತಿ ವೀಕ್ಷಕ) ರಾಜುರಾಮಚಂದ್ರನ್ ಅವರ ಎದುರು ಹೇಳಿಕೆ ನೀಡಿದ್ದಿರಿ (ನಂತರ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಲಿಖಿತ ಹೇಳಿಕೆಯ ರೂಪದಲ್ಲೂ ಸಲ್ಲಿಸಿದಿರಿ) ಸರ್ವೋಚ್ಚ ನ್ಯಾಯಾಲಯದ ವಿಶೇಷ ತನಿಖಾ ತಂಡ ಮತ್ತು ಅಮೈಕಸ್‌ಕ್ಯೂರಿಯಗಳು ಹಿಂದಿನ ಸಂಸದರಾದ ಎಹ್ಸಾನ್ ಜಾಫ್ರಿಯವರ ವಿಧವೆ ಝಕಿಯಾ ಜಾಫ್ರಿಯವರ ಆಪಾದನೆಗಳ ತನಿಖೆ ನಡೆಸುತ್ತಿದ್ದವು. ಎಹ್ಸಾನ್ ಜಾಫ್ರಿಯವರನ್ನು ಇತರ ಸುಮಾರು ೭೦ ಮಂದಿಯ ಜೊತೆ ಅಹಮದಾಬಾದ್‌ನ ಗುಲ್ಬರ್ಗ್ ಸೊಸೈಟಿಯ ಬಳಿ ೨೦೦೨ ರಲ್ಲಿ ಬರ್ಬರವಾಗಿ ಕೊಲ್ಲಲಾಗಿತ್ತು. ಜಾಫ್ರಿಯವರ ವಿಧವೆ ಅಂದಿನ ಮುಖ್ಯ ಮಂತ್ರಿ ನರೇಂದ್ರಮೋದಿಯವರು ಉದ್ದೇಶಪೂರ್ವಕವಾಗಿ ಜನರ ಜೀವ ಮತ್ತು ಆಸ್ತಿಯನ್ನು ರಕ್ಷಿಸುವಲ್ಲಿ ಸೋತಿರುವುದರಿಂದ ಮತ್ತು ಅವರ ಸಾಂವಿಧಾನಿಕ ಕರ್ತವ್ಯದಲ್ಲಿ ವಿಫಲರಾಗಿರುವುದರಿಂದ ಅವರು ಪ್ರಥಮ ಆರೋಪಿ ಎಂಬ ಹೇಳಿಕೆ ನೀಡಿದ್ದರು.

ನಿಮ್ಮನ್ನು ವಜಾ ಮಾಡಿದ್ದು ಎಷ್ಟರ ಮಟ್ಟಿಗೆ ಹಿಂದೆಂದೂ ಕಾಣದ್ದೋ ಅಷ್ಟರ ಮಟ್ಟಿಗೆ ಅದು ಆಘಾತಕಾರಿಯೂ ಕೂಡ. ಆಗ ನಿಮಗೆ ಅವರು ಅತಿ ಕೆಟ್ಟದ್ದನ್ನು ಮಾಡಿದ್ದಾರೆಂದು ನಾವು ಭಾವಿಸಿದ್ದೆವು. ಆದರೆ ಇನ್ನೂ ಹೆಚ್ಚು ಕಠೋರವಾದದ್ದು ಮುಂದೆ ಬರಲಿದೆ ಎಂಬುದನ್ನು ನಾವು ನಿರೀಕ್ಷಿಸಿರಲಿಲ್ಲ ಮತ್ತು ಅಧಿಕಾರವು ನಿಮ್ಮ ಜೀವಿತಾವಧಿಯನ್ನು ನೀವು ಜೈಲಿನಲ್ಲಿ ಕಳೆಯುವಂತೆ ಮಾಡುವ ಮೂಲಕ ತನ್ನ ಸೇಡನ್ನು ತೀರಿಸಿಕೊಳ್ಳುವವರೆಗೆ ವಿರಮಿಸುವುದಿಲ್ಲವೆಂಬುದನ್ನೂ ನಾವು ನಿರೀಕ್ಷಿಸಿರಲಿಲ್ಲ.

ಸ್ವತಂತ್ರ ಭಾರತದ ಮತೀಯ ಹತ್ಯೆಗಳ ಬಗೆಗಿನ ಅಪರಾಧ ನಿಯಂತ್ರಣ ಜವಾಬ್ದಾರಿಯ ಅತಿ ಮುಖ್ಯ ಕಟ್ಲೆಯಲ್ಲಿ ಒಬ್ಬ ಸಾಕ್ಷಿಯಾಗಿ ನೀವು ಎಷ್ಟು ಭಯ ಹುಟ್ಟಿಸುವವರಾಗಿದ್ದಿರಿ ಎಂಬುದನ್ನು, ನಿಮ್ಮ ಸಾಕ್ಷಿಯು ಎಷ್ಟು ಅಪಾಯಕಾರಿಯಾಗಿತ್ತು ಎಂಬುದನ್ನು, ನಿಮಗೆ ನೀಡಿರುವ ಶಿಕ್ಷೆಯು ತೋರಿಸುತ್ತದೆ. ನಿಮಗೆ ನೀಡಲಾದ ಶಿಕ್ಷೆಯು ಈ ದೇಶದ ಅತ್ಯಂತ ಬಲಿಷ್ಠ ವ್ಯಕ್ತಿಯ ವಿರುದ್ಧ ಹೋರಾಟಕ್ಕೆ ನಿಲ್ಲುವುದು ಎಷ್ಟು ಅಪಾಯಕಾರಿ ಎಂಬ ಸಂದೇಶವನ್ನು, ಅಂದರೆ ಒಬ್ಬ ಹಿರಿಯ ಪೊಲೀಸ್ ಅಧಿಕಾರಿಗೆ ಇಂತಹ ಗತಿ ಒದಗಿದರೆ ಸಾಮಾನ್ಯ ನಾಗರೀಕನ ಪಾಡೇನು ಎಂಬ ಸಂದೇಶವನ್ನು ನಿಮಗೆ ಮಾತ್ರವಲ್ಲದೆ ಇತರರಿಗೂ ಸಹ ನೀಡುತ್ತದೆ.

೨೦೦೨ ರ ಫೆಬ್ರವರಿ ೨೭ ರ ತಡರಾತ್ರಿ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಅತ್ಯಂತ ವಿವಾದಾತ್ಮಕ ಸಭೆಯಲ್ಲಿ ಇತರ ಪೊಲೀಸ್ ಅಧಿಕಾರಿಗಳೂ ಸಹ ಉಪಸ್ಥಿತರಿದ್ದರು. ಅದರೆ ಅವರೆಲ್ಲರೂ ಆ ಸಭೆಯಲ್ಲಿ ಉಪಸ್ಥಿತರಿದ್ದುದು ನೆನಪಿಗೆ ಬರುತ್ತಿಲ್ಲ ಎನ್ನುತ್ತಾರೆ. ಅಥವಾ ಮೋದಿಯವರು ನೀಡಿದರೆಂದು ನೀವು ಹೇಳುವ ಸೂಚನೆ ಅವರಿಗೆ ನೆನಪಿಲ್ಲ. ಅಥವಾ ನೀವು ಆ ಸಭೆಯಲ್ಲಿ ಉಪಸ್ಥಿತರಿರಲೇ ಇಲ್ಲವೇನೋ ಎನ್ನುತ್ತಾರೆ. ಆದರೆ ನೀವು ಆ ಸಭೆಗೆ ಹೊರಟಾಗ ಹಾಜರಿದ್ದ ನಿಮ್ಮ ವಾಹನ ಚಾಲಕ ಮತ್ತು ಒಬ್ಬ ಬಿ ಬಿ ಸಿ ವರದಿಗಾರ ನೀವು ಆ ಸಭೆಗೆ ಹಾಜರಾಗಿದ್ದನ್ನು ಖಚಿತಪಡಿಸಿದ್ದಾರೆ.

ಹಿರಿಯ ಅಧಿಕಾರಿಗಳು ಸಭೆಯ ನಂತರ ಏನು ಮಾಡಬೇಕೆಂದು ಮುಖ್ಯಮಂತ್ರಿ ಮೋದಿಯವರು ಅಂದು ಸೂಚಿಸಿದರೆಂದು ನೀವು ಹೇಳುತ್ತೀರೋ ಅದು ಬಹಳ ಆಸ್ಫೋಟಕವಾದುದು ಎಂಬುದು ನಿಮಗೆ ತಿಳಿದಿತ್ತು.

ಅಷ್ಟಾದರೂ ನೀವು ಮಾತನಾಡಲು ಬಯಸಿದಿರಿ. ನೀವು ಏನನ್ನು ಹೇಳಿದಿರೋ ಮತ್ತು ಮಾಡಿದಿರೋ ಅದನ್ನು ಮಾಡುವುದಕ್ಕೆ ಅತ್ಯುನ್ನತ ಮಟ್ಟದ ಧೈರ್ಯ ಬೇಕು. ವಿಶೇಷ ತನಿಖಾ ಸಂಸ್ಥೆಯ ಮತ್ತು ಸರ್ವೋಚ್ಚ ನ್ಯಾಯಾಲಯದ ಎದುರು 'ಹಿಂದುಗಳಲ್ಲಿ ಭಾವತೀವ್ರತೆ ಉಕ್ಕುತ್ತಿದ್ದು ಅವರ ಕ್ರೋಧವನ್ನು ಹೊರಹಾಕಲು ಅವಕಾಶ ನೀಡಬೇಕಾದುದು ಕಡ್ಡಾಯವಾಗಿದೆ' ಎಂಬ ಅಭಿಪ್ರಾಯವನ್ನು ಮೋದಿಯವರು ವ್ಯಕ್ತಪಡಿಸಿದರು ಎಂದು ಸಾಕ್ಷ್ಯ ನುಡಿದಿರಿ. ಈ ಹಿಂದುಗಳ ಕ್ರೋಧ–ಆ ಸಮಯದಲ್ಲಿ ಮೋದಿಯವರು ತಮ್ಮ ಸಾರ್ವಜನಿಕ ಹೇಳಿಕೆಯಲ್ಲಿ ಒಂದು ಸಮರ್ಥನೀಯ ಪ್ರತಿಕ್ರಿಯೆ ಎಂದು ಹೇಳಿದ್ದು– ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ ೫೮ ಜನ ಅಯೋಧ್ಯೆಗೆ ರಾಮ ದೇವಾಲಯದ ನಿರ್ಮಾಣದ ಕೆಲಸದಲ್ಲಿ ಪಾಲ್ಗೊಳ್ಳಲು ಹೋಗಿದ್ದವರು, ಗೋದ್ರಾದಲ್ಲಿ ಒಂದು ರೈಲು ಬೋಗಿಯಲ್ಲಿ ಜೀವಂತವಾಗಿ ಬೆಂಕಿಗಾಹುತಿಯಾಗಿದ್ದ ಕಾರಣಕ್ಕಾಗಿ ಉಂಟಾಗಿತ್ತು.

'ಬಹಳ ಕಾಲದಿಂದ ಗುಜರಾತ್‌ನಲ್ಲಿ ಮತೀಯ ಗಲಭೆಗಳ ವಿಷಯದಲ್ಲಿ ವ್ಯವಹರಿಸುವಾಗ ಪೊಲೀಸರು ಹಿಂದುಗಳ ಮತ್ತು ಮುಸ್ಲಿಮರ ಚಟುವಟಿಕೆಗಳನ್ನು ಸಮತೋಲನಗೊಳಿಸುವ ನೀತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಆದರೆ ಈ ಬಾರಿ ಪರಿಸ್ಥಿತಿಯು ಮುಂದೆ ಇಂತಹ ಘಟನೆಗಳು ಪುನರಾವರ್ತನೆಯಾಗುವುದನ್ನು ತಡೆಯಲು ಮುಸ್ಲಿಮರಿಗೆ ಒಂದು ಪಾಠವನ್ನು ಕಲಿಸಬೇಕೆಂಬಂತಿದೆ' ಎಂಬ ಹೇಳಿಕೆಯ ಮೂಲಕ ಮುಖ್ಯಮಂತ್ರಿ ಮೋದಿಯವರು ಸಭೆಯನ್ನು ಪ್ರಭಾವಿಸಲು ಪ್ರಯತ್ನಿಸಿದರು ಎಂದು ಅಪಾದಿಸಿದಿರಿ. ನಿಮ್ಮ ಆರೋಪಗಳು ಸ್ವೀಕರಿಸಲ್ಪಟ್ಟಿದ್ದರೆ, ಅವು ಮೋದಿಯವರ ವಿರುದ್ಧ ಗಂಭೀರವಾದ ಕ್ರಿಮಿನಲ್ ಪ್ರಕರಣದಲ್ಲಿ ಪರ್ಯವಸಾನಗೊಳ್ಳುತ್ತಿದ್ದವು. ಅವರು ದೇಶದ ಅತ್ಯುನ್ನತ ಅಧಿಕಾರ ಸ್ಥಾನಕ್ಕೆ ಏರಲು ಅಡ್ಡಿಯಾಗುತ್ತಿದ್ದವು.

ವಿಶೇಷ ತನಿಖಾ ತಂಡದಲ್ಲಿನ ನಿಮ್ಮ ಸಹೋದ್ಯೋಗಿಗಳು – ಸಹ ಪೊಲೀಸ್ ಅಧಿಕಾರಿಗಳು – ನಿಮ್ಮನ್ನು ಒಬ್ಬ ನಂಬಿಕೆಗೆ ಅರ್ಹವಲ್ಲದ ಸಾಕ್ಷಿ ಎಂದು ಹೆಸರಿಸಿ, ನೀವು ಸಭೆಯಲ್ಲಿ ಹಾಜರಿರಲಿಲ್ಲವೆಂದು ಆರೋಪಿಸಿ ನಿಮ್ಮ ಆರೋಪಗಳನ್ನು ತಿರಸ್ಕರಿಸಿಬಿಟ್ಟರು. ಸರ್ವೋಚ್ಚ ನ್ಯಾಯಾಲಯದ ಅಮೈಕಸ್ ಕ್ಯೂರಿಯ ರಾಜು ರಾಮಚಂದ್ರನ್ ಅವರು ನಿಮ್ಮ ಆರೋಪಗಳನ್ನು ವಿಶೇಷ ತನಿಖಾ ತಂಡವು ನಿರಾಕರಿಸಿದ್ದನ್ನು ಒಪ್ಪಲಿಲ್ಲ. ನೀವು ಸಭೆಯಲ್ಲಿ ವಾಸ್ತವವಾಗಿ ಹಾಜರಿದ್ದಿರೋ ಇಲ್ಲವೋ ಎಂಬ ಪ್ರಶ್ನೆಯು ನ್ಯಾಯಾಲಯದಲ್ಲಿ ಪರೀಕ್ಷಿಸಲ್ಪಡಬೇಕು ಎಂಬ ವಿಚಾರದಲ್ಲಿ ನಂಬಿಕೆ ಹೊಂದಿದ್ದರು. ಏಕೆಂದರೆ ಅಲ್ಲಿ ಉಪಸ್ಥಿತರಿದ್ದವರ ಸಾಕ್ಷಿಯೇ ನಂಬಲರ್ಹವಲ್ಲ ಎಂದು ಸ್ವತಃ ವಿಶೇಷ ತನಿಖಾ ತಂಡವೇ ಭಾವಿಸಿತ್ತು. ಆದ್ದರಿಂದ ನಿಮ್ಮ ಕ್ಲೈಮ್‌ಗಳನ್ನು ಒಮ್ಮೆಗೇ ನಿರಾಕರಿಸಲು ಸಾಕಷ್ಟು ಸಾಕ್ಷ್ಯಗಳಿರಲಿಲ್ಲ. ನಿಮ್ಮ ಮಾತುಗಳನ್ನು ನ್ಯಾಯಾಲಯದಲ್ಲಿ ಪರೀಕ್ಷಿಸಬೇಕಾಗಿತ್ತು ಎಂದು ಅವರು ಭಾವಿಸಿದರು. ಅವರ ಸಲಹೆಯನ್ನು ಒಪ್ಪಿಕೊಂಡಿದ್ದರೆ ಇಂದು ಭಾರತದ ಇತಿಹಾಸವೇ ಬೇರೆಯಾಗಿರುತ್ತಿತ್ತು, ಹಾಗೆಯೇ ನಿಮ್ಮ ಹಣೆಬರಹ ಕೂಡ.

ವಿಶೇಷ ತನಿಖಾ ತಂಡದ ನೇತೃತ್ವ ವಹಿಸಿದ್ದ ಒಬ್ಬ ಪೋಲೀಸ್ ಅಧಿಕಾರಿಗೆ ಮುಂದೆ - ಮೋದಿಯವರು ಪ್ರಧಾನಮಂತ್ರಿಯಾದಾಗ – ನಿವೃತ್ತಿಯ ನಂತರ ರಾಯಭಾರಿಯಾಗಿ ಪ್ರತಿಷ್ಠಿತ ಹುದ್ದೆ ದೊರೆತದ್ದು ಒಂದು ಆಕಸ್ಮಿಕವಾಗಿರಲಾರದು. ಪ್ರತಿಯಾಗಿ ನೀವು ಬಹುತೇಕ ಇಡೀ ಜೀವನವನ್ನು ಕಾರಾಗೃಹದಲ್ಲಿ ಕಳೆಯಬೇಕಾಗಬಹುದು.

ಭಾರತದ ಇಂದಿನ ಅತ್ಯಂತ ಪ್ರಬಲ ವ್ಯಕ್ತಿಗಳಿಗೆ ನಿಮ್ಮ ವಿರುದ್ಧ ದ್ವೇಷವನ್ನು ಸಾಧಿಸಲು ಸಾಕಷ್ಟು ಕಾರಣಗಳಿವೆ. ಆದರೆ ಕ್ಷುಲ್ಲಕ ಸೇಡಿನ ಕ್ರಿಯೆಯಂತೆ, ಮತ್ತು ಸರ್ಕಾರದ ಅಧಿಕಾರದ ದುರ್ಬಳಕೆಯಂತೆ ನನಗೆ ಕಾಣಿಸುವ ಕ್ರಿಯೆಗಳು ನಡೆಯಲು ಅವಕಾಶ ನೀಡುವಷ್ಟು ಭಾರತದ ಸಂಸ್ಥೆಗಳು ದುರ್ಬಲವಾಗಬಾರದಾಗಿತ್ತು.

ಇಂದು ನಿಮ್ಮ ಪರವಾಗಿ ನಾನು ಮಾತನಾಡುತ್ತಿರುವುದನ್ನು ಪ್ರಶ್ನಿಸುವ ಕೆಲವರು, ಬಂಧನದಲ್ಲಿದ್ದ ವ್ಯಕ್ತಿಯೊಬ್ಬ, ಅವನಿಗೆ ನೀಡಲಾದ ಚಿತ್ರ ಹಿಂಸೆಯಿಂದ ಮರಣ ಹೊಂದಿದ್ದಕ್ಕಾಗಿ ನ್ಯಾಯಾಲಯವೇ ನಿಮಗೆ ಶಿಕ್ಷೆ ವಿಧಿಸಿರುವಾಗ ನಿಮ್ಮ ಪರವಾಗಿ ಹೇಗೆ ಮಾತನಾಡಲು ಸಾಧ್ಯ ಎಂದು ಕೇಳುತ್ತಾರೆ.

ನಾನು ನಾಗರೀಕ ಸೇವೆಯಲ್ಲಿದ್ದಷ್ಟು ಕಾಲ ಮತ್ತು ನಂತರ ಕೂಡ, ಬಂಧನದಲ್ಲಿರುವವರನ್ನು ಹಿಂಸಿಸುವುದನ್ನು ಮತ್ತು ನ್ಯಾಯಾಲಯದ ಹೊರಗಿನ ಸಾವುಗಳನ್ನು ಬಲವಾಗಿ ವಿರೋಧಿಸುತ್ತಾ ಬಂದವನು. ಆದರೂ ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದ (national crime records bureau) ಮಾಹಿತಿಯನ್ನಾಧರಿಸಿ ಟೈಮ್ಸ್ ಆಫ್ ಇಂಡಿಯಾ ಮಾಡಿದ ವರದಿಯೊಂದರ ಪ್ರಕಾರ, ಗುಜರಾತ್‌ನಲ್ಲಿ ೨೦೦೧ ರಿಂದ ೨೦೧೬ ರ ನಡುವೆ ೧೮೦ ಜನ ಬಂಧನದಲ್ಲಿರುವಾಗ ಸಾವನ್ನಪ್ಪಿದ್ದಾರೆ. ಆದರೆ ಈ ರೀತಿಯ ಯಾವ ಸಾವಿಗೂ ಒಬ್ಬನೇ ಒಬ್ಬ ಪೊಲೀಸ್ ಸಿಬ್ಬಂದಿಗಾದರೂ ಶಿಕ್ಷೆಯಾಗಿಲ್ಲ. ಹಾಗಾಗಿ ನಿಮ್ಮ ವಿರುದ್ಧ ಕೈಗೊಂಡ ಕ್ರಮವು ಯಾವುದೇ ರೀತಿಯಲ್ಲೂ ನ್ಯಾಯವಾದುದೆಂದು ನಾನು ಒಪ್ಪಲಾರೆ.


ಈ ಎಲ್ಲಾ ಅಥವಾ ಹಲವು ಬಂಧನದಲ್ಲಿದ್ದಾಗಿನ ಸಾವುಗಳ

**(೯ನೇ ಪುಟಕ್ಕೆ**

ಆರ್ಥಿಕ ವಿಚಾರ

# ತೀವ್ರವಾಗುತ್ತಿರುವ ಆರ್ಥಿಕ ಹಿನ್ನಡೆ: ಒಂದು ವಿಶ್ಲೇಷಣೆ

–ಟಿ.ಎಸ್. ವೇಣುಗೋಪಾಲ್



**ದೇಶವೀಗ ಒಂದು ದೊಡ್ಡ ಆರ್ಥಿಕ ಹಿಂಜರಿತದ ಸ್ಥಿತಿಯಲ್ಲಿದೆ. ಕೈಗಾರಿಕಾ ಉತ್ಪಾದನೆ, ರಫ್ತು ವ್ಯಾಪಾರ ಕುಸಿದು ರೂಪಾಯಿಯ ಅಂತಾರಾಷ್ಟ್ರೀಯ ದರ ಒಂದೇ ಸಮನೆ ಇಳಿಯುತ್ತಿದೆ. ಇದು ದೇಶೀ ಮತ್ತು ವಿದೇಶಿ ಎರಡೂ ನೆಲೆಗಳಿಂದಲೂ ನಮ್ಮ ಆರ್ಥಿಕತೆಗೆ ಮಾರಕವಾಗಿರುವ ಸೂಚನೆಗಳು. ಇದರಿಂದಾಗಿ ಸಂಘಟಿತ ಮತ್ತು ಅಸಂಘಟಿತ ವಲಯಗಳೆರಡರಲ್ಲೂ ಭಾರಿ ಪ್ರಮಾಣದ ಉದ್ಯೋಗ ನಷ್ಟ ಉಂಟಾಗುತ್ತಿದೆ. ಸರ್ಕಾರ ಇದನ್ನು ತಡೆಯಲು ಏನೆಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ಪರಿಸ್ಥಿತಿ ತಹಬಂದಿಗೆ ಬರುತ್ತಿಲ್ಲ, ಈ ಬಗ್ಗೆ ಒಂದು ವಿವರವಾದ ಚಿತ್ರ ಇಲ್ಲಿದೆ.–ಸಂ.**

'**ಜಿ**ಡಿಪಿಯಲ್ಲಿ ಕುಸಿತ', 'ತೆರಿಗೆ ಸಂಗ್ರಹಣೆ ದಶಕದಲ್ಲೇ ಕನಿಷ್ಠ', 'ಮ್ಯೂಚುಯಲ್ ಫಂಡ್ ನೆಲಕಚ್ಚುತ್ತಿದೆ', 'ಅಟೋಮೋಬೈಲ್ ವ್ಯಾಪಾರ ಪ್ರಪಾತಕ್ಕೆ', 'ಲಕ್ಷಗಟ್ಟಲೆ ಜನ ಉದ್ಯೋಗ ಕಳೆದುಕೊಂಡರು', ಈಗ 'ಪಾರ್ಲೆ ಬಿಸ್ಕತ್ ಕಂಪೆನಿಯಲ್ಲಿ ೧೦,೦೦೦ ಉದ್ಯೋಗ ಕಡಿತ', ಹೀಗೆ ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ತರಹಾವರಿ ಸುದ್ದಿಗಳೋ ಸುದ್ದಿಗಳು. ಒಂದು ಒಳ್ಳೆಯ ಸುದ್ದಿಯೂ ಇಲ್ಲ. ಆರ್‌ಬಿಐ ಕೂಡ ಈ ಆರ್ಥಿಕ ಕುಸಿತವನ್ನು ಒಪ್ಪಿಕೊಂಡಿದೆ. ಈಗ ಇಂಡಸ್ಟ್ರಿ ಮಂದಿಯೂ ಮಾತನಾಡುತ್ತಿದ್ದಾರೆ. ಸರ್ಕಾರ ಕೊನೆಗೂ ವಾಸ್ತವದ ಗಂಭೀರತೆ ಅರ್ಥಮಾಡಿಕೊಂಡಿದೆ. ಸರ್ಕಾರದ ಪ್ರಕಾರ ಈ ಆರ್ಥಿಕ ಹಿನ್ನಡೆ ಮೂಲಭೂತವಾದದ್ದಲ್ಲ. ಕೇವಲ ತಾತ್ಕಾಲಿಕ, ಎಲ್ಲಾ ಸರಿಹೋಗುತ್ತೆ ಅಂತ ಹೇಳುತ್ತಿದೆ. ಅದಕ್ಕೆ ಪರಿಹಾರವಾಗಿ ಮತ್ತೊಮ್ಮೆ ರಿಪೋದರವನ್ನು ಕಡಿಮೆ ಮಾಡಲಾಗಿದೆ. ಅದೂ ಈ ಬಾರಿ ೩೫ ಮೂಲ ಪಾಯಿಂಟುಗಳಷ್ಟು ಕಡಿಮೆ ಮಾಡಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಈ ಪ್ರಮಾಣದ ಕಡಿತವನ್ನು ಯಾವಾಗಲೂ ಮಾಡಿರಲಿಲ್ಲ. ಇದಕ್ಕಾಗಿ ಆರ್‌ಬಿಐಯನ್ನು ಸರ್ಕಾರ ಹಲವು ವರ್ಷಗಳಿಂದ ಒತ್ತಾಯಿಸುತ್ತಲೇ ಇತ್ತು. ಇದಕ್ಕೆ ಒಪ್ಪದ ಗವರ್ನರುಗಳು ಸರ್ಕಾರದ ಕೋಪಕ್ಕೂ ಗುರಿಯಾಗಿದ್ದರು. ರಿಪೋದರವನ್ನು ಇಳಿಸುವುದರಿಂದ ಹೂಡಿಕೆ ಹೆಚ್ಚಾಗುತ್ತದೆ, ಆರ್ಥಿಕತೆ ಸುಧಾರಿಸುತ್ತೆ ಅಂತ ನಿರೀಕ್ಷಿಸಲಾಗಿತ್ತು. ಆದರೆ ಒಟ್ಟಾರೆ ಆರ್ಥಿಕ ವಾತಾವರಣವೇ ಮಂಕಾಗಿದ್ದರಿಂದ ಇದು ನಿರೀಕ್ಷಿತ ಫಲ ನೀಡಲಿಲ್ಲ.

ಸರ್ಕಾರ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಂಡಂತಿದೆ ಮತ್ತು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಹೆಚ್ಚಿನವು ನಿರೀಕ್ಷಿತ ಕ್ರಮಗಳು. ಬಜೆಟ್ಟಿನ ಹೇಳಿಕೆಗಳಿಂದ ಉಂಟಾಗಿದ್ದ ಕೆಲವು ದುಷ್ಪರಿಣಾಮಗಳನ್ನು ಸರಿಪಡಿಸಲು ಕೆಲವು ಕ್ರಮಗಳನ್ನು ಹಿಂತೆಗೆದುಕೊಂಡಿದೆ. ವೇಗವಾಗಿ ಹೊರಗೆ ಹರಿದು ಹೋಗುತ್ತಿದ್ದ ವಿದೇಶಿ ಬಂಡವಾಳದ ಹರಿವಿಗೆ ಕಡಿವಾಣ ಹಾಕಲು ವಿಧಿಸಿದ್ದ ಹೆಚ್ಚುವರಿ ೨% ತೆರಿಗೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಯಾವುದೇ ರೀತಿಯ ಹೂಡಿಕೆಯನ್ನು ಹೆಚ್ಚಿಸಲು ಸರ್ಕಾರದ ಬಳಿ ಹಣ ಇಲ್ಲದಿರುವುದು ಸ್ಪಷ್ಟ. ಅದರಿಂದ ರಿಸರ್ವ್ ಬ್ಯಾಂಕಿನಿಂದ ೧.೭೬ ಟ್ರಿಲಿಯನ್ ರೂಪಾಯಿಗಳನ್ನು ಪಡೆದುಕೊಳ್ಳಲಾಗಿದೆ. ಇದನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದು ಸ್ಪಷ್ಟವಿಲ್ಲದಿದ್ದರೂ ಇದರ ಬಳಕೆಯಿಂದ ಬ್ಯಾಂಕುಗಳ ಸಾಲಕೊಡುವ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಅದರಿಂದ ಅಟೊಮೊಬೈಲ್ ಕ್ಷೇತ್ರಕ್ಕೆ ಅನುಕೂಲವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ಆದರೆ ಇದನ್ನು ಕೊರತೆ ಬಿದ್ದಿರುವ ಕಂದಾಯದ ಸಂಗ್ರಹಣೆಯನ್ನು ತುಂಬಿಕೊಳ್ಳಲು ಸರ್ಕಾರ ಬಳಸಿಕೊಂಡರೆ ಪರಿಣಾಮ ಇನ್ನಷ್ಟು ಕೆಟ್ಟದಾಗುತ್ತದೆ. ವರಮಾನ ತೆರಿಗೆ "ಟೆರರಿಸಂ"ಗೆ ತಕ್ಷಣಕ್ಕೆ ಕಡಿವಾಣ ಹಾಕುವ ಭರವಸೆಯೂ ಇದೆ. ಆದರೆ ಕೈಗಾರಿಕೆ ಸರ್ಕಾರದಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ. ಅವರು ಜಿಎಸ್‌ಟಿಯಲ್ಲಿ ಹೆಚ್ಚಿನ ಕಡಿತವನ್ನು ನಿರೀಕ್ಷಿಸುತ್ತಿದ್ದಾರೆ. ದಿನೇ ದಿನೇ ಅವುಗಳ ಸ್ಥಿತಿ ಬಿಗಡಾಯಿಸುತ್ತಿದೆ. ಆಗಸ್ಟಿನಲ್ಲಿ ಶೇಕಡ ೨೩.೫೫ರಷ್ಟು ಮಾರಾಟ ಕುಸಿದಿದೆ. ಇದೇ ಪರಿಸ್ಥಿತಿ ಇನ್ನೊಂದೆರಡು ತಿಂಗಳು ಮುಂದುವರಿದರೂ ಪರಿಸ್ಥಿತಿ ಹೆಚ್ಚು ಗಂಭೀರವಾಗುತ್ತದೆ.

ಉತ್ಪಾದನಾ ಕ್ಷೇತ್ರದಲ್ಲಿ ಆಗುತ್ತಿರುವ ಈ ಕುಸಿತ ಒಟ್ಟಾರೆ ಆರ್ಥಿಕತೆಯ ಮೇಲೆ ಆಗುತ್ತದೆ. ಜಿಡಿಪಿ ಕನಿಷ್ಠ ಶೇಕಡ ೮ರಷ್ಟು ಇರುತ್ತದೆ ಅಂತ ಒಂದು ಆಸೆ ಇತ್ತು. ಅದನ್ನು ನೆಚ್ಚಿಕೊಂಡೇ ಬಜೆಟ್ ತಯಾರಾಗಿತ್ತು. ೫ ಟ್ರಿಲಿಯನ್ ಆರ್ಥಿಕತೆಯ ಸ್ಲೋಗನ್ ಕೂಡ ಚಾಲ್ತಿಗೆ ಬಂತು. ಆದರೆ ಅದು ಹೆಚ್ಚುವುದಿರಲಿ ಶೇಕಡ ೫ಕ್ಕೆ ಇಳಿದಿದೆ. ಇದನ್ನು ಸ್ವತಃ ಆರ್‌ಬಿಐ ಹೇಳಿದೆ. ಅದು ಇನ್ನೂ ಕಡಿಮೆ ಅಂತ ಅಷ್ಟೇ ವಿಶ್ವಾಸದಿಂದ ಹೇಳುವವರೂ ಇದ್ದಾರೆ. ಜಿಡಿಪಿಯ ಬಗ್ಗೆ ಅನುಮಾನಗಳು ಒಳಗೆ ಹೊರಗೆ ಸಾಕಷ್ಟು ವ್ಯಕ್ತವಾಗುತ್ತಿದೆ. ಅದಕ್ಕೆ ಒಂದು ಕಾರಣ ಅಂದರೆ ವಾಸ್ತವ ಜಗತ್ತನ್ನು ಗಮನಿಸಿದರೆ ಪರಿಸ್ಥಿತಿ ಹಾಗೆ ಕಾಣುತ್ತಿಲ್ಲ. ಕೋಟ್ಯಾಂತರ ಜನ ಕಾರ್ಮಿಕರು, ಉದ್ಯೋಗಿಗಳು, ಹಾಗೂ ಉತ್ಪಾದಕರು ಇವರೆಲ್ಲರ ನಿಜ ಬದುಕಿನ ವಾಸ್ತವ ಬೇರೆಯ ಚಿತ್ರವನ್ನೇ ಕೊಡುತ್ತಿದೆ. ಜಿಡಿಪಿ ಏರಿಬಿಟ್ಟರೆ ಒಳ್ಳೆಯದಾಗಿಬಿಡುತ್ತದೆ ಅಂತ ಅಲ್ಲ. ಸಧ್ಯಕ್ಕೆ ಜನ ಅದರ ಹಿಂದೆ ಬಿದ್ದಿದ್ದಾರೆ. ಅದನ್ನೇ ಕೇಂದ್ರವನ್ನಾಗಿ ಇಟ್ಟುಕೊಂಡು ಆರ್ಥಿಕತೆಯನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಜಿಡಿಪಿಯನ್ನು ಗಮನಿಸಲಾಗುತ್ತಿದೆ ಅಷ್ಟೆ. ಜಿಡಿಪಿಯನ್ನೇ ಮಾಪಕವಾಗಿ ಇಟ್ಟುಕೊಂಡರೂ ಆರ್ಥಿಕತೆಯಲ್ಲಿ ಹಿನ್ನಡೆ ಕಾಣುತ್ತಿದೆ. ಅದು ಇನ್ನೂ ಕುಸಿಯಬಹುದು ಎಂಬ ಅನುಮಾನಗಳಿವೆ. ಹಲವು ಅಧ್ಯಯನಗಳು ಈ ಅನುಮಾನವನ್ನೇ ಗಟ್ಟಿಮಾಡುತ್ತಿವೆ.

ಏಪ್ರಿಲ್‌ನಿಂದ ಜೂನ್‌ವರೆಗಿನ ಮೂರು ತಿಂಗಳ ಒಟ್ಟಾರೆ ತೆರಿಗೆ ಸಂಗ್ರಹಣೆ ಹತ್ತು ವರ್ಷದಲ್ಲೇ ಕನಿಷ್ಠ ಅಂತ ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನೇ ಗಮನಿಸಿ. ಈ ಅವಧಿಯಲ್ಲಿ ಕೇವಲ ೪,೦೦,೪೨೧ ಕೋಟಿ ರೂಪಾಯಿ ಸಂಗ್ರಹವಾಗಿದೆ ಅಂತ ಇಕನಾಮಿಕ್ ಟೈಮ್ಸ್ ವರದಿ ಮಾಡಿದೆ. ಅಂದರೆ ಶೇಕಡ ೧.೩೬ರಷ್ಟು. ಇಡೀ ದಶಕದಲ್ಲಿ ಇದೇ ಕಡಿಮೆ ಅಂದುಕೊಳ್ಳಲಾಗಿತ್ತು. ಈಗ ಜುಲೈನಲ್ಲಿ ಇನ್ನಷ್ಟು ಕಡಿಮೆಯಾಗಿದೆ ಅನ್ನುವ ಅಂದಾಜು ಆತಂಕಕಾರಿಯಾಗಿದೆ. ಬಜೆಟ್ಟಿನಲ್ಲಿ ಸರ್ಕಾರದ ನಿರೀಕ್ಷೆಯನ್ನು ಗಮನಿಸಿದರೆ ಇದರ ಗಂಭೀರತೆ ಅರ್ಥ ಆಗುತ್ತದೆ. ಈ ವರ್ಷ ಕಳೆದ ವರ್ಷಕ್ಕಿಂತ ಶೇಕಡ ೧೮ರಷ್ಟು ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಅನ್ನುವ ನಿರೀಕ್ಷೆಯನ್ನು ಬಜೆಟ್ಟಿನಲ್ಲಿ ಕಾಣಬಹುದು. ಅಂದರೆ ಒಟ್ಟು ೨೪.೬ ಲಕ್ಷಕೋಟಿ ರೂಪಾಯಿ ಸಂಗ್ರಹಣೆ ಆಗಬೇಕು. ಅಷ್ಟು ಆಗುತ್ತೆ ಅನ್ನುವ ನಂಬಿಕೆಯಿಂದಲೇ ಬಜೆಟ್ಟಿನ ಲೆಕ್ಕಾಚಾರ ನಡೆದಿರುವುದು. ಈ ಮೂರು ತಿಂಗಳಲ್ಲಿ ಆಗಿರುವ ಸಂಗ್ರಹಣೆ ನೋಡಿದರೆ ಇನ್ನು ಮೂರು ತಿಂಗಳಿನಲ್ಲಿ ಉಳಿದ ೨೦.೫ ಲಕ್ಷ ಕೋಟಿ ಸಂಗ್ರಹವಾಗುತ್ತದೆ ಅಂತ ನಂಬಿಕೊಳ್ಳುವುದು ಕಷ್ಟ. ಕಳೆದ ವರ್ಷಗಳ ಅಂಕಿ ಅಂಶಗಳು ಈ ಅನುಮಾನವನ್ನು ಇನ್ನಷ್ಟು ಗಟ್ಟಿಮಾಡುತ್ತದೆ.

ಕಳೆದ ಎರಡು ವರ್ಷಗಳನ್ನು ಗಮನಿಸಿದರೆ ತೆರಿಗೆ ಆದಾಯ ಗಣನೀಯವಾಗಿ ಕಡಿಮೆಯಾಗುತ್ತಿರುವುದು ತಿಳಿಯುತ್ತದೆ. ೨೦೧೬–೧೭ರಲ್ಲಿ ಅದರ ದರ ಶೇಕಡ ೧೭ರಷ್ಟಿತ್ತು. ೧೭–೧೮ರಲ್ಲಿ ಅದು ಶೇಕಡ ೧೧ರಷ್ಟು ನಂತರ ೨೦೧೮–೧೯ರಲ್ಲಿ ಕೇವಲ ಶೇಕಡ ೮ಕ್ಕೆ ಇಳಿದಿದೆ. ಅಂದರೆ ಕೇಂದ್ರದ ತೆರಿಗೆ ಆದಾಯ ಕಡಿಮೆಯಾಗುತ್ತಲೇ ಇದೆ. ತೆರಿಗೆ ಆದಾಯದ ಇಳಿತ ನಿಜವಾಗಿ ಆಗಿರುವುದು ಪರೋಕ್ಷ ತೆರಿಗೆಯಲ್ಲಿ. ನೇರ ತೆರಿಗೆ ಹೆಚ್ಚು ಕಮ್ಮಿ ಜಿಡಿಪಿಗೆ ಹೋಲಿಸಿ ನೋಡಿದರೆ ಅಷ್ಟೇ ಇದೆ. ಕೇಂದ್ರಕ್ಕೆ ಬರುತ್ತಿದ್ದ ಒಟ್ಟು ಪರೋಕ್ಷ ತೆರಿಗೆ ೨೦೧೬–೧೭ರಲ್ಲಿ ಶೇಕಡ ೨೦ರಷ್ಟಿತ್ತು. ಅದು ಜಿಎಸ್‌ಟಿ ಜಾರಿಗೆ ಬಂದ ಮೇಲೆ ೨೦೧೭–೧೮ರಲ್ಲಿ ಕೇವಲ ಶೇಕಡ ೬.೩ರಷ್ಟಾಗಿತ್ತು. ೨೦೧೮–೧೯ರಲ್ಲಿ ಅದು ಕೇವಲ ಶೇಕಡ ೨.೭ರಷ್ಟಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಪರಿಷ್ಕೃತ ಅಂದಾಜಿನ ಪ್ರಕಾರ ಕೇಂದ್ರದ ತೆರಿಗೆ ಆದಾಯಕ್ಕೆ ಸಂಬಂಧಿಸಿದಂತೆ ೨೦೧೮–೧೯ರಲ್ಲಿ ಒಟ್ಟು ೨೨,೪೮,೧೭೫ ಕೋಟಿ ರೂಪಾಯಿಗಳು ಸಂಗ್ರಹವಾಗಬೇಕಿತ್ತು. ಆದರೆ ಆದರೆ ಸಿಜಿಎ ಮಾಹಿತಿಯ ಪ್ರಕಾರ ಆ ಸಾಲಿನಲ್ಲಿ ಸಂಗ್ರಹವಾಗಿರುವ ತೆರಿಗೆ ೨೦,೮೦,೨೦೩ ಕೋಟಿ ರೂಪಾಯಿಗಳು. ಅಂದರೆ ಕೇಂದ್ರದ ತೆರಿಗೆ ಆದಾಯದಲ್ಲಿ ೧,೬೫,೯೭೨ ಕೋಟಿ ಕಡಿಮೆಯಾಗಿದೆ. ಅದು ಒಟ್ಟು ತೆರಿಗೆ ಆದಾಯದ ಪರಿಷ್ಕೃತ ಅಂದಾಜಿನ ಶೇಕಡ ೧೩.೫ರಷ್ಟು! ಜಿಡಿಪಿ ಪ್ರಮಾಣಕ್ಕೆ ಹೋಲಿಸಿದರೆ ಶೇಕಡ ೧ರಷ್ಟು. ಅದರಲ್ಲಿ ವಿಶೇಷವಾಗಿ ಆದಾಯ ತೆರಿಗೆಯಲ್ಲಿ ೬೭,೩೪೬ ಕೋಟಿ ಮತ್ತು ಜಿಎಸ್‌ಟಿಯಲ್ಲಿ ೫೯,೯೩೦ ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿದೆ. ಅದನ್ನು ಸರಿದೂಗಿಸಿಕೊಳ್ಳಬೇಕೆಂದರೆ ಕಳೆದ ವರ್ಷಕ್ಕಿಂತ ಈ ವರ್ಷ ಶೇಕಡ ೨೫.೩ರಷ್ಟು ಅಂದರೆ ಸುಮಾರು ೪,೦೦,೦೦೦ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಸಂಗ್ರಹವಾಗಬೇಕು. ಜಿಡಿಪಿ ದರ ಒಂದೇ ಸಮ ಇಳಿಯುತ್ತಿರುವುದನ್ನು ನೋಡಿದರೆ ಇದರ ಸಾಧ್ಯತೆಯ

ಬಗ್ಗೆ ಅನುಮಾನ ಬರುತ್ತದೆ. ಆರ್ಥಿಕತೆ ಕುಂಠಿತವಾದಷ್ಟು ತೆರಿಗೆ ಸಂಗ್ರಹಣೆಯೂ ಕಡಿಮೆಯಾಗುವುದು ಸಹಜವೇ. ಹಾಗಾಗಿ ಆರ್ಥಿಕ ಪ್ರಗತಿ ತೀವ್ರವಾಗದೇ ಹೋದರೆ ಪರಿಸ್ಥಿತಿ ಸುಧಾರಿಸುವುದು ಕಷ್ಟ. ಜೊತೆಗೆ ನಿರುದ್ಯೋಗ, ಅಸಮಾನತೆ ಇವೆಲ್ಲಾ ಏರುತ್ತಾ ಹೋಗುವುದು ಕೂಡ ನಿರೀಕ್ಷಿತವೆ.

ತೆರಿಗೆಯ ಆದಾಯ ಕಡಿಮೆಯಾಗುವುದರ ಪರಿಣಾಮ ರಾಜ್ಯ ಸರ್ಕಾರಗಳ ಮೇಲೂ ಆಗುತ್ತದೆ. ಅವುಗಳಿಗೆ ಬರುವ ಆದಾಯ ಕಡಿಮೆಯಾಗುತ್ತದೆ. ಹಾಗಾಗಿ ಎಲ್ಲದಕ್ಕೂ ಅವರು ಕೇಂದ್ರವನ್ನು ಅವಲಂಬಿಸಬೇಕಾಗುತ್ತದೆ. ಅವರ ಮರ್ಜಿಯನ್ನು ಅನುಸರಿಸಬೇಕಾಗುತ್ತದೆ.

ಇದನ್ನು ಸರ್ಕಾರ ತನ್ನ ಹೂಡಿಕೆಯನ್ನು ಕಡಿಮೆ ಮಾಡಿಕೊಳ್ಳುವುದರಿಂದ ಅಥವಾ ವಿತ್ತೀಯ ಕೊರತೆಯನ್ನು ಕಡಿಮೆ ಮಾಡಿಕೊಳ್ಳುವುದರಿಂದ ಸರಿಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಹೂಡಿಕೆಯನ್ನು ಕಡಮೆ ಮಾಡಿದರೆ ಆರ್ಥಿಕತೆ ಮತ್ತಷ್ಟು ಕುಂಠಿತವಾಗುತ್ತದೆ. ಈಗ ಆಗುತ್ತಿರುವುದು ಅದೇ.

ಇವೆಲ್ಲಾ ಒಟ್ಟಾರೆ ಬೇಡಿಕೆಯ ಮೇಲೆ ಪರಿಣಾಮ ಬೀರುತ್ತದೆ. ಒಟ್ಟು ಪರಿಣಾಮವಾಗಿ ಆರ್ಥಿಕತೆ ಕುಸಿಯುತ್ತಿದೆ ಅನ್ನುವುದು ಸ್ಪಷ್ಟ. ಜೊತೆಗೆ ವಿಶ್ವದ ಆರ್ಥಿಕತೆಯ ಪರಿಣಾಮವೂ ಇದರ ಜೊತೆಗೆ ಸೇರಿಕೊಂಡರೆ ಪರಿಣಾಮ ಇನ್ನಷ್ಟು ಕೆಟ್ಟದಾಗುತ್ತದೆ. ಹಾಗಾಗಿಯೇ ಈ ಬಾರಿ ಬಹುರಾಷ್ಟ್ರೀಯ ಕಂಪೆನಿಯ ಜನರೂ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ವಾಸ್ತವ ಪರಿಸ್ಥಿತಿ ಹಾಗಿದ್ದೂ ಇದು ಅಲ್ಪಕಾಲೀನ ಸಮಸ್ಯೆ ಅಂತ ಪರಿಗಣಿಸುವುದು ಸಾಧುವಲ್ಲ. ದೇಶದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಹಾಕಿಕೊಳ್ಳುವುದು ಅನಿವಾರ್ಯ. ಈ ಕ್ರಮಗಳು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಉಪಯೋಗವಿಲ್ಲದೇ ಇರಬಹುದು. ಆದರೆ ಒಟ್ಟಾರೆ ಒಳಿತಿಗೆ ಬೇಕು. ಡಿಮಾನಿಟೈಸೇಷನ್ ಅಂತ ಕ್ರಮಗಳು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಅನುಕೂಲವಾಗಿದೆ. ಅದರ ಉದ್ದೇಶವೂ ಒಳ್ಳೆಯದೇ ಇರಬಹುದು. ಆದರೆ ಆರ್ಥಿಕತೆಯ ಮೇಲೆ ಅದರಿಂದ ಕೆಡಕಾಗಿರುವುದು ನಿಜ. ಹೂಡಿಕೆಯ ಮೇಲೆ ಮಾಡಿರುವ ದುಷ್ಪರಿಣಾಮವನ್ನು ಟಾಸ್ಕ್ ಫೋರ್ಸ್ ವರದಿ ಇತ್ತೀಚಿಗೆ ಬೆಳಕಿಗೆ ತಂದಿದೆ. ಹಾಗೆಯೇ ನಿರುದ್ಯೋಗ ದರ ಕೂಡ ೨೦೧೭-೧೮ರಲ್ಲಿ ಅತಿ ಹೆಚ್ಚು ಎಂದು ಆ ವರದಿ ಹೇಳಿದೆ.

ಸಂಪತ್ತಿನ ಮೇಲೆ ತೆರಿಗೆ, ವಾರಸುದಾರಿಕೆ (ಇನ್‌ಹರಿಟೆನ್ಸ್) ತೆರಿಗೆ, ಹೀಗೆ ಮಿಕ್ಕ ಆದಾಯದ ಮೂಲಗಳನ್ನು ಪರಿಶೀಲಿಸಿ, ಸರ್ಕಾರ ತನ್ನ ಹೂಡಿಕೆಯನ್ನು ಹೆಚ್ಚಿಸಿಕೊಳ್ಳುವುದು ತುರ್ತಾಗಿ ಆಗಬೇಕಾಗಿದೆ. ಸರ್ಕಾರದ ಹೂಡಿಕೆಯ ಮಹತ್ವವನ್ನು ಕೇನ್ಸ್ ೮೦ ವರ್ಷಗಳ ಹಿಂದೆಯೇ ಕಂಡುಕೊಂಡಿದ್ದ. ಆಗ ಇದ್ದ ಆರ್ಥಿಕ ಕುಸಿತ, ಹಾಗೂ ನಿರುದ್ಯೋಗಕ್ಕೆ ಸರ್ಕಾರದ ಹೂಡಿಕೆ ಅನಿವಾರ್ಯ ಅಂತ ಒಪ್ಪಿಕೊಂಡಿದ್ದ. ಕೇನ್ಸ್ ನಮಗೆಲ್ಲಾ ಗೊತ್ತಿರುವಂತೆ ಸಮಾಜವಾದಿ ಚಿಂತಕನೇನಲ್ಲ. ಅವನು ಈ 'ಬಂಡವಾಳಶಾಹಿ' ಆರ್ಥಿಕತೆಯನ್ನು ಒಪ್ಪಿಕೊಂಡಿದ್ದವನೆ. ಈಗಲೂ ಉದ್ಯೋಗ ಕುಸಿಯುತ್ತಿದೆ. ಕಳೆದ ಆರೇಳು ವರ್ಷಗಳಲ್ಲಿ ಸುಮಾರು ೯೧ ಲಕ್ಷ ಜನ ಕೆಲಸ ಕಳೆದುಕೊಂಡಿದ್ದಾರೆ. ಜಿಡಿಪಿ ಹೆಚ್ಚಾಗಿಬಿಟ್ಟರೆ ಉದ್ಯೋಗ ಜಾಸ್ತಿಯಾಗಿಬಿಡುತ್ತೆ ಅನ್ನುವರು, ಈ ಅವಧಿಯಲ್ಲಿ ಜಿಡಿಪಿ ದರ ಚೆನ್ನಾಗಿಯೇ ಇತ್ತು ಅನ್ನುವುದನ್ನು ಗಮನಿಸಬೇಕು.

ಸಾಮಾನ್ಯವಾಗಿ ಆರ್ಥಿಕತೆಯನ್ನು ಸುಧಾರಿಸುವುದಕ್ಕೆ ಎರಡು ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ಕೇಂದ್ರ ಬ್ಯಾಂಕ್‌ನಿಂದ ರಿಪೋ ದರವನ್ನು ಕಡಿಮೆ ಮಾಡುವುದು. ಇದನ್ನು ಮಾನಿಟರಿ ಪಾಲಿಸಿ ಅಂತ ಸಾಮಾನ್ಯವಾಗಿ ಕರೆಯಲಾಗುತ್ತದೆ. ಎರಡನೆಯದು ಕೇಂದ್ರ ಸರ್ಕಾರ ತೆರಿಗೆಯನ್ನು ಹಾಗೂ ಹೂಡಿಕೆಯನ್ನು ಹೆಚ್ಚು ಕಡಿಮೆ ಮಾಡುವ ಮೂಲಕ ಆರ್ಥಿಕತೆಯನ್ನು ಪ್ರಭಾವಿಸುತ್ತದೆ. ಇದನ್ನು ವಿತ್ತೀಯ ಅಥವಾ ಫಿಸ್ಕಲ್ ಪಾಲಿಸಿ ಎಂದು ಕರೆಯುವುದು ವಾಡಿಕೆ.

೨೦೧೯ರಲ್ಲಿ ಆರ್‌ಬಿಐ ಒಟ್ಟಾರೆಯಾಗಿ ರಿಪೋ ದರದಲ್ಲಿ ೧೧೦ ಮೂಲ ಪಾಯಿಂಟುಗಳಷ್ಟು ಕಡಿತ ಮಾಡಿದೆ. ಆದರೆ ಅದು ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುವುದರಲ್ಲಿ ಯಶಸ್ವಿಯಾದಂತೆ ಕಾಣಿಸುತ್ತಿಲ್ಲ. ಹಾಗಾಗಿ ಕೇಂದ್ರ ಬ್ಯಾಂಕುಗಳು ತರುವ ಮಾನಿಟರಿ ಪಾಲಿಸಿಗಳು ಪರಿಹಾರವಲ್ಲ ಅಥವಾ ಅವಷ್ಟೇ ಸಾಲುವುದಿಲ್ಲ ಅನ್ನುವುದು ಸ್ಪಷ್ಟ. ಈಗ ಕೇಂದ್ರ ಸರ್ಕಾರವೇ ಕಾರ್ಯಪ್ರವೃತ್ತವಾಗುವುದು ಅನಿವಾರ್ಯ. ಕಡಿಮೆಯಾಗುತ್ತಿರುವ ಬೇಡಿಕೆಯನ್ನು ಸುಧಾರಿಸುವುದಕ್ಕೆ ಸರ್ಕಾರ ಹೂಡಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಇದರಿಂದ ವಿತ್ತೀಯ ಕೊರತೆ ಜಾಸ್ತಿಯಾಗಬಹುದು ಅನ್ನುವುದು ಸರ್ಕಾರದ ಹಿಂಜರಿತಕ್ಕೆ ಕಾರಣವಿರಬಹುದು. ಯಾಕೆಂದರೆ ಸರ್ಕಾರವೇ ವಿತ್ತೀಯ ಕೊರತೆಯನ್ನು ಕಡಿತಗೊಳಿಸಬೇಕೆಂದು ನಿರ್ಬಂಧ ಹಾಕಿಕೊಂಡಿದೆ. ಸರ್ಕಾರದ ರೆವಿನ್ಯೂ ಕೊರತೆಯನ್ನು ಶೂನ್ಯಕ್ಕೆ ಇಳಿಸಿದರೆ ವಿತ್ತೀಯ ಕೊರತೆಗೆ ಸಂಬಂಧಿಸಿದಂತೆ ಹೆಚ್ಚಿನ ಸ್ವಾತಂತ್ರ ಸಿಗುತ್ತದೆ ಅನ್ನುವ ಸಲಹೆಯನ್ನೂ ಕೆಲವರು ನೀಡಿದ್ದಾರೆ. ವಿತ್ತೀಯ ಕೊರತೆ ೩ಕ್ಕಿಂತ ಹೆಚ್ಚಿರಬಾರದೆಂಬ ತರ್ಕವೇ ಅಷ್ಟು ಸಮಂಜವಲ್ಲ. ಜೊತೆಗೆ ಸರ್ಕಾರಕ್ಕೆ ತೆರಿಗೆ ಸಂಗ್ರಹಣೆಯೂ ತುಂಬಾ ಕಡಿಮೆಯಾಗುತ್ತಿದೆ. ಸರ್ಕಾರದ ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯಲ್ಲಿ ಮಾಡಿಕೊಂಡು ಅವಾಂತರಗಳೇ ಮೊದಲಾದ ಕ್ರಮಗಳು ಸಮಸ್ಯೆಯನ್ನು ತೀವ್ರಗೊಳಿಸಿವೆ. ಇವನ್ನು ಹಲವು ವರದಿಗಳು ಸಾಬೀತುಗೊಳಿಸಿವೆ.

ಈಗ ತೀವ್ರವಾಗುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಮಸ್ಯೆ ಭಾರತದ ಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ. ಎಲ್ಲಾ ದೇಶಗಳು ರಫ್ತಿನಲ್ಲಿ ಆಗುತ್ತಿರುವ ಕೊರತೆಯನ್ನು ತುಂಬಿಕೊಳ್ಳಲು ಆಂತರಿಕ ಬೇಡಿಕೆಯನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿವೆ. ಭಾರತದಲ್ಲಿ ಆಂತರಿಕ ಬೇಡಿಕೆ ತುಂಬಾ ಕುಸಿದಿದೆ. ತ್ರೈಮಾಸಿಕ ಅಂಕಿಅಂಶಗಳನ್ನು ನೋಡಿದರೆ ಅದು ಗಣನೀಯವಾಗಿ ಕುಸಿಯುತ್ತಿರುವುದು ಕಾಣುತ್ತದೆ.



ಈಗ ನಾವು ನೆಚ್ಚಿಕೊಂಡು ಬಂದಿರುವ ಮಾರುಕಟ್ಟೆ ಆಧಾರಿತ ಆರ್ಥಿಕತೆಯ ಸಿದ್ಧಾಂತವನ್ನು ಕುರಿತು ಮರುಚಿಂತನೆ ಮಾಡುವ ಸಮಯ ಬಂದಿದೆ. ಪದೇ ಪದೇ ಎದುರಾಗುತ್ತಿರುವ, ಹೆಚ್ಚು ಹೆಚ್ಚು ತೀವ್ರವಾಗುತ್ತಿರುವ ಬಿಕ್ಕಟ್ಟಿಗೆ ಉದಾರವಾದಿ ಆರ್ಥಿಕತೆ ಪರಿಹಾರ ಒದಗಿಸಲಾರದು.

**(ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರಾದ ಮೈಸೂರಿನ ಟಿ.ಎಸ್. ವೇಣುಗೋಪಾಲ್ ಆರ್ಥಿಕ ವಿಷಯಗಳ ವಿಶ್ಲೇಷಕರೂ ಹೌದು)**

---

**೭ನೇ ಪುಟದಿಂದ)**


ತನಿಖೆಯಾಗಿದ್ದರೆ, ಅಥವಾ ಹಲವಾರು ಪೊಲೀಸ್ ಅಧಿಕಾರಿಗಳಿಗೆ ಕೊಲೆಯ ಕಾರಣಕ್ಕೆ ಶಿಕ್ಷೆಯಾಗಿದ್ದರೆ, ನಿಮ್ಮ ವಿರುದ್ಧ ಕೈಗೊಂಡ ಕ್ರಮವನ್ನು ನ್ಯಾಯವಾದುದೆಂದು ನಾನು ಆ ಕ್ರಮವನ್ನು ಬೆಂಬಲಿಸುತ್ತಿದ್ದೆ. ಒಬ್ಬ ವ್ಯಕ್ತಿ ೩೦ ವರ್ಷಗಳ ಹಿಂದೆ ಬಂಧನದಿಂದ ಬಿಡುಗಡೆಯಾದ ೯ ದಿನಗಳ ನಂತರ ಸಾವಿಗೀಡಾಗಿದ್ದಕ್ಕಾಗಿ, ನಿಮ್ಮನ್ನು ಮತ್ತು ಮತ್ತೊಬ್ಬ ಅಧಿಕಾರಿಯನ್ನು ಮಾತ್ರ ಶಿಕ್ಷಿಸುವುದನ್ನು ಬೆಂಬಲಿಸಲಾರೆ. ಸ್ವತಂತ್ರ ಭಾರತ ಕಂಡ ಒಬ್ಬ ಅತ್ಯಂತ ಪ್ರಬಲ, ಮತ್ತು ಯಾವುದನ್ನೂ ಕ್ಷಮಿಸಲಾರದ ನಾಯಕನ ವಿರುದ್ಧ ಗಂಭೀರವಾದ ಆಪಾದನೆ ಮಾಡುವಲ್ಲಿ ನೀವು ತೋರಿದ ಅಪ್ಪಟ ಧೈರ್ಯಕ್ಕಾಗಿ ನಿಮ್ಮನ್ನು ಮೆಚ್ಚುವ ಹಲವಾರು ಜನ ಇದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು ಯಾವ ರೀತಿಯಲ್ಲೂ ನಿಮ್ಮ ವಿಚಾರಣೆ ಮತ್ತು ನೋವನ್ನು ಕಡಿಮೆ ಮಾಡದು. ನಿಮ್ಮ ಮಕ್ಕಳಿಗೆ, ಶ್ವೇತಾ ಅವರಿಗೆ ತಿಳಿದಿರುವ ಹಾಗೆ ನನಗೂ ತಿಳಿದಿದೆ. ನ್ಯಾಯಕ್ಕಾಗಿ ನೀವು ನಡೆಸಬೇಕಾಗಿರುವ ಹೋರಾಟ ಬಹಳ ದೀರ್ಘವಾದುದು, ಅನಿಶ್ಚಿತವಾದುದು, ಹಲವು ನಿರಾಶೆ ಮತ್ತು ಅತಿಯಾದ ದುಃಖಗಳಿಂದ ತುಂಬಿರುವಂತಹುದು.

ಆದರೆ ನನಗೆ ತಿಳಿದಿದೆ, ನಿಮಗೆ ಇದನ್ನು ತಡೆದುಕೊಳ್ಳುವ, ಹೋರಾಟ ಮುಂದುವರಿಸುವ, ಯಾವುದು ನ್ಯಾಯ ಮತ್ತು ಸತ್ಯ ಎಂದು ನೀವು ತಿಳಿದಿದ್ದೀರೋ ಅದರ ಪರವಾಗಿ ದೃಢವಾಗಿ ನಿಲ್ಲುವ ಮತ್ತು ಪುಟಿದೇಳುವ ಶಕ್ತಿ ನಿಮಗೆ ಇದೆ ಎಂದು. ಮತ್ತು ನನಗೆ ತಿಳಿದಿದೆ, ಒಂದು ದಿನ ಖಂಡಿತ ನೀವು ಮುಕ್ತರಾಗುತ್ತೀರಿ. ಶ್ವೇತ ಮತ್ತು ನಿಮ್ಮ ಮಕ್ಕಳೊಂದಿಗೆ ಮತ್ತು ನಮ್ಮ ದೇಶದ ಹಲವಾರು ಜನ ಪುರುಷರು ಮತ್ತು ಸ್ತ್ರೀಯರೊಡನೆ ನಾನು ಆ ದಿನಕ್ಕಾಗಿ ಕಾಯುತ್ತೇನೆ.

ನಿಮ್ಮ

**ಹರ್ಷ್ ಮಂದರ್**

**(ಸರ್ಕಾರದ ಅಧಿಕಾರಶಾಹಿ ವಿರುದ್ಧ ಪ್ರತಿಭಟಿಸಿ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿದ ಹರ್ಷ ಮಂದರ್ ಈಗ ಸೆಂಟರ್ ಫಾರ್ ಈಕ್ವಿಟಿ ಸ್ಟಡೀಸ್ ಎಂಬ ಸಂಸ್ಥೆಯ ಮೂಲಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿ ಕೊಂಡಿದ್ದಾರೆ)**



(ಕನ್ನಡಕ್ಕೆ: ಎಂ. ರಾಜು


ಕೃಪೆ: ***ಜನತಾ,*** ಜೂನ್ ೩೦, ೨೦೧೯)

**ಅಪರೂಪದ ರಾಜಕೀಯ ಹೋರಾಟಗಾರ ಎ.ಕೆ. ಸುಬ್ಬಯ್ಯ ಮತ್ತು ಗಾಂಧಿವಾದಿ ಯುವ ಗೆಳೆಯ ಸುಘೋಷ್ ಕೌಲಗಿಯವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ-ಸಂ.**

# ೨೦೧೯ರ ರಾಷ್ಟ್ರೀಯಯ ಶಿಕ್ಷಣ ನೀತಿ: ಒಂದು ನೋಟ

–ಜಿ.ಎಸ್. ಜಯದೇವ

. ನಮ್ಮ ೨೦೧೯ರ ಶಿಕ್ಷಣ ನೀತಿ ಕರಡಿನಲ್ಲಿ ಸಮಾನ ಶಾಲಾ ಶಿಕ್ಷಣದ ಕುರಿತು ಪ್ರಸ್ತಾಪವಿಲ್ಲ. ಸರ್ಕಾರವೇ ಒಂಬತ್ತು ಬಗೆಯ ಶಾಲೆಗಳನ್ನು ಹುಟ್ಟುಹಾಕಿ ಶಿಕ್ಷಣದಲ್ಲಿ ತಾರತಮ್ಯಕ್ಕೆ ಕಾರಣವಾಗಿರುವ ಬಗ್ಗೆ, ಅದನ್ನು ಸರಿಪಡಿಸುವ ಬಗ್ಗೆ ಒಂದೇ ಒಂದು ಮಾತೂ ಇಲ್ಲ....



೧೯೬೮ ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನಿಯಾಗಿದ್ದಾಗ ಕೊಥಾರಿ ಆಯೋಗವು ಶಿಕ್ಷಣ ನೀತಿಯನ್ನು ರೂಪಿಸಿದ ನಂತರ ಹಲವು ಸರ್ಕಾರಗಳು ತಮ್ಮದೇ ಶಿಕ್ಷಣ ನೀತಿಗಳನ್ನು ರೂಪಿಸಿಕೊಂಡು ಜಾರಿಗೆ ತಂದಿವೆ.. ಶ್ರೀ ಮೋದಿಯವರು ಪ್ರಧಾನಮಂತ್ರಿಗಳಾಗಿರುವ ಈ ಹೊತ್ತಿನಲ್ಲಿ ಆಧುನಿಕತೆ ಮತ್ತು ಐಶಾರಾಮಿ ಬದುಕಿಗೆ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರೋತ್ಸಾಹ ಸಿಕ್ಕಿದೆ. ಈ ಸಂದರ್ಭದಲ್ಲಿ ಮತ್ತೊಂದು ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಚರ್ಚೆಗೆ ಬಂದಿದೆ.

ಚರ್ಚೆ ನಡೆಯುತ್ತಿದೆ ಎಂಬ ನನ್ನ ಹೇಳಿಕೆಯನ್ನು ಅನೇಕ ಶಿಕ್ಷಣತಜ್ಞರು ವಿರೋಧಿಸುತ್ತಾರೆ. ಚರ್ಚೆ ನಡೆಯುತ್ತಿದೆ ಎಂಬುದು ಸುಳ್ಳು; ಸಾವಿರಾರು ಪ್ರಜ್ಞಾವಂತರ ಪ್ರತಿಕ್ರಿಯೆ ಕಸದ ಬುಟ್ಟಿ ಸೇರುತ್ತಿದೆ; 'ಗೋರ್ಕಲ್ಲ ಮೇಲೆ ಮಳೆಸುರಿದಂತೆ' ಆಗುತ್ತಿದೆ ಎಂಬುದು ನನ್ನ ಸ್ನೇಹಿತರನೇಕರ ಅಭಿಪ್ರಾಯ. ಅದೇನೇ ಇರಲಿ, ಕರಡು ಶಿಕ್ಷಣ ನೀತಿಯಲ್ಲಿರುವ ಕೆಲವು ಅಂಶಗಳನ್ನಾದರೂ ಚರ್ಚಿಸೋಣ. ಮೊದಲನೆಯದಾಗಿ ಇದರ ಕಾಣ್ಕೆಯ (vision) ಎರಡು ಪ್ರಮುಖ ಆಶಯಗಳನ್ನು ಹೀಗೆ ಹೇಳಬಹುದು: ದೇಶವು ಸುಸ್ಥಿರವಾಗಿ ಬದಲಾಗಲು ನೇರ ಕೊಡುಗೆಯನ್ನು ಕೊಡುವ ಇಂಡಿಯ–ಕೇಂದ್ರಿತ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು.

ಈ ಶಿಕ್ಷಣ ವ್ಯವಸ್ಥೆಯು ಸರ್ವರಿಗೂ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ನಮ್ಮ ಸಮಾಜವು ನ್ಯಾಯನಿಷ್ಠ, ಸ್ಪಂದನಶೀಲ, ಜ್ಞಾನ ಸಮಾಜವಾಗಿ ಪರಿವರ್ತನೆಯಾಗಬೇಕು.

'ಸುಸ್ಥಿರ', 'ಇಂಡಿಯ–ಕೇಂದ್ರಿತ' ಮತ್ತು 'ನ್ಯಾಯನಿಷ್ಠ' ಈ ಪದಗಳು ದೇಶ ಎದುರಿಸುತ್ತಿರುವ ಮೂಲಭೂತ ಸ್ವರೂದ ಸಮಸ್ಯೆಗಳಿಗೆ ಅನಿವಾರ್ಯ ಸಂವೇದನೆಗಳಾಗಿ ಕಾಣ್ಕೆಯಲ್ಲಿ ಕಾಣಿಸಿಕೊಂಡಿವೆ. ಗಾಂಧಿ ಜೀವನ ಸಂದೇಶವೂ ಈ ಪದಗಳ ಅರ್ಥವ್ಯಾಪ್ತಿಯ ವಿಸ್ತರಣೆ ಎಂದೇ ಭಾವಿಸಬಹುದು. ಆದರೆ ಶಿಕ್ಷಣ ನೀತಿಯ ೪೮೪ ಪುಟಗಳ ಕರಡಿನಲ್ಲಿ ಸುಸ್ಥಿರ ಬದಲಾವಣೆಗೆ ಪೂರಕವಾಗಿ ಸರಳಜೀವನಕ್ಕೆ, ಕಾಯಕ ಜೀವನಕ್ಕೆ ಮಕ್ಕಳನ್ನು ಸಿದ್ಧಪಡಿಸುವ ಯಾವ ಕಾಳಜಿಗಳೂ ಕಾಣಿಸುವುದಿಲ್ಲ. ಎದ್ದು ಕಾಣುವ ಈ ಕೊರತೆ ಕರಡಿನ ಹಿಂದೆ ಕೆಲಸ ಮಾಡಿರುವ ಮನಸ್ಸುಗಳ ಮನೋಧರ್ಮವನ್ನು ಮತ್ತು ಅವರು ಪ್ರಸನ್ನಗೊಳಿಸಬಯಸುವ ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ತೋರಿಸುತ್ತದೆ. 'ಇಂಡಿಯಾ ಕೇಂದ್ರಿತ ಶಿಕ್ಷಣ' ಎನ್ನುವ ಪದವನ್ನು ಇವರು ಯಾವ ಅರ್ಥದಲ್ಲಿ ಬಳಸುತ್ತಿದ್ದಾರೆ? ಇದು ಗಾಂಧಿ ಭಾರತವನ್ನು ಕುರಿತದ್ದಂತೂ ಅಲ್ಲ. ಭಾರತದ ಸ್ವರೂಪವೇ ಬದಲಾಗಿರುವ ಈ ಸಂದರ್ಭದಲ್ಲಿ, ನಾವು ಸಂಪೂರ್ಣವಾಗಿ ನಾಶವಾಗದೆ ಬದುಕಿ ಬಾಳಲು ಈಗ ಉಳಿದಿರುವಷ್ಟು ಗಾಂಧಿ ಭಾರತವನ್ನಾದರೂ ಚಿಗುರಿಸಿ ಬೆಳೆಸಲು ಪೂರಕವಾದ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕು. ಆದರೆ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು, 'ಜ್ಞಾನ ಸಮಾಜ' ನಿರ್ಮಾಣವನ್ನು ಕೇಂದ್ರದಲ್ಲಿಟ್ಟುಕೊಂಡು ಸುಸ್ಥಿರತೆ ಮತ್ತು ಸಮಾನತೆಗಳನ್ನು ಇದಕ್ಕೆ ಪೂರಕ ಅಂಶಗಳಾಗಿ ಮಾತ್ರ ಪರಿಗಣಿಸುತ್ತವೆ. ಮೇಲಾಗಿ ಈ ಕಾಣ್ಕೆ ಹೇಳುವ ಜ್ಞಾನ ಸಮಾಜದ ಜ್ಞಾನ ಮೂಲ ಯಾವುದು? ಯಾರಿಗಾಗಿ? ಈ ಪ್ರಶ್ನೆಗಳಿಗೆ ನಂತರ ಹಿಂತಿರುಗೋಣ. ದೇಶದ ಉದ್ದಗಲಕ್ಕೂ ಅಸಮಾನತೆಯನ್ನು ಬಿತ್ತಿ ಬೆಳೆಯುವ, ಅಸಮಾನತೆಯ ತೊಟ್ಟಿಲಾಗಿ ಪರಿಣಮಿಸಿರುವ ನಮ್ಮ ಶಾಲಾಶಿಕ್ಷಣದ ತಾರತಮ್ಯ ನೀತಿಯ ಬಗ್ಗೆ ಹೊಸ ಶಿಕ್ಷಣ ನೀತಿಯ ಕರಡು ಏನು ಹೇಳುತ್ತದೆ?

೧೯೬೪–೬೬ ರಲ್ಲಿ ಡಾ. ಡಿ.ಎಸ್ ಕೊಥಾರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯೊಂದನ್ನು ರೂಪಿಸಲು ಸಮಿತಿ ರಚನೆ ಮಾಡಲಾಗಿತ್ತು. ಆಯೋಗದ ಶಿಫಾರಸ್ಸಿನಂತೆ ಜಾತಿ, ಜನಾಂಗ, ಸಮುದಾಯ, ಮತ, ಆರ್ಥಿಕ ಪರಿಸ್ಥಿತಿ ಅಥವಾ ಸಾಮಾಜಿಕ ಸ್ಥಾನಮಾನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲ ಮಕ್ಕಳಿಗೂ ಮುಕ್ತವಾಗಿ ಗುಣಮಟ್ಟದ ಶಿಕ್ಷಣ ಉಚಿತವಾಗಿ ಲಭಿಸಬೇಕು; ಪೋಷಕರು ಗುಣಮಟ್ಟದ ಶಿಕ್ಷಣ ಪಡೆಯಲು ದುಬಾರಿ ಶಾಲೆಗಳಿಗೆ ಮೊರೆ ಹೋಗಬೇಕಾದ ಪರಿಸ್ಥಿತಿ ಉಂಟಾಗಬಾರದು. ಇದಲ್ಲದೆ ಆಯೋಗವು ಇಂಗ್ಲಿಷ್ ಅನ್ನು ಬೋಧನ ಮಾಧ್ಯಮವಾಗಿ ಬಳಸುವುದನ್ನು ನಿರ್ಬಂಧಿಸಬೇಕೆಂದು ಹೇಳಿ, ಪ್ರಾದೇಶಿಕ ಭಾಷೆಯಲ್ಲಿ ಕಲಿಯುವುದನ್ನು ಉತ್ತೇಜಿಸಬೇಕೆಂದು ಶಿಫಾರಸು ಮಾಡಿತ್ತು. ಇದರ ಮುಂದುವರಿದ ಭಾಗವಾಗಿ ನಮ್ಮ ಸಂಸತ್ತು ಎರಡನೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೧೯೮೯ರ ಮೇ ತಿಂಗಳಿನಲ್ಲಿ ಅಂಗೀಕರಿಸಿ, ಮತ್ತೆ ಸಮಾನ ಶಾಲಾ ಶಿಕ್ಷಣವನ್ನು ಎತ್ತಿ ಹಿಡಿಯಿತು. ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯ 'ರಾಷ್ಟ್ರೀಯ ಶಿಕ್ಷಣ ನೀತಿ ಪರಿಶೀಲನ ಸಮಿತಿ'ಯು (೧೯೯೦) ಶಿಕ್ಷಣದಲ್ಲಿ ಎಲ್ಲರಿಗೂ ಸಮಪಾಲು ದೊರೆಯುವಂತೆ ಮಾಡಲು ಸಮಾನ ಶಾಲಾ ವ್ಯವಸ್ಥೆಯನ್ನು ವಿಕಾಸಗೊಳಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸಬಹುದೆಂದು ಸಲಹೆ ನೀಡಿತು. ಸಾಧಿಸಿದ್ದೆಷ್ಟು ಎಂಬುದು ಬೇರೆಯೇ ಪ್ರಶ್ನೆ. ಆದರೆ ಸಮಾನ ಶಾಲಾ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಈ ಶಿಕ್ಷಣ ನೀತಿಗಳು ಕಾಗದದಲ್ಲಾದರೂ ಕಾಪಾಡಿಕೊಂಡು ಬಂದಿರುವುದು ಗಮನಾರ್ಹ. ನಮ್ಮ ೨೦೧೯ರ ಶಿಕ್ಷಣ ನೀತಿ ಕರಡಿನಲ್ಲಿ ಸಮಾನ ಶಾಲಾ ಶಿಕ್ಷಣದ ಕುರಿತು ಪ್ರಸ್ತಾಪವಿಲ್ಲ. ಸರ್ಕಾರವೇ ಒಂಬತ್ತು ಬಗೆಯ ಶಾಲೆಗಳನ್ನು ಹುಟ್ಟುಹಾಕಿ ಶಿಕ್ಷಣದಲ್ಲಿ ತಾರತಮ್ಯಕ್ಕೆ ಕಾರಣವಾಗಿರುವ ಬಗ್ಗೆ, ಅದನ್ನು ಸರಿಪಡಿಸುವ ಬಗ್ಗೆ ಒಂದೇ ಒಂದು ಮಾತೂ ಇಲ್ಲ.

ತಾನು ಮೂರು ವಿಧದ ಶಾಲೆಗಳನ್ನು ನಡೆಸುತ್ತಿರುವುದಾಗಿ ಸರ್ಕಾರ ಃಏಳುತ್ತಿದೆಯಾದರೂ, ಅದು ಒಂಬತ್ತು ಬಗೆಯ ಶಾಲೆಗಳನ್ನು ನಡೆಸುತ್ತಿದೆ ಎಂಬುದು ವಾಸ್ತವ. ಈ ಶಾಲೆಗಳ ನಡುವೆ ಆರ್ಥಿಕ ಹಂಚಿಕೆಯಲ್ಲಿ ವ್ಯತ್ಯಾಸವಿದೆ. ಇವುಗಳಲ್ಲಿ ಕೆಲವು ಪ್ರತಿಷ್ಠಿತ ಆಂಗ್ಲಮಾಧ್ಯಮ ಶಾಲೆಗಳು. ಇವುಗಳ ಆಡಳಿತ ವ್ಯವಸ್ಥೆ ಮತ್ತು ಪರೀಕ್ಷಾ ಮಂಡಳಿಗಳ ಸ್ವರೂಪದಲ್ಲೂ ವ್ಯತ್ಯಾಸವಿದೆ. ಹೊಸ ಶಿಕ್ಷಣ ನೀತಿಯ ಕರಡಿನಲ್ಲಿ ಕಳಪೆ 'ಶಿಕ್ಷಕರ ಶಿಕ್ಷಣ' ಸಂಸ್ಥೆ/ಕಾಲೇಜುಗಳನ್ನು ಮುಚ್ಚುವ ನಿರ್ಧಾರ ಪ್ರಕಟಿಸಲಾಗಿದೆ. ಇದು ಒಳ್ಳೆಯ ನಿರ್ಧಾರವೇ. ಈ ನಿರ್ಧಾರದಂತೆಯೇ ಸರ್ಕಾರ ನಡೆಸುತ್ತಿರುವ ಒಂಬತ್ತು ವಿವಿಧ ಶಾಲೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬಹುದಿತ್ತು. ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಂತಿದೆ. ಈ ಆಶಯಕ್ಕೆ ಸ್ವಲ್ಪ ಸಮೀಪವಿರುವ ಕರಡಿನಲ್ಲಿರುವ ಈ ಹೇಳಿಕೆಯನ್ನು ಗಮನಿಸಿ: 'ತನ್ನ ಹುಟ್ಟಿನ ಅಥವಾ ಹಿನ್ನೆಲೆಯ ದೆಸೆಯಿಂದ ಯಾವ ಮಗುವೂ ಕಲಿಯುವ ಮತ್ತು ಉನ್ನತಿ ಪಡೆಯುವ ಅವಕಾಶವನ್ನು ಕಳೆದುಕೊಳ್ಳಲಾಗದಂತಹ, ಭಾರತದ ಪ್ರತಿಯೊಂದು ಮಗುವಿಗೂ ಅನುಕೂಲವಾಗುವಂತಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಗುರಿಯನ್ನು ಈ ನೀತಿ ಹೊಂದಿದೆ'. ಯಾವ ನಿರ್ಬಂಧವನ್ನೂ ತನ್ನ ಮೇಲೆ ತಾನೇ ಹಾಕಿಕೊಳ್ಳದೆ ಯಥಾಸ್ಥಿತಿಯನ್ನು ಮುಂದುವರೆಸುವ ಇಂತಹ ನೀತಿಗಳಿಂದ ಏನು ಪ್ರಯೋಜನ? ಈ ಸಮಿತಿಯು ತನ್ನ ಅನ್ನದಾತರಿಗೆ ಅನುಷ್ಠಾನ ಕಷ್ಟಗಳನ್ನು ಕೊಡಬಾರದೆಂದು ಭಾವಿಸಿ ಶಿಕ್ಷಣ ನೀತಿಯನ್ನು ರೂಪಿಸುತ್ತಿದೆಯೆ?


ಹೊಸ ಶಿಕ್ಷಣ ನೀತಿಯ ಈ ಪ್ರಸ್ತಾವನೆಯಲ್ಲಿ ಕೆಲವು ಒಳ್ಳೆಯ ಬದಲಾವಣೆಗಳೂ ಇವೆ. ೨೦೦೯ರ ಶಿಕ್ಷಣ ಹಕ್ಕು ಕಾಯ್ದೆಯನ್ನು ೩ ರಿಂದ ೧೮ ವರ್ಷದ ಮಕ್ಕಳಿಗೆ ವಿಸ್ತರಿಸಿದೆ. ಪಠ್ಯಕ್ರಮದ ನೆಲೆಗಟ್ಟನ್ನು, ಮಕ್ಕಳ ಮೆದುಳಿನ ಬೆಳವಣಿಗೆ ಹಾಗೂ ಹಂತಹಂತವಾಗಿ ಸಾಮಾಜಿಕ ವಿಕಾಸಕ್ಕೊಳಗಾಗುವ ಘಟ್ಟಗಳಿಗನುಗುಣವಾಗಿ ೫+೩+೩+೪ ವಿನ್ಯಾಸವನ್ನು ಅನುಸರಿಸಲಾಗಿದೆ. ೨೦೨೫ರ ಒಳಗೆ ೩ ರಿಂದ ೬ ವರ್ಷದ ಎಲ್ಲ ಮಕ್ಕಳಿಗೂ ವಿಶೇಷ ಗಮನ ನೀಡಿ, ಅವರಿಗೂ 'ಶಿಕ್ಷಣ' ನೀಡುವ ಪ್ರಸ್ತಾಪವಿದೆ. ಎಳೆಯ ಮಕ್ಕಳ ಶಿಕ್ಷಣ ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ ದೊಡ್ಡ ಅಪಾಯವಾದೀತು. ಈಗಾಗಲೇಪೆ ಕಾನ್ವೆಂಟ್ ಶಾಲೆಗಳು ೩ ರಿಂದ ೬ ವರ್ಷದ ಮಕ್ಕಳಿಗೆ ಕಲಿಕೆಯ ಒತ್ತಡವನ್ನು ಹೇರುತ್ತಿದ್ದಾರೆ.

ಈ ಮಕ್ಕಳಿಗೆ 'ಹೋಂ ವರ್ಕ್' ಕೊಡಿ ಎಂದು ಪೋಷಕರೆ ಬಂದು ಟೀಚರ್‌ಗಳನ್ನು ಕಾಡುವುದುಂಟು. ಹಾಗಾಗಿ ಈ ನೀತಿಯ ಹಿಂದಿರುವ ವೈಜ್ಞಾನಿಕ ವಿವರಗಳನ್ನು ಸರಿಯಾಗಿ ವಿವರಿಸಿ ತರಬೇತಿ ನೀಡದಿದ್ದರೆ ಈ ಎಳೆಯ ಮಕ್ಕಳ ಮನಸ್ಸು ಆತಂಕಗಳ ಗೂಡಾಗಿ ಪರಿಣಮಿಸಬಹುದು. ಇದರಲ್ಲಿ ೩ ರಿಂದ ೬ ವರ್ಷದ ಮಕ್ಕಳ ಶಿಕ್ಷಣದಲ್ಲಿ ತಾಯಂದಿರ ಶಿಕ್ಷಣವೂ ಸೇರಿಕೊಳ್ಳಬೇಕು. ಎಳೇ ವಯಸ್ಸಿನ ಮಕ್ಕಳ ಮೆದುಳು–ಮನಸ್ಸು ಹೇಗೆ ವಿಕಾಸವಾಗುತ್ತದೆ, ಪೋಷಕರು ನೀಡುವ ಇತ್ಯಾತ್ಮಕ–ನೇತ್ಯಾತ್ಮಕ ಸಂಕೇತಗಳ ದೀರ್ಘಕಾಲಿಕ ಪರಿಣಾಮಗಳು–ಇತ್ಯಾದಿ ಸರಳವಾಗಿ ಅನುಸರಿಸಬಹುದಾದ ಕ್ರಮಗಳನ್ನು ತಾಯಂದಿರಿಗೆ ಶಿಕ್ಷಣ ವ್ಯವಸ್ಥೆಯೇ ನೀಡಬೇಕು. ಇದಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಮನಃಶಾಸ್ತ್ರಜ್ಞರ ನೆರವಿನಿಂದ ಬೆಳೆಸಬೇಕು.

ಈ ಹೊಸ ಶಿಕ್ಷಣ ನೀತಿಯಲ್ಲಿ ಅಧ್ಯಾಪಕರು ಮಕ್ಕಳ ಅನುಪಾತವನ್ನು ೩೦:೧ಕ್ಕೆ ಇಳಿಸಿರುವುದು ಸ್ವಾಗತಾರ್ಹ. ಸಂಪನ್ಮೂಲಗಳ ಕೊರತೆ ಇರುವ ಶಾಲಾವಲಯಗಳಲ್ಲಿ, 'ಶಾಲಾಸಂಕೀರ್ಣಗಳನ್ನು' ಹುಟ್ಟುಹಾಕಿ ಕೊರತೆಯನ್ನು ನೀಗಿಸುವ ಯೋಜನೆ ಇದೆ. ಅನೇಕ ಸ್ವಯಂ ಸೇವಾ ಸಂಸ್ಥೆಗಳು ಈಗಾಗಲೆ ಇಂತಹ ಚಟುವಟಿಕೆ ಆಧಾರಿತ ಕಲಿಕಾ ಕೇಂದ್ರಗಳನ್ನು ಸರ್ಕಾರಿ ಶಾಲೆಗಳಲ್ಲಿ ತೆರೆದು, ನೆರೆಹೊರೆಯ ಶಾಲೆಗಳು ಈ ಸಂಪನ್ಮೂಲವನ್ನು ಬಳಸಿಕೊಳ್ಳಲು ವ್ಯವಸ್ಥೆ ಮಾಡಿವೆ. ಆದರೆ ದಶಕಗಳಿಂದಲೂ ಸರ್ಕಾರಿ ಶಾಲೆಗಳಿಗಾಗಿ, ಕ್ಲಸ್ಟರ್ ಸಂಪನ್ಮೂಲ ಕೇಂದ್ರದ ಕಟ್ಟಡಗಳು ಸಿದ್ಧವಾಗಿ, ಖಾಲಿ ಕೊಠಡಿಗಳಾಗಿಯೇ ಉಳಿದು, ಕೆಲವು ಶಿಥಿಲಗೊಂಡು ಬೀಳುವ ಸ್ಥಿತಿಯನ್ನು ತಲುಪಿವೆ. ಸಂಪತ್ತು ಇಲ್ಲದ ಈ ಸಂಪನ್ಮೂಲ ಕೇಂದ್ರಗಳಿಗೆ ಕನಿಷ್ಠ ಕಲಿಕಾ ಉಪಕರಣಗಳನ್ನಾದರೂ ಒದಗಿಸಬೇಕೆಂದು ರಾಜ್ಯ ಸರ್ಕಾರದ ಅಂದಿನ ಶಿಕ್ಷಣ ಕಾರ್ಯದರ್ಶಿಯವರಾಗಿದ್ದ ಶ್ರೀ ವಿಜಯಭಾಸ್ಕರ್ ಅವರನ್ನು ಕೇಳಿದೆವು. ಅವರು ಹೇಳಿದರು–ಈ ಸರ್ವಶಿಕ್ಷಣ ಅಭಿಯಾನದ ಹಣದಿಂದ ನನಗೆ ಈ ಕಟ್ಟಡಗಳ ಮುರಿದ ಕಿಟಕಿಯನ್ನೂ ರಿಪೇರಿ ಮಾಡಲೂ ಸ್ವಾತಂತ್ರ್ಯವಿಲ್ಲ, ಎಂದ ಮೇಲೆ ಕಲಿಕಾ ಉಪಕರಣಗಳನ್ನು ಎಲ್ಲಿಂದ ಒದಗಿಸಲಿ! ಪರಿಸ್ಥಿತಿ ಹೀಗಿರುವಾಗ ಶಾಲಾ ಸಂಕೀರ್ಣಗಳು ಈ ನೀತಿಯನ್ವಯ ಹೇಗೆ ಕೆಲಸ ಮಾಡೀತು ಎಂಬುದು ಪ್ರಶ್ನೆ.

ಮಕ್ಕಳಲ್ಲಿ ಸಂಖ್ಯಾಜ್ಞಾನ ಮತ್ತು ಭಾಷಾ ಬೆಳವಣಿಗೆಗೆ ಒತ್ತು ನೀಡಿರುವ ಈ ಶಿಕ್ಷಣ ನೀತಿ ಎಂಟನೇ ತರಗತಿಯವರೆಗೆ, ಸಾಧ್ಯವಾಗದಿದ್ದಲ್ಲಿ ಕನಿಷ್ಠ ಪಕ್ಷ ಐದನೇ ತರಗತಿಯವರೆಗಾದರೂ ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಹೇಳುತ್ತದೆ. ಇದು ಸ್ವಾಗತಾರ್ಹ. ಆದರೆ ಈ ವಿಷಯದಲ್ಲಿ ಅಗತ್ಯವಿರುವೆಡೆ ನಮ್ಯ (flexible) ಮಾರ್ಗಗಳಿಗೆ ಅವಕಾಶವಿರುತ್ತದೆ ಎನ್ನುತ್ತದೆ. ಆದರೆ ಇದರ ಅರ್ಥ ಸ್ಪಷ್ಟವಿಲ್ಲ.. ತ್ರಿಭಾಷಾ ಸೂತ್ರವನ್ನು ಮುಂದುವರೆಸಿರುವ ಈ ಹೊಸ ನೀತಿ, ದಕ್ಷಿಣ ಭಾರತೀಯರಿಗೆ ಹಿಂದಿ ಭಾಷೆ ಒಂದು ಹೇರಿಕೆ ಎಂಬ ಭಾವನೆ ಬರದಂತೆ ಕೆಲವು ಸಮನ್ವಯ ಸೂತ್ರಗಳನ್ನು ಶಿಫಾರಸ್ಸು ಮಾಡಿದೆ. ಹಿಂದಿ ಮನೆಯ ಮಾತಾದ ರಾಜ್ಯಗಳ ಮಕ್ಕಳು ರಾಷ್ಟ್ರಭಾಷೆ ಮತ್ತು ಮನೆ ಮಾತು–ಈ ಎರಡೂ ಹಿಂದಿ ಆಗಿರುವುದರಿಂದ ಭಾರತದ ಮತ್ತಾವುದಾದರೂ ಒಂದು ಭಾಷೆಯನ್ನು ಈ ಮಕ್ಕಳು ಕಲಿಯಬೇಕೆಂದು, ಹಾಗಾಗಿ ಉತ್ತರ ಭಾರತೀಯರು ಎರಡು ಭಾಷೆ, ದಕ್ಷಿಣ ಭಾರತೀಯರು ಮೂರು ಭಾಷೆಗಳನ್ನು ಕಲಿಯಬೇಕಾದ ತಾರತಮ್ಯವಿಲ್ಲವೆಂದು ಸ್ಪಷ್ಟಪಡಿಸುವ ಪ್ರಯತ್ನಮಾಡಿದೆ.

ಕೊನೆಯದಾಗಿ 'ಜ್ಞಾನ ಸಮಾಜ'ದ ಪ್ರಶ್ನೆಗೆ ಹಿಂತಿರುಗೋಣ. ಶಿಕ್ಷಣ ನೀತಿಯಲ್ಲಿ ಉಲ್ಲೇಖವಾಗಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ಜಾಗತಿಕ ಜ್ಞಾನ ಸ್ಪರ್ಧೆಯಲ್ಲಿ ಭಾರತಕ್ಕೆ ಮೊದಲ ಬಹುಮಾನ ಕೊಡಿಸುವ ಆಶಯ ಹೊಂದಿರುವಂತೆ ಕಾಣುತ್ತಿದೆ. 'ತಾಕತ್ತು' ತೋರಿಸುವ ಮಾತುಗಳೇ ಹೆಚ್ಚಾಗಿ ಕೇಳಿಬರುತ್ತಿರುವ ಈ ಹೊತ್ತಿನಲ್ಲಿ ಜ್ಞಾನವೂ ಸಹ ತಾಕತ್ತಿನ ಆಯಾಮವನ್ನು ಆಕ್ರಮಿಸಿದೆ. ಯಾವ ಜ್ಞಾನದಿಂದ ನಾವು ಇತರರನ್ನು ಆಳಬಹುದೋ, ದಾಸ್ಯಕ್ಕೆ ಗುರಿಮಾಡಬಹುದೋ, ಇತರರನ್ನು ದೋಚಬಹುದೋ ಆ ಜ್ಞಾನ ಇಂದು ಮನುಕುಲವನ್ನು ವಿನಾಶದ ಅಂಚಿಗೆ ತಳ್ಳಿದೆ. ಈ ವಿನಾಶಕಾರಿ ಅಂಶಗಳನ್ನು ಅರಿಯುವುದೇ ನಿಜವಾದ ಜ್ಞಾನವಾದೀತು. ಗಾಂಧಿ ಈ ಕುರಿತು ಈಗಾಗಲೆ ಎಚ್ಚರಿಕೆ ನೀಡಿದ್ದಾರೆ. ಯುರೋಪಿನ ರಕ್ತರಂಜಿತ ಮಾರ್ಗ ನಮಗೆ ಬೇಡ ಎನ್ನುತ್ತ ಸ್ವಯಂಪ್ರೇರಣೆಯಿಂದ ಆತ್ಮಶುದ್ಧಿಯ ಕಾರ್ಯ ಕೈಗೊಂಡ ನಮ್ಮ ಜನಗಳ ವೈಶಿಷ್ಟ್ಯವನ್ನು ಹೆಮ್ಮೆಯಿಂದ ಹೇಳುತ್ತಾರೆ. ಈ ಆಧ್ಯಾತ್ಮಿಕ ದೃಷ್ಟಿ ಶಿಕ್ಷಣದ ಭಾಗವಾಗಬೇಡವೆ? ಇದರರ್ಥ ಪಾಶ್ಚಾತ್ಯ ಮೂಲದ ಎಲ್ಲ ಜ್ಞಾನವನ್ನು ತಿರಸ್ಕರಿಸಬೇಕೆಂದಲ್ಲ; ಬದುಕನ್ನು ನಿಜವಾಗಿಯೂ ಹಸನುಮಾಡುವ ಯಾವ ಜ್ಞಾನವೇ ಆಗಲಿ ಸ್ವೀಕಾರಾರ್ಹ



**(ಚಾಮರಾಜನಗರದಲ್ಲಿ 'ದೀನಬಂಧು' ಅನಾಥಾಶ್ರಮದ ರೂವಾರಿಗಳಾದ ಜಿ.ಎಸ್.. ಜಯದೇವ ಶೈಕ್ಷಣಿಕ ವಿಷಯಗಳಲ್ಲೂ ತಮ್ಮನ್ನು ತೊಡಗಿಸಿಕೊಂಡವರು)**

## ಇನ್ನೆರಡು ಪತ್ರಗಳು

ತೋಳ್ಪಾಡಿ, ಬಾಗ್ಚಿ, ಪಲ್ಶೀಕರ್– ಅವರ ಲೇಖನಗಳು 'ಹೊಸ ಮನುಷ್ಯ'ಕ್ಕೆ ಅನ್ವರ್ಥವಾಗುವ ಲೇಖನಗಳು. ಈ ಲೇಖನಗಳು ನಮ್ಮೆಲ್ಲರ ಆಲೋಚನೆ ಹಾಗೂ ಬದುಕನ್ನು ಕುರಿತ ಗೃಹೀತಗಳ ಪುನರ್‌ವಿವೇಚನೆಗೆ ಒಡ್ಡಿದ್ದು ನಿಜಕ್ಕೂ ವಿಸ್ಮಯಕಾರಕವೆ. ತಲಸ್ಪರ್ಶಿಯಾದ ಅಧ್ಯಯನ ಮಾತ್ರವಲ್ಲ, ನಮ್ಮ ಕಾಲಕ್ಕೆ ಅದನ್ನು ದಾಟಿಸಿಕೊಳ್ಳುವ ವಿಧಾನ ಕುರಿತ ವೈಧಾನಿಕತೆಯೂ ಮೆಚ್ಚುವಂತಾದ್ದೆ. ಗಾಂಧಿ ಮತ್ತು ಅಂಬೇಡ್ಕರರನ್ನು ಈ ಬಗೆಯಲ್ಲಿ ನೋಡಬೇಕಾದ ಹೊಸನೋಟವನ್ನು ತೆರೆದಿಟ್ಟಿರುವ ಕ್ರಮ ಮೆಚ್ಚುಗೆಗೆ ಕಾರಣ. ಸಂಕೀರ್ಣವೆಂದೆನಿಸಬಹುದಾದ ತಾತ್ವಿಕತೆಯನ್ನು ಎಲ್ಲೂ ಸಂದಿಗ್ಧತೆಗೆ ಎಡೆ ಇಲ್ಲದಂತೆ ಅತ್ಯಂತ ಸರಳವಾಗಿ ಹಾಗೂ ಮನೋಜ್ಞವಾಗಿ ಮುಟ್ಟಿಸಿರುವುದರಿಂದಲೇ ಇವು ಇಷ್ಟು ಆಪ್ತವಾಗುತ್ತವೆ. ಅನುವಾದಕರೂ ಅಭಿನಂದನಾರ್ಹರು. ಚೆನ್ನಿಯವರ ಪುಸ್ತಕ ಪರಿಚಯವೂ ಗಮನ ಸೆಳೆಯುವಂತಿದೆ. ಎಲ್ಲೂ ಓದಿರದ (ಕೇಳಿರದ, ಕನಸಿರದ, ಕಲ್ಪಿಸಿರದ) ಗಾಂಧಿಯವರ ಪ್ರೇಮಪ್ರಸಂಗವನ್ನು ಹೆಕ್ಕಿ ಅದನ್ನು ಎಲ್ಲೂ ವಕಾಲತ್ತು ವಹಿಸದೆ ಮಂಡಿಸಿರುವ ನಿಮ್ಮ ಲೇಖನ ಕೂಡ ಅಪರೂಪದ್ದೇ ಸರಿ.

ನವೋದಯದ ಸಂಭಾವ್ಯತೆಯ ಕಡೆ ಕೆ.ಸತ್ಯನಾರಾಯಣರು ಕೈ ಚಾಚಿದ್ದಾರಾದರೂ 'ನವ್ಯದ ಯಜಮಾನಿಕೆ'ಯ ಮೇಲೆ ಆಕ್ಷೇಪ ಎತ್ತಿರುವ; ಅವಜ್ಞೆಗೆ ಒಳಗಾಗುತ್ತಿರುವ ಸಾಹಿತ್ಯದ ಬಗೆಗಿನ ಅವರ ವಿಷಾದನೀಯತೆ ಲೇಖನದ ತುಂಬಾ ವ್ಯಾಪಿಸಿದೆ. ಹೆಚ್.ಎಸ್.ಆರ್. ಲೇಖನದಲ್ಲಿಯೂ ಈ ವಿಷಾದವೇ ಇದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯವನ್ನು ಆವರಿಸಿರುವ ರಾಜಕಾರಣದ ಬಗ್ಗೆ ಅವರ ಸಾತ್ವಿಕ ಕೋಪ ಮೊದಲ ಬಾರಿಗೆಂಬಂತೆ ಪ್ರಕಟವಾಗಿದೆ. ಎಂ.ಎಸ್. ಶ್ರೀರಾಮರ ಕಥೆ ಸಂಚಿಕೆಯ ಆಶಯಕ್ಕಾಗಿಯೇ ಬರೆದಂತಿದೆ; ಚೆನ್ನಾಗಿದೆ.

'ಹೊಸಮನುಷ್ಯ' ಕನ್ನಡ ಸಂದರ್ಭದ ವಿಶೇಷಾಂಕಗಳಾಚೆಗೆ ಬಹುಕಾಲ ಉಳಿವುದು, ಅದರ ಚಿಂತನಾಕ್ರಮ ಹಾಗೂ ಶ್ರದ್ಧೆಯಿಂದ. ನಿಮಗೆ ಅಭಿನಂದನೆಗಳು.

**–ಲೋಕೇಶ ಅಗಸನಕಟ್ಟೆ,** ಚಿತ್ರದುರ್ಗ

ವಿಶೇಷ ಸಂಚಿಕೆ ತುಂಬಾ ಸುಂದರವಾಗಿ ಮೂಡಿ ಸಂಗ್ರಹಯೋಗ್ಯವಾಗಿದೆ. ಕನ್ನಡದ ಹಿರಿಯ ಕಿರಿಯ ಮನಸ್ಸುಗಳು ಪತ್ರಗಳ ಮೂಲಕ ಸ್ಪಂದಿಸಿ ತುಂಬು ಹೃದಯದಿಂದ ಹಾರೈಸಿವೆ. ಒಂದು ವರ್ಷದ ಹಿನ್ನೋಟ ಪತ್ರಿಕೆಯ ಹಳೆಯ ಸಂಚಿಕೆಗಳನ್ನು ತಿರುವಿ ನೋಡುವಂತೆ ಮಾಡುತ್ತದೆ. 'ನವಿಲುಗರಿ'ಯಕವಿತೆಗಳು ವಿಶೇಷವಾಗಿ ಬಸವರಾಜ ಹೂಗಾರರ ಕವಿತೆ ನೊಂದ ಮನಸ್ಸುಗಳ ಮನ ಮಿಡಿಯುವಂತಿದೆ. ಲಕ್ಷೀಶ ತೋಳ್ಪಾಡಿಯವರು ಅರ್ಥಮಾಡಿಕೊಳ್ಳಲು ಬಹಳ ಕಷ್ಟವಾದ ?ಅದ್ವೈತ ಸಿದ್ಧಾಂತವನ್ನು ಸರಳವಾಗಿ ವಿವರಿಸಿದ್ದಾರೆ. ಹಿರಿಯರಾದ ಡಾ॥ ವಿವೇಕ ರೈ ಯುರೋಪಿನಲ್ಲಿ ಹರಡಿರುವ ಕನ್ನಡದ ಕಂಪು ಕನ್ನಡಿಗರು ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಗಾಂಧೀಜಿಯವರ ಕುರಿತ ಲೇಖನಗಳು ಅವರ ಬಗೆಗಿನ ನಮ್ಮ ಅರಿವನ್ನು ಹೆಚ್ಚಿಸುತ್ತವೆ ಮತ್ತು ನನ್ನ ತಲೆಮಾರಿಗೂ ಇರುವ ಮರು ಓದಿನ ಪ್ರಸ್ತುತತೆಯನ್ನು ತಿಳಿಸುತ್ತವೆ. ಕೆ. ಸತ್ಯನಾರಾಯಣರ ನವೋದಯದ ಮರುಓದಿನ ಸುತ್ತಮುತ್ತ... ಲೇಖನ ಕ್ಲಾಸಿಕ್ ಕೃತಿಗಳೇ ಹುಟ್ಟದಂತಾಗಿರುವ ಈ ಕಾಲದಲ್ಲಿ ಕ್ಲಾಸಿಕ್ಕುಗಳನ್ನೇ ಹೆಚ್ಚಾಗಿ ಸೃಷ್ಟಿಸಿದ ನವೋದಯದ ಕಾಲದ ಬಗ್ಗೆ ನಮ್ಮಲ್ಲಿ ಗೌರವವನ್ನು ಮೂಡಿಸುತ್ತದೆ. ಕೋಳಿವಾಡಕ್ಕೊಂದು ಭೇಟಿ ಕುಮಾರವ್ಯಾಸನನ್ನೂ ಮತ್ತವನ ಕಾಲವನ್ನೂ ಒಂದು ಕ್ಷಣ ನಮ್ಮ ಕಣ್ಮುಂದೆ ಹಾಯಿಸುತ್ತದೆ. ಪುಸ್ತಕಾವಲೋಕನದಲ್ಲಿನ ವಿಮರ್ಶೆಗಳು ನಮ್ಮ ಓದಿಗೆ ಹೊಸ ಹೊಳಪನ್ನು ನೀಡಿವೆ. ಸಂಪಾದಕರ ಟಿಪ್ಪಣಿಗಳು ಮತ್ತು ಪ್ರಬುದ್ಧ ಲೇಖನಗಳು ಓದುಗನ ಮನಸ್ಸಿನಲ್ಲಿ ಆಶಾವಾದವನ್ನು ಬಿತ್ತುತ್ತವೆ.ಈ ವಿಶೇಷ ಸಂಚಿಕೆ ಓದುಗನಾದ ನನ್ನ ಹೃದಯವನ್ನು ಭಾರವಾಗಿಸಿದೆ.

ಸಂಚಿಕೆಯಲ್ಲಿ ಬಹಳ ವಿಶೇಷವಾಗಿ ನನ್ನ ಗಮನ ಸೆಳೆದಿದ್ದು ಎಂ ಎಸ್ ಶ್ರೀರಾಮರ ಕಥೆ 'ಸತ್ಯಾಗ್ರಹ ಸೌಧ'. ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರುವ ದೇಶದಲ್ಲಿ ಪ್ರಬಲವಾದ ವ್ಯವಸ್ಥೆ ಜನಪ್ರಿಯ ಸರ್ಕಾರವೊಂದರ ನೆರಳಿನಲ್ಲಿ ಅಮಾಯಕ ಜನರ ಮೇಲೆ ನಡೆಸುವ ಕ್ರೌರ್ಯವನ್ನು ಕಥೆ ಚಿತ್ರಿಸುತ್ತಾ, ನಯವಾದ ಭಾಷೆ, ಅಚ್ಚುಕಟ್ಟಾದ ನಿರೂಪಣೆ ಮತ್ತು ಬಿಗಿಯಾದ ಚೌಕಟ್ಟಿನಿಂದ ತನ್ನದೇ ಸುಂದರವಾದ ಸೌಧವನ್ನು ಕಟ್ಟಿಕೊಳ್ಳುತ್ತದೆ. ಭಯಾನಕ ಪರಿಸ್ಥಿತಿಯೊಂದರ ಬಗ್ಗೆ ಹೆಚ್ಚು ಅಪಾಯ ಸಂಭವಿಸದ ಹಾಗೆ ಹೇಳುವ ಕ್ರಮವನ್ನು ಕಲಿಸುತ್ತದೆ. ವ್ಯವಸ್ಥೆಯ ಕ್ರೌರ್ಯವನ್ನು ಸಾಹಿತಿಯ ಸೂಕ್ಷ್ಮ ಮನಸ್ಸು ದೈರ್ಯವಾಗಿ ಪ್ರತಿರೋಧಿಸಬಲ್ಲದು ಎನ್ನುವುದನ್ನು ಮತ್ತೊಮ್ಮೆ ನಿರೂಪಿಸುತ್ತದೆ. ಸಣ್ಣಕಥೆಗಳ ಬಗೆಗಿನ ಘನತೆಯನ್ನೂ, ಗೌರವವನ್ನೂ ಹೆಚ್ಚಿಸುತ್ತದೆ.. ಶಾಶ್ವತಕ್ಕೆ ಸಲ್ಲಬಲ್ಲಂತಹ ಸತ್ಯವನ್ನು ಸದ್ಯದ ತುರ್ತಿನಲ್ಲಿ ಹೇಳುತ್ತದೆ.

**–ಚರಣರಾಜ. ಎಮ್. ಜಿ.,** ಬೆಂಗಳೂರು

ಲಲಿತ ಪ್ರಬಂಧ

# ಬೋಟಿ ಗೊಜ್ಜು

–ಸಮತಾ ಯುವರಾಜ್

ಚಿತ್ರ: ಗುಜ್ಜಾರಪ್ಪ



'ಹಬ್ಬಕ್ ಬರೋದಿಲ್ವಾ ಈ ಸರಿ, ಹಬ್ಬಕ್ಕಲ್ದಿದ್ರೆ ವರ್ಷೊತ್ತಡಕ್ಕಾದ್ರೂ ಬಾ, ಮರಿ ಕಡ್ದು ಬೋಟಿ ಗೊಜ್ಜು ಮಾಡುಸ್ತೀನಿ' ಎಂದು ಹಬ್ಬಕ್ಕೆ ನನ್ನ ಮಾವನ ಮಗ ಕರೆದ .

'ರಜೆ ಇಲ್ಲ, ಮಕ್ಕಳ ರಜಾದಿನಗಳ ಕ್ಯಾಂಪ್' ಎಂದೆಲ್ಲಾ ಹೇಳಿ ತಪ್ಪಿಸಿಕೊಳ್ಳೋಣ ಎಂದುಕೊಳ್ಳುತ್ತಿದ್ದ ನನ್ನ ಮನಸ್ಸಿಗೆ 'ಬೋಟಿ ಗೊಜ್ಜು' ಸಡನ್ನಾಗಿ ಬ್ರೇಕ್ ಹಾಕಿಸಿತು.

'ಆಗ್ಲೀ ತೊಗೊಳ್ಳೋ, ಹೆಂಗಿದ್ರೂ ಅತ್ತೆ ಮಾವನ್ನ ನೋಡಿ ಸುಮಾರ್ ದಿನಾಯ್ತು, ಬರ್ತೀನಿ ಕಣಂತೆ' ಎಂದು ಹೇಳಿ ಬೋಟಿ ಗೊಜ್ಜಿನ ನಿರೀಕ್ಷೆಯಲ್ಲಿ ಜೊಲ್ಲು ಸುರಿಸಿಕೊಂಡು ಸಿದ್ಧಳಾದೆ.

ನನಗೆ ಅತ್ಯಂತ ಪ್ರಿಯವಾದ ಅಡುಗೆ ಯಾವುದೆಂದು ಯಾರಾದರೂ ಕೇಳಿದರೆ ಕನಸಲ್ಲೂ ನನ್ನ ಉತ್ತರ ಒಂದೇ, 'ಬೋಟಿ ಗೊಜ್ಜು'. ಕೆಲವರಿಗೆ ಇದೇನೆಂದು ಅರ್ಥವಾಗದಿರಬಹುದು, ಹೇಳುತ್ತೇನೆ ಕೇಳಿ.

'ಕೊಂದ ಪಾಪ ತಿಂದು ಪರಿಹಾರ'ವೆಂಬಂತೆ ನಮ್ಮ ಮೂಡು ಸೀಮೆಯ ಹಳ್ಳಿಗಳ ಕಡೆ ಮರಿ ಕಡಿದಾಗ, ಅಂದರೆ ಆಡು ಇಲ್ಲವೇ ಕುರಿಗಳನ್ನು ಕಡಿದಾಗ, ಆ ಮರಿಯ ತಲೆಕಾಲು, ಮಾಂಸ, ಬೋಟಿ ಎಂದು ಮೂರು ತರಹದ ಮಾಂಸಗಳಾಗಿ ವಿಂಗಡಿಸುತ್ತಾರೆ. ತಲೆಕಾಲು ಸೂಪ್ ಬಾಣಂತಿಯರಿಗೆ, ದೇಹ ದುರ್ಬಲರಾದವರಿಗೆ ಪುಷ್ಟಿಗಾಗಿ ನೀಡುತ್ತಾರೆ.

ಬೋಟಿ ಎಂದರೆ ಮರಿಯ ಜೀರ್ಣಾಂಗವ್ಯೂಹದ ಅಂಗಗಳಾದ ಜಠರ, ಈಲಿ, ಕೆಂಪೀಲಿ, ಕರುಳುಗಳನ್ನು ಚೆನ್ನಾಗಿ ಶುದ್ಧ ಮಾಡಿ, ಸಣ್ಣ ಸಣ್ಣ ತುಂಡುಗಳಾಗಿ ಮಾಡಿರುವ ಮಾಂಸ. ಇದಕ್ಕೆ ಮಾಂಸದ ಸಾರಿಗೆ ಹಾಕುವ ಮಸಾಲೆ ಹಾಕಿ, ಬಟಾಣಿ ಇಲ್ಲವೇ ಕಡಲೆಕಾಳು ಸೇರಿಸಿ ಮಾಡುವ ಗೊಜ್ಜು ಬೋಟಿ ಗೊಜ್ಜು. ಎಷ್ಟೇ ತೊಳೆದರೂ ಪಾರ್ಟ್ಸ್ ಪರ್ ಮಿಲಿಯನ್ ಲೆಕ್ಕದಲ್ಲಿ ಉಳ್ದೇ ಬಿಡುವ ಜೀರ್ಣಾಂಗ ವ್ಯೂಹದ ಕಿಣ್ವಗಳು, ಮರಿ ತಿಂದಿದ್ದ ಹುಲ್ಲು ಸೊಪ್ಪುಗಳ ರಾಸಾಯನಿಕಗಳು ಸೇರಿ, ಬೋಟಿಗೆ ತನ್ನದೇ ಆದ ವಿಶಿಷ್ಟ ಪರಿಮಳ ರುಚಿ ನೀಡುತ್ತವೆ. ನಮ್ಮ ಹಳ್ಳಿಗಳ ಕಡೆ ಮದುವೆಯ ಮಾರನೆಯ ಬೀಗರೂಟದ ಕರ್ನೆರೆಗೆ, ಹಬ್ಬಗಳ ಮಾರನೆಯ ವರ್ಷೊತ್ತಡಕಿಗೆ, ಯಾವುದಾದರೂ ಊರ ಅಮ್ಮನ ಹರ್ಸೇವೆಗೆ ಮರಿ ಕಡಿದಾಗ ಮಾಡುವ ತರಹೇವಾರಿ ಮಾಂಸದಡುಗೆಗಳಲ್ಲಿ ಬೋಟಿ ಗೊಜ್ಜು ಕೂಡಾ ಒಂದು.

ಮೊದಲ ಬಾರಿಗೆ ಬೋಟಿ ಗೊಜ್ಜು ಯಾವಾಗ ತಿಂದದ್ದು ನೆನಪಿಲ್ಲಾ.. ಆದರೆ ಅಪಾರ ಪ್ರಮಾಣದಲ್ಲಿರುವ ನೆಂಟರಿಷ್ಟರ ಮನೆಯ ಕಾರ್ಯಗಳಿಗೆ ವರ್ಷಕ್ಕೆ ಹತ್ತೆನ್ನೆರಡು ಬಾರಿಯಾದಾರೂ ಚಿಕ್ಕಂದಿನಿಂದ ಹೋಗುತ್ತಾ ಬರುತ್ತಾ ಇರುವ ರೂಢಿಯಿಂದಾಗಿ, ಎಲ್ಲಾ ಕಾರ್ಯಗಳಲ್ಲೂ ತಿಂದೂ ತಿಂದೂ ಹಲ್ಲಿಗೆ ರಸವಿಳಿದು ಹೋಗಿದೆ.

ನಾನು ಮನೆಯಲ್ಲಿ ಮಾಡಿದರೆ, ಬೋಟಿಯನ್ನು ಚೆನ್ನಾಗಿ ಉಜ್ಜಿ ಉಜ್ಜಿ, ತೊಳೆದೂ, ತೊಳೆದೂ ಅದರ ಘಮವನ್ನೆಲ್ಲಾ ಹೋಗಿಸಿ ಹೊಟ್ಟೆನಂತಾಗಿಸಿ ಕೊಡುವ ನನ್ನ ಮಿ.ಕ್ಲೀನ್ ಗಂಡನಿಂದಾಗಿ, ನನ್ನ ಬೋಟಿ ಗೊಜ್ಜು ತನ್ನ ಒರಿಜಿನಲ್ ವಾಸನೆ, ರುಚಿ ಕಳೆದುಕೊಂಡು, ಏನೋ ಒಂದು ತರಕಾರಿಯ ಗೊಜ್ಜಿನಂತಾಗಿ ಬಿಡುತ್ತದೆ. ಹಾಗಾಗಿ ಮನೆಯಲ್ಲಿ ಅಷ್ಟಾಗಿ ಮಾಡದೆ ಮದುವೆ, ಹಬ್ಬಗಳಿಗೆ ತಪ್ಪಿಸಿಕೊಂಡರೂ ಕರ್ನೆರೆ, ವರ್ಷೊತ್ತಡಕುಗಳಿಗೆ ತಪ್ಪದೇ ಹಾಜರಾಗಿ ತಿಂದು ಆಸೆ ತೀರಿಸಿಕೋಳ್ಳುತ್ತೇನೆ.

ನನ್ನ ಎರಡನೆಯ ಬಸಿರಿನಲ್ಲಿ ಹೆರಿಗೆಗೆಂದು ನನ್ನ ಗಂಡನ ಅಕ್ಕನ ಮನೆಗೆ ಹೋಗಿದ್ದೆ. ನನಗಿಷ್ಟವೆಂದು ನನ್ನತ್ತಿಗೆ ರಾತ್ರಿ ಊಟಕ್ಕೆ ಬೋಟಿ ಗೊಜ್ಜು ಮಾಡಿ ಬಡಿಸಿದರು. ಇನ್ನೂ ಧಾರಾಳವಾಗಿ ಮಿಕ್ಕಿದ್ದನ್ನು ಫ್ರಿಜ್‌ನಲ್ಲಿಟ್ಟು 'ಬೆಳಿಗ್ಗೆಗೆ ತಿನ್ನುವಿಯಂತೆ' ಎಂದಿದ್ದರು. ಆದರೆ ಆ ರಾತ್ರಿಯೇ ನನಗೆ ನೀರೊಡೆದು ಆಸ್ಪತ್ರೆಗೆ ಸೇರುವಂತಾಯ್ತು. ಬೆಳಿಗ್ಗೆ ಎನಿಮೊ ಕೊಡಿಸಿಕೊಂಡು ಹೊಟ್ಟೆ ಕ್ಲೀನ್

**ಕಾರ್ಯಗಳಲ್ಲಿ ಊಟಕ್ಕೆ ಕುಳ್ಳಿತಿದ್ದಾಗ, ಅಕ್ಕಪಕ್ಕಗಳಲ್ಲಿ ಮಕ್ಕಳಿಬ್ಬರನ್ನೂ ಕೂರಿಸಿಕೊಂಡು, ಬಡಿಸಲು ಬಂದದ್ದನ್ನೆಲ್ಲಾ ಕೈ ಅಡ್ಡ ಹಿಡಿದು ಬೇಡವೆನ್ನುವ ಅವರನ್ನು ಹೆದರಿಸಿ, ಕಡ್ಡಾಯವಾಗಿ ಬೋಟಿ ಗೊಜ್ಜು ಹಾಕಿಸಿಕೊಂಡು, ನಂತರ ನನ್ನ ಎಲೆಗೇ ವರ್ಗಾಯಿಸುವಂತೆ ಮುಂಚಿತವಾಗಿಯೇ ತಾಕೀತು ಮಾಡಿರುತ್ತೇನೆ. 'ಅಮ್ಮ! ಒಂಚೂರು ಟೇಬಲ್ ಮ್ಯಾನರ್ಸ್ ಕಲಿತುಕೊಳ್ಳಮ್ಮ' ಎಂದು ಮಕ್ಕಳಿಬ್ಬರೂ ಮುಸಿ ಮುಸಿ ನಕ್ಕರೂ ನನಗೇನೂ ಬೇಜಾರಿಲ್ಲ!**

ಮಾಡಿಸಿಕೊಂಡು, ಕೈಗೆ ಡ್ರಿಪ್ಸ್‌ನ ಸೂಜಿ ಚುಚ್ಚಿಸಿಕೊಂಡು, ಆಪರೇಷನ್ ಥಿಯೇಟರ್‌ಗೆ ಹೋಗಲು ಡಾಕ್ಟರ್‌ರ ಕರೆಗಾಗಿ ಕಾಯುತ್ತಾ ಮಲಗಿದ್ದೆ. ಆಗ ಅಚಾನಕ್ಕಾಗಿ ನನಗೆ ನಮ್ಮತ್ತಿಗೆ ಮನೆಯ ಫ್ರಿಜ್‌ನಲ್ಲಿದ್ದ ಬೋಟಿ ಗೊಜ್ಜು ನೆನಪಾಗಿಬಿಡಬೇಕೆ! ನನ್ನ ಕಣ್ಣು ತುಂಬಿಕೊಂಡಿದ್ದನ್ನು ಕಂಡ ಪಕ್ಕದಲ್ಲೇ ಕುಳಿತಿದ್ದ ನನ್ನ ಗಂಡ, 'ಯಾಕಪ್ಪಾ? ಎರಡನೆಯದೂ ಸಿಸೇರಿಯನ್ ಎಂದು ಬೇಜಾರಾ?" ಎಂದರು ನಾನದಕ್ಕೆ ಸುಳ್ಳು ಸುಳ್ಳೇ 'ಹೂಂ ಕಣ್ರೀ' ಎಂದು ಕಣ್ಣೊರೆಸಿಕೊಂಡೆ. ನಿಜ ಹೇಳಿದ್ದಿದ್ದರೆ ಆಗಲೇ ಅಲ್ಲೇ ನನಗೆ ಚೆನ್ನಾಗಿ ಉಗಿದು ಉಪ್ಪಾಕಿರುತ್ತಿದ್ದರು.

ಕಾರ್ಯಗಳಲ್ಲಿ ಊಟಕ್ಕೆ ಕುಳ್ಳಿತಿದ್ದಾಗ, ಅಕ್ಕಪಕ್ಕಗಳಲ್ಲಿ ಮಕ್ಕಳಿಬ್ಬರನ್ನೂ ಕೂರಿಸಿಕೊಂಡು, ಬಡಿಸಲು ಬಂದದ್ದನ್ನೆಲ್ಲಾ ಕೈ ಅಡ್ಡ ಹಿಡಿದು ಬೇಡವೆನ್ನುವ ಅವರನ್ನು ಹೆದರಿಸಿ, ಕಡ್ಡಾಯವಾಗಿ ಬೋಟಿ ಗೊಜ್ಜು ಹಾಕಿಸಿಕೊಂಡು, ನಂತರ ನನ್ನ ಎಲೆಗೇ ವರ್ಗಾಯಿಸುವಂತೆ ಮುಂಚಿತವಾಗಿಯೇ ತಾಕೀತು ಮಾಡಿರುತ್ತೇನೆ. 'ಅಮ್ಮ! ಒಂಚೂರು ಟೇಬಲ್ ಮ್ಯಾನರ್ಸ್ ಕಲಿತುಕೊಳ್ಳಮ್ಮ' ಎಂದು ಮಕ್ಕಳಿಬ್ಬರೂ ಮುಸಿ ಮುಸಿ ನಕ್ಕರೂ ನನಗೇನೂ ಬೇಜಾರಿಲ್ಲ!

ಒಮ್ಮೆ ಮನೆಯಲ್ಲಿ ಮಾಂಸದಡಿಗೆ ಮಾಡಿ, ವಿಶೇಷವಾಗಿ ಬೋಟಿ ಗೊಜ್ಜನ್ನು ತಯಾರಿಸಿ, ನನ್ನ ಗಂಡನ ಸ್ನೇಹಿತರೊಬ್ಬರನ್ನು ಕುಟುಂಬ ಸಮೇತರಾಗಿ ಊಟಕ್ಕೆ ಕರೆದಿದ್ದೆವು. ಬಂದವರಿಗೆಲ್ಲಾ ಬಡಿಸಿ ನಾನು ಅಡುಗೆ ಮನೆ ಬಾಗಿಲಲ್ಲಿ ಸೌಟುಹಿಡಿದು ನಿಂತಿದ್ದಾಗ, ನನ್ನ ಬೋಟಿ ಗೊಜ್ಜಿನ ಪ್ರೀತಿ ಬಗ್ಗೆ ತಿಳಿದಿದ್ದ, ಹಾಸ್ಯ ಪ್ರಿಯರಾದ ಆ ಅತಿಥಿ 'ಅರೆ! ಮೇಡಂ, ನಮಗೆಲ್ಲಾ ಬಡಿಸಿ ನೀವಲ್ಲಿ ಜೊಲ್ಲು ಸುರಿಸಿಕೊಂಡು ನಿಂತಿರುವುದನ್ನು ನೋಡಲಾಗುತ್ತಿಲ್ಲ, ನೀವೂ ಬನ್ನಿ, ಎನ್ನಬೇಕೆ! ಆ ದಿನ ರಾತ್ರಿ ನನ್ನ ಗಂಡ, 'ಈ ಬೋಟಿ ಗೊಜ್ಜು ಇಷ್ಟೊಂದು ಮಾನ ಕಳೆಯುತ್ತದೆ ಎಂದು ತಿಳಿದಿದ್ದರೆ ಇದನ್ನು ಮದುವೆಯೇ ಆಗುತ್ತಿರಲಿಲ್ಲ' ಎಂದು ಕೊರಗಿದರು.

ನಮ್ಮಮ್ಮನ ದೊಡ್ಡಣ್ಣನ ಹೆಂಡತಿ, ನಮ್ಮ ದೊಡ್ಡತ್ತೆ ತಯಾರಿಸುವ ಹಾಗೆ ಬೋಟಿ ಗೊಜ್ಜನ್ನು ಪ್ರಪಂಚದಲ್ಲಿ ಬೇರಿನ್ಯಾರೂ ಮಾಡಲಾರರು. ನಾನು ಯಾವ ಹಬ್ಬದ ವರ್ಷೊತ್ತಡಕಿಗೆ ಹೋದರೂ, ಎಲೆಯ ತುಂಬಾ ಅನ್ನದ ಬದಲಿಗೆ ಬೋಟಿಗೊಜ್ಜು ಬಡಿಸಿ, 'ನಿಂಗೆಷ್ಟು ಬೇಕು, ಅಷ್ಟು ತಿನ್ನವ್ವಾ' ಎನ್ನುವ ನಮ್ಮತ್ತೆ ನನ್ನ ಪಾಲಿನ ಅನ್ನಪೂರ್ಣೆಯೇ ಸರಿ. ನಮ್ಮತ್ತೆಯನ್ನು ಬೋಟಿ ಗೊಜ್ಜಿನಲ್ಲಿ ಯಾರಾದರೂ ಸೈಡ್ ಹೊಡೆಯುವವರಿದ್ದರೆ ಅದು ನಮ್ಮೂರಿನ ಒಬ್ಬ ಬಾಣಸಿಗ ಕುಬೇರ ಮಾತ್ರ. ನಮ್ಮ ಸಂಬಂಧಿಕರೆಲ್ಲರ ಮನೆಗಳ ಕಾರ್ಯಗಳಲ್ಲಿ ಮಾಂಸದಡಿಗೆಯ ಉಸ್ತುವಾರಿ ಆತನದೇ. ಒಂದೇ ಒಂದು ಬಾರಿಯಾದರೂ ಆತನ ಬೋಟಿ ಗೊಜ್ಜು ಹಾಳಾದದ್ದನ್ನು ನಾನಂತೂ ಕಂಡಿಲ್ಲ, ಕೇಳಿಲ್ಲ.ನನ್ನ ಕಸಿನೊಬ್ಬಳ ಮಗನ ಮದುವೆಯ ಕರ್ನೆರೆಗೆ ೩೦ ಮರಿ ಕಡಿದು ಭರ್ಜರಿಯಾಗಿ ಬೀಗರೂಟ ಮಾಡಿಸಿದ್ದರು ಅಡುಗೆ ಇನ್ಯಾರದು? ಕುಬೇರನದೇ. ೩೦ ಮರಿ ಅಂದ ಮೇಲೆ ಕೇಳಬೇಕೆ, ಮಾಂಸದ ರಾಶಿಯೇ ಸುರಿದು ಬಿದ್ದಿತ್ತು. ಬಡಿಸುವಾಗಲೂ ಧಾರಾಳವಾಗಿ ಬಡಿಸಿದರು. ಊಟ ಮುಗಿಸಿ ಕೈ ತೊಳೆಯಲು ಹೋಗುವಾಗ ನನ್ನ ಕಣ್ಣು ಭೋಜನ ಶಾಲೆಯ ಪಕ್ಕದಲ್ಲೇ ಇದ್ದ ಅಡುಗೆ ಮನೆ ಕಡೆಗೆ ಹೋಯಿತು. ಬಕೆಟ್ಟುಗಟ್ಟಲೆ ತುಂಬಿಸಿಟ್ಟಿದ್ದ ಬೋಟಿ ಗೊಜ್ಜನ್ನು ನೋಡಿ 'ರಾತ್ರಿಗೂ ಸಿಕ್ಕೋ ಹಂಗಿದ್ದಿದ್ರೆ' ಎಂದು ಮರುಗುತ್ತಾ ಹೋದೆ. ಒಂದೆರಡು ವಾರಗಳ ನಂತರ ಸಿಕ್ಕ ನನ್ನ ಕಸಿನ್, ತನ್ನ ಮಗನ ಮದುವೆಯ ವೈಭವವನ್ನು ಸಾರಿಕೊಳ್ಳುತ್ತಾ, 'ನಾವಂತೂ ಯಾವ್ದಕ್ಕೂ ಕೈ ಹಿಡಿಲಿಲ್ಲಪ್ಪ, ಧಾರಾಳವಾಗಿ ಅಡುಗೆ ಮಾಡಿಸ್ದೊ. ಕರ್ನೆರೆ ದಿನ ವಸಿ ಅಡ್ಗೆ ಮಿಕ್ಕಿತ್ತಲ್ಲಾ! ರಾತ್ರಿ ಊರೋರಿಗೆಲ್ಲಾ ಹಂಚಿದ್ರೂ ಇನ್ನೂ ಮಿಕ್ಕಿತ್ತು. ಬೆಳಿಗ್ಗೆ ಎರಡು ಬಕೆಟ್ ಬೋಟಿ ಗೊಜ್ಜು ತಿಪ್ಪೆಗೆ ಸುರ್ದೊ' ಎಂದಾಗ ನನ್ನೆದೆ ಒಡೆದು ಹೋಗದ್ದು ನನ್ನ ಪುಣ್ಯ.

ನನ್ನ ಬೋಟಿ ಗೊಜ್ಜಿನ ಲೋಭದ ಬಗ್ಗೆ ತಿಳಿದಿರುವ ನನ್ನ ಸಹೋದ್ಯೋಗಿಗಳು, ತಾವೆಲ್ಲಾದರೂ ಹೊರಗಡೆ ಸಮಾರಂಭಗಳಲ್ಲಿ ತಿಂದು ಬಂದ್ರೆ ಮಾರನೇ ದಿನ ಶಾಲೆಯಲ್ಲಿ ಅದರ ರುಚಿಯ ವರ್ಣನೆ ಮಾಡಿ, ಬಡಿಸಿದ್ದ ಪ್ರಮಾಣವನ್ನು ಒಂದಕ್ಕೆರಡರಂತೆ ಹೆಚ್ಚುಮಾಡಿ ಹೇಳಿ ನನ್ನ ಕಣ್ಣಲ್ಲಿ ನೀರು ತರಿಸುತ್ತಾರೆ. ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ನನ್ನ ತಮ್ಮನ ಸಹೋದ್ಯೋಗಿಗಳಲ್ಲಿ ಕೆಲವರು ಯುರೋಪಿಯನ್ನರಿದ್ದಾರಂತೆ. ಭಾರತೀಯ ಆಹಾರ ಪದ್ಧತಿಗಳ ಬಗ್ಗೆ ಕುತೂಹಲಕಾರಿಗಳಾಗಿರುವ ಅವರಿಗೆಲ್ಲಾ ಬೇರೆ ಬೇರೆ ರೀತಿಯ ಅಡುಗೆಗಳನ್ನೆಲ್ಲಾ ತಿನ್ನಿಸಿ ರುಚಿ ತೋರಿಸುತ್ತಿದ್ದಾರಂತೆ. ಒಮ್ಮೆ ಒಂದು ಮಿಲ್ಟ್ರಿ

ಹೋಟೆಲಿಗೆ ಕರೆದುಕೊಂಡು ಹೋಗಿ ತಿನ್ನಿಸಿದ್ದಾರೆ. ಮಾರನೇ ದಿನ ಅವರೆಲ್ಲಾ ಆಫೀಸ್‌ನಲ್ಲಿ 'ಯಸ್ಟರ್ ಡೇ ವಿ ಹ್ಯಾಡ್ ಗೋಟ್ಸ್ ಶಿಟ್' ಎಂದು ಹೇಳಿಕೊಂಡು ತಿರುಗಿದ್ದನ್ನು ನನ್ನ ತಮ್ಮ ರಸವತ್ತಾಗಿ ವರ್ಣಿಸಿದ.

'ಉಪ್ಪು, ಹುಳಿ, ಖಾರವಿಲ್ಲದ ಅಡುಗೆ ತಿಂದು ಮರಗಟ್ಟಿರುವ ಅವರ ನಾಲಿಗೆಗಳಿಗೆ ಸರಿಯಾದ ಚಿಕಿತ್ಸೆಯಾಯಿತು ಬಿಡು' ಎಂದು ನಾನು ನಕ್ಕೆ.

ನನ್ನ ಮನೆಯಲ್ಲಿ ನನಗೊಬ್ಬಳಿಗೇ ಮಾತ್ರ ಅದಿಷ್ಟ. ಗಂಡ ಮಕ್ಕಳಿಬ್ಬರಿಗೂ ಅದ ಕಂಡರಾಗದು. ಇನ್ನು ಗೀಳೆನ್ನುವಷ್ಟು ಶುಚಿತ್ವದ ಪ್ರಿಯರಾದ ನನ್ನ ಗಂಡ, 'ಅದು ಹೇಗೆ ಆ ವಾಸನೆ ಸಹಿಸಿಕೊಂಡು ತಿನ್ನುತ್ತೀಯಾ? ನಿನಗೆ ನಾಗರೀಕತೆ ಬರಲು ಇನ್ನೆಷ್ಟು ದಿನ ಬೇಕೋ' ಎಂದು ನಿಟ್ಟುಸಿರು ಬಿಡುತ್ತಾರೆ 'ಅರೆ! ಬೋಟಿ ಗೊಜ್ಜು ತಿನ್ನುವುದಕ್ಕೂ, ನಾಗರೀಕತೆಗೂ ಏನಪ್ಪಾ ಸಂಬಂಧ!' ನನ್ನ ಮಕ್ಕಳಿಗೂ ನಾನು ನಾಗರೀಕತೆ ತಿಳಿಯದ ಹಳ್ಳಿ ಗಮಾರೇ. 'ಬರೀ ಯಾವಾಗ್ಲೂ ಹಳ್ಳಿ ಅಡುಗೆ ಮಾಡಿಕೊಂಡಿರ್ತೀಯಲ್ಲಮ್ಮ, ಸ್ವಲ್ಪ ಟಿ.ವಿ., ಇಂಟರ್ನೆಟ್ ನೋಡಿಕೊಂಡು ಮಾಡರ್ನ್ ಕುಕಿಂಗ್ ಹೇಗಿರುತ್ತೆ ಅಂತ ಕಲ್ತುಕೋ. ಎಂಥೆಂಥಾ ವೆರೈಟಿ ವೆರೈಟಿ ಡಿಶಸ್ ತೋರಿಸ್ತಾರೆ ಮಾಸ್ಟರ್ ಶೆಫ್‌ನಲ್ಲಿ. ಸ್ವಲ್ಪ ನೋಡಿ ಕಲ್ತುಕೋ. ಸ್ವಲ್ಪ ನೀನೂ ನಿನ್ನ ಬಾವಿ ಬಿಟ್ಟು ಆಚೆ ಬಾ' ಎಂದ ಮಕ್ಕಳಿಗಾಗಿ ಒಂದು ನಾಲ್ಕಾರು ಎಪಿಸೋಡ್ ಮಾಸ್ಟರ್ ಶೆಫ್ ನೋಡಿದ್ದಾಯಿತು.

ಅಲ್ಲಿಯ ಶೆಫ್‌ಗಳ ಶುಭ್ರಾತಿಶುಭ್ರ ಏಪ್ರನ್‌ಗಳು ಥಣಗುಟ್ಟುವ ಅಡಿಗೆ ಮನೆ ಸಾಮಗ್ರಿಗಳು, ಪಾತ್ರೆಗಳು, ಹೆಸರು ತಿಳಿಯದ ಥರಾವರಿ ಯಂತ್ರಗಳು, ಹಣ್ಣು, ತರಕಾರಿ, ಸಾಂಬಾರ ಪದಾರ್ಥ, ಡೈರಿ ಉತ್ಪನ್ನಗಳು, ವಿವಿಧ ಬಗೆಯ ನೆಲ, ಜಲಚರಗಳ ಮಾಂಸದಿಂದ ತುಂಬಿ ತುಳುಕುತ್ತಿರುವ ಪ್ಯಾಂಟ್ರಿಗಳೆಲ್ಲಿ? ಒಂದುಸ್ಟವ್, ಮಿಕ್ಸಿ, ಮತ್ತೊಂದು ಫ್ರಿಜ್, ಕೆಲವು ಪಾತ್ರೆಗಳಿರುವ ನನ್ನ ಅಡುಗೆ ಮನೆಯೆಲ್ಲಿ?

ಇನ್ನು ಅವರು ಮಾಡುವ ನಾಜೂಕಾತಿ ನಾಜೂಕಿನ ಡಿಶಸ್‌ಗಳದೇ ಬೇರೆ ಕಥೆ. ಒಂದು ಗಿಡದ ಒಂದೆರಡು ಎಲೆ ಕಿತ್ತುಕೊಂಡು, ತರಕಾರಿ, ಹಣ್ಣುಗಳ ಸಿಪ್ಪೆ-ಗಿಪ್ಪೆ ಎಲ್ಲಾ ಹೆರೆದು ಹಾಕಿ ನಾಜೂಕಾಗಿ ತಿರುಳು ಮಾತ್ರ ತೆಗೆದುಕೊಂಡು, ಯಾವುದಾದರೂ ಹಿಟ್ಟಿನ ಇಷ್ಟಗಲ ಚಪಾತಿ ಉಜ್ಜಿ ಅದರಲ್ಲಿ ಬೇಕಾದ ಆಕಾರಗಳನ್ನು ಮಾತ್ರ, ವಿವಿಧ ವಿನ್ಯಾಸದ ಬಟ್ಟಲುಗಳಿಂದ ಕತ್ತರಿಸಿ ತೆಗೆದುಕೊಂಡು ಉಳಿದಿದ್ದನ್ನು ಬಿಸಾಡುತ್ತಾರೆ. ಯಾವುದೇ ಪ್ರಾಣಿಯಿರಲಿ ಸೂಕ್ಷ್ಮವಾಗಿ ಚಾಕು ಬಳಸುತ್ತಾ, ಒಂದೆರಡು ಚದರ ಇಂಚುಗಳಷ್ಟು ಮಾಂಸ ಮಾತ್ರ ತೊಗೊಂಡು ಉಳಿದಿದ್ದನ್ನೆಲ್ಲಾ ಎಸೆಯುವಾಗ ನನ್ನ ಹೊಟ್ಟೆಯುರಿದು ಹೋಗುತ್ತದೆ.

ಸ್ಟವ್‌ನ ಮೇಲೆ ಬೇಯುತ್ತಿರುವ ಅಡುಗೆಗಿಂತ ಹತ್ತು ಪಟ್ಟು ಹೆಚ್ಚು ಪಕ್ಕದ ಡಸ್ಟ್‌ಬಿನ್ನಲ್ಲಿ ತುಂಬಿರುವುದನ್ನು ಕಂಡಾಗ, ಕಸದಿಂದ ರಸ ತಯಾರಿಸುವ ನಮ್ಮ ಭಾರತೀಯ ಅಡುಗೆಯ ತಂತ್ರಗಾರಿಕೆಗಳು ನೆನಪಾಗುತ್ತವೆ.

ನಮ್ಮಲ್ಲಿ ನೋಡಿ, ತರಕಾರಿ, ಹಣ್ಣುಗಳ ಸಿಪ್ಪೆಗಳು ಚಟ್ನಿ, ಉಪ್ಪಿನಕಾಯಿಗಳಾಗುತ್ತವೆ. ನುಗ್ಗೆ, ಬಾಳೆ, ತೆಂಗು, ಹುಣಿಸೆ ಮುಂತಾದ ಮರಗಳ ಹೂ, ಚಿಗುರು, ಕಾಯಿ, ಹಣ್ಣು, ದಿಂಡು ಎಂತೆಲ್ಲಾ ನಾವು ಬಳಸುವುದಿಲ್ಲವೇ? ಹೊಲದ ಕಳೆಯಾದ ಬೆರಕೆ ಸೊಪ್ಪಿನ ರುಚಿ ಯಾರಿಗೆ ತಿಳಿಯದು? ಮರಿಯ ದೇಹದ ಯಾವ ಭಾಗವೂ ಹಾಳಾಗದಂತೆ ಬಳಸುವುದು ಉಳಿತಾಯದ ದೊಡ್ಡ ಪಾಠ ಎನ್ನುತ್ತೇನೆ ನಾನು. ಮೀನಿನ ತಲೆ, ಕೋಳಿಯ ತಲೆ ಕಾಲುಗಳನ್ನು ಚಪ್ಪರಿಸಿಕೊಂಡು ತಿನ್ನುವ ನನ್ನಣ್ಣನ ಪ್ರಕಾರ 'ಅವರಿಗೆ ಇದರ ರುಚಿ ಅಂದ್ರೇನೂ ಗೊತ್ತಿಲ್ಲ'. ಇನ್ನು ಮಾಡಿದ ಅಡುಗೆಯನ್ನು ಅವರು ತಿನ್ನುವ ಪರಿಯೋ! ಅಂದ ಚೆಂದದ ತಟ್ಟೆ, ಪಾತ್ರೆಗಳಲ್ಲಿ ಅಲಂಕಾರಿಕವಾಗಿ ಮಾಡಿರುವ ಅಡುಗೆಯನ್ನು ಜೋಡಿಸಿಕೊಂಡು ಚಾಕು ಫೋರ್ಕ್‌ಗಳಿಂದ ಇಷ್ಟಿಷ್ಟೇ ತೆಗೆದುಕೊಂಡು ಸ್ವಲ್ಪ ಸ್ವಲ್ಪವೇ ತಿನ್ನುವುದನ್ನು ಕಂಡಾಗ 'ಅಯೋ ಪಾಪ! ಹೊಟ್ಟೆಯಲ್ಲಿರುವ ಹುಳಕ್ಕಾಗುವಷ್ಟಾದರೂ ತಿನ್ನಬಾರದ' ಅನ್ನಿಸುತ್ತೆ.

ಜಂಕ್ ಫುಡ್ ಪ್ರಿಯರಾದ ನನ್ನ ಮಕ್ಕಳೋ ಕಣ್ಣು ಬಾಯಿ ಬಿಟ್ಟುಕೊಂಡು ಟಿ.ವಿ.ನೋಡಿಕೊಂಡು, ಜೊಲ್ಲು ಸುರಿಸಿಕೊಂಡು ಕುಳಿತಿರುತ್ತವೆ. ಹೊರಗೆ ಊಟಕ್ಕೆ ಹೋದಾಗಲೂ ಪಿಜ್ಜಾ, ಬರ್ಗರ್ ಚೈನೀಸ್-ಗ್ಯಿನೀಸ್ ಅಂತಲೇ ಅವರಿಗೆ ಬೇಕು.

ಒಮ್ಮೆ ಅವರಿಬ್ಬರ ಬಲವಂತಕ್ಕೆ ಪಿಜ್ಜಾ ತಿಂದದ್ದಾಯಿತು. 'ಈ ರಟ್ಟಿನ ಹಾಳೆ ತಿನ್ನಕೆ ಜನ ಯಾಕ್ಹಿಂಗೆ ಪರದಾಡ್ತಾರೆ! ನಮ್ಮ ಅಕ್ಕಿರೊಟ್ಟಿ ಬೋಟಿ ಗೊಜ್ಜಿನೆದುರು ಇದನ್ನು ನಿವಳಿಸಿ ಎಸೆಯಬೇಕು' ಎಂದಿದ್ದಕ್ಕೆ ನನ್ನ ಮಗ 'ಅಮ್ಮಾ, ನೀನು ಸಕ್ಕತ್ ಔಟ್ ಡೇಟೆಡ್, ಆ ಶಿಟ್ನೆಲ್ಲಾ ಈಗ್ಯಾರು ತಿಂತಾರೇ? ನೀನೋ, ನಿನ್ನ ಬೋಟಿ ಗೊಜ್ಜೋ' ಎಂದಣಕಿಸಿದ.

ನನಗಂತೂ ಈ ಪಿಜ್ಜಾ-ಬರ್ಗರ್ ಜನಾಂಗದವರನ್ನು ಕಂಡರೆ ಅಪಾರ ಕನಿಕರ ಎನಿಸುತ್ತದೆ. ಅದರಲ್ಲೂ ಹುಡುಗಿಯರು ಡಯೆಟ್-ಗಿಯೆಟ್ ಎಂದುಕೊಂಡು, ಸಲಾಡ್, ಹುಲ್ಲು-ಸೊಪ್ಪು ತಿಂದುಕೊಂಡು ರಕ್ತ ಮಾಂಸವಿಲ್ಲದೇ ಬರೀ ಮೂಳೆ-ಮೂಳೆ ಬಿಟ್ಟುಕೊಂಡು ತಿರುಗುವುದನ್ನು ಕಂಡರೆ ಸಿಟ್ಟೇ ಬರುತ್ತದೆ. ಚೆನ್ನಾಗಿ ತಿಂದು, ಉಂಡು ಗಟ್ಟಿಯಾಗಿ ಬದುಕಬಾರದೇ? ಆದರೆ ಈ ಲತಾಂಗಿ ಕೃಶಾಂಗಿಯರನ್ನು ಕಂಡಾಗೆಲ್ಲಾ ನಿಟ್ಟುಸಿರು ಬಿಟ್ಟು ನಿಡುಸುಯ್ಯುವ ನನ್ನ ಗಂಡನಿಗಾಗಿ ನಾನೂ ಸ್ವಲ್ಪದಿನ ಡಯಟ್ ಮಾಡಿ ನೋಡೋಣವೆಂದುಕೊಂಡೆ. ಸರಿ, ಅನ್ನದ ಬದಲಿಗೆ ದಿನಕ್ಕೆರಡು ರಾಗಿ ರೊಟ್ಟಿ, ಹಿಡಿ ಮೊಳಕೆಕಾಳು, ಹಣ್ಣೊಂದಿಷ್ಟು ತಿಂದುಕೊಂಡು ಸ್ವಲ್ಪದಿನ ಕಾಲ ಹಾಕಿದೆ. ಆದರೊಂದು ಭಾನುವಾರದ ದಿನ ಮಾಡಿದ್ದ ಚಿಕನ್ನ ಘಮ ತಡೆಯಲಾರದೇ 'ಒಂದೆರಡು ಪೀಸ್ ತಿಂದರೇನೂ ಕೊಳ್ಳೆ ಹೋಗದು' ಎಂದುಕೊಳ್ಳುತ್ತಾ ತಿನ್ನಲು ಶುರುಮಾಡಿದ್ದು, ನಿಂತಿದ್ದು ಅರ್ಧ ಕೆಜಿ ಚಿಕನ್ ಖಾಲಿಯಾದ ಬಳಿಕವೇ.

ನಂತರ, 'ಇಷ್ಟೆಲ್ಲಾ ಕಷ್ಟಪಟ್ಟುಕೊಂಡು ಹುಲ್ಲುಕಚ್ಚಿ ಬದುಕಲು ನಾನೇನು ಅರಿಷಡ್ವರ್ಗಗಳನ್ನು ಗೆದ್ದಿರುವ ಸನ್ಯಾಸಿಯೇ?' ಎಂದುಕೊಂಡು ಆ ಕ್ಷಣವೇ ನನ್ನ ಡಯಟ್ನ ಪ್ಲಾನನ್ನೆಲ್ಲಾ ತಿಪ್ಪೆಗೆಸೆದೆ. ಮಾರನೇ ದಿನವೇ ನಮ್ಮೂರಿಗೆ ಹೋಗಿ ನಮ್ಮತ್ತೆಯ ಕೈಲಿ ಬೋಟಿ ಗೊಜ್ಜು ಮಾಡಿಸಿಕೊಂಡು ಕಂಠಮಟ್ಟ ತಿಂದ ಬಳಿಕ ಆದ ತೃಪ್ತಿ ಸಮಾಧಾನಗಳು ಅಷ್ಟಿಷ್ಟಲ್ಲ.

ನಾನಂತೂ ನನ್ನ ಗಂಡನನ್ನು, 'ನಾನೇನಾದ್ರೂ ನಿಮಗಿಂತ ಮುಂಚಿತವಾಗಿ ಸತ್ತು ಹೋದರೆ, ತಿಥಿಗೆ, ಪಕ್ಷಕ್ಕೆ, ಬೋಟಿಗೊಜ್ಜು ಮಾಡಿಸಿ ಎಡೆ ಹಾಕದಿದ್ದರೆ, ನಿಮ್ಮನ್ನೆಲ್ಲಾ ಹಿಡಿದುಕೊಂಡು ಕಾಡುತ್ತೇನೆ' ಎಂದು ಹೆದರಿಸಿಟ್ಟಿದ್ದೇನೆ. ಅದಕ್ಕವರು, 'ಅದಕ್ಕೇನಂತೆ ಬಿಡು, ನನ್ನ ಹೊಸಾ ಹೆಂಡ್ತಿ ಕೈಲೇ ಮಾಡಿಸಿ, ತಿಂಗಳ ತಿಥಿಗೇ ಎಡೆ ಹಿಡಿದು, ಅವಳ ಕೈಲೇ ಧೂಪ ಹಾಕಿಸ್ತೀನಿ' ಎಂದಿದ್ದಾರೆ. ನೋಡೋಣ! ಏನಾಗುವುದೋ ಎಂದು.



**(ರಸಾಯನಶಾಸ್ತ್ರದ ಸ್ನಾತಕೋತ್ತರ ಪದವೀಧರೆಯಾದ ಸಮತಾ ಕೊಡಗಿನ ಗ್ರಾಮಾಂತರ ಪ್ರದೇಶದ ಪ್ರಾಯೋಗಿಕ ಶಾಲೆಯೊಂದರಲ್ಲಿ ವಿಜ್ಞಾನ ಉಪಾಧ್ಯಾಯಿನಿ)**

---

**೩ನೇ ಪುಟದಿಂದ)**

ನಿಮಗೆ ಇದೆಲ್ಲಾ ತಿಳಿಯಲ್ಲ' ಎನ್ನುವ ನಮ್ಮ ಮಾತುಗಳಲ್ಲಿ ಅಹಂಕಾರವಿಲ್ಲ ಎನ್ನಲಾಗುತ್ತದೆಯೆ? ನಮಗೆ ತಿಳಿದೋ ತಿಳಿಯದೆಯೋ ನಾವು ನಮ್ಮ ಜೊತೆ ಬಾಳುವ ಹಿರಿಯರಿಗೆ ಅವಮಾನಿಸುತ್ತಿರುತ್ತೇವೆ. ನಮ್ಮ ದೇಶದ ಸುಮಾರು ೭೧% ರಷ್ಟು ಹಿರಿಯರು ತಮ್ಮ ಮನೆಯವರಿಂದಲೇ ಈ ರೀತಿಯ ಅವಹೇಳನಕಾರಿ ನಡವಳಿಕೆಯಿಂದ ಹಿಂಸೆಯನ್ನು ಅನುಭವಿಸುತ್ತಿದ್ದಾರೆ (ಏಜ್ ವೆಲ್ ಫೌಂಡೇಶನ್ ಸಮೀಕ್ಷೆ, ೨೦೧೮).

ತಮ್ಮ ಹರೆಯದಲ್ಲಿ ಎಲ್ಲವನ್ನೂ ಕ್ಷಮತೆಯಿಂದ ನಿಭಾಯಿಸಿ ಜೀವನದ ಅನುಭವವನ್ನು ಹೇರಳವಾಗಿ ಪಡೆದವರಿಗೆ ಸ್ವಾಭಿಮಾನ ತುಂಬಿದ ಘನತೆಯ ವ್ಯಕ್ತಿತ್ವ ಇಳಿವಯಸ್ಸಿನಲ್ಲಿ ಸಹಜವಾಗಿಯೇ ಬಂದಿರುತ್ತದೆ. ಮಕ್ಕಳಿಂದ ದೂರ ಸ್ವತಂತ್ರವಾಗಿ ಬದುಕುತ್ತಿರುವ ಇಳಿವಯಸ್ಸಿನ ದಂಪತಿಗಳ ಸಮಸ್ಯೆಗಳ ಸ್ವರೂಪ ಬೇರೆಯಾಗಿರುತ್ತದೆ. ಆದರೆ ಹರೆಯದ ತಮ್ಮ ಮಕ್ಕಳೊಡನೆ ಒಂದೇ ಸೂರಿನಲ್ಲಿ ಬದುಕುವ ಅನಿವಾರ್ಯತೆ ಇದ್ದಾಗ ಈ ಘನತೆಯ ವ್ಯಕ್ತಿತ್ವಕ್ಕೆ ಪದೇ ಪದೇ ಚ್ಯುತಿ ತರುವ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ಪಿಂಚಣಿ ಬರದ, ಆರೋಗ್ಯದ ಸಮಸ್ಯೆಯಿರುವ, ಸಂಗಾತಿಯನ್ನು ಕಳೆದುಕೊಂಡು ಮಕ್ಕಳ ಜೊತೆಯಿರುವ ಹಿರಿಯ ಜೀವಗಳು ಅತಿ ಹೆಚ್ಚು ಮಾನಸಿಕ ಹಿಂಸೆಗೆ ಒಳಗಾಗುತ್ತಾರೆ.

ಮಕ್ಕಳ ಜೊತೆ ಬದುಕುವ ಇಂತಹ ಹಿರಿಯ ನಾಗರಿಕರೂ ಸಹ ಸಮಸ್ಯೆಗಳ ಪರಿಹಾರದ ಬಗ್ಗೆ ಯೋಚಿಸಬೇಕಾಗಿದೆ. ಹಿರಿಯರು ಕಿರಿಯರಿಂದ ಯಾವುದೇ ನಿರೀಕ್ಷೆ ಇಟ್ಟುಕೊಳ್ಳದೆ ತಮ್ಮನ್ನು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಇರುವುದೇ ಮಾನಸಿಕ ನೆಮ್ಮದಿಗೆ ಪೂರಕ. ಕಾನೂನಿನಾಚೆಗಿನ ಪರಿಹಾರದ ಹಾದಿಯಲ್ಲಿ ನಡೆವ ಜವಾಬ್ದಾರಿ ನಮ್ಮ ಹಿರಿಯರಿಗಿಂತ ನಮ್ಮಂತಹ ಕಿರಿಯರ ಮೇಲೆ ಹೆಚ್ಚಿರುವುದನ್ನು ನಾವು ಅರಿಯಬೇಕಾಗಿದೆ. 'ಹಿರಿಯರು ಕಿರಿಕಿರಿ ಮಾಡುತ್ತಾರೆ' ಎನ್ನುವ ನಮಗೆ ಆ ವಯಸ್ಸಿನ ಮಿತಿಗಳನ್ನು ತಿಳಿದುಕೊಂಡು ವ್ಯವಹರಿಸುವ ತಾಳ್ಮೆ ಇಲ್ಲ. ಯೌವನದ ಹಾದಿಯಲ್ಲಿರುವ ನಮಗೆ ಸಹನೆ ಮತ್ತು ಪ್ರೀತಿಯ ಸ್ವರೂಪದ ಬಗ್ಗೆ ಇರುವ ಕಲ್ಪನೆ ಯಾವುದು? 'ಬ್ಯುಸಿ' ಮತ್ತು 'ಯಶಸ್ವಿ' ಬದುಕಿನ ಗುರಿಯುಳ್ಳ ನಾವು ನಮ್ಮ ಅಂತರಂಗದ ಪರಿಶೀಲನೆಗೆ ಸಮಯ ಇಡಲು ತಯಾರಿದ್ದೇವೆಯೇ? ಬಹುಪಾಲು ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನಮ್ಮೊಳಗೇ ಇದೆ!



**(ಬೆಂಗಳೂರಿನ ದಂತ ವೈದ್ಯಕೀಯ ಕಾಲೇಜೊಂದರಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ಸುಶಿ ಅವರು ಕನ್ನಡದ ಭರವಸೆಯ ಲೇಖಕಿಯೂ ಹೌದು)**

# ನವಿಲುಗರಿ

## ಮಂಜಣ್ಣನ ಗ್ರಂಥಿಗೆ ಅಂಗಡಿಯಲ್ಲಿ



ಒಂದಕ್ಕೊಂದು ತಾಳೆಯಿರದ
ಚಿಕ್ಕ ಪುಟ್ಟ ವಸ್ತುಗಳ ಆಗರ:

ಮೈಲುತುತ್ತ ತಾಯತ
ತುಕ್ಕು ಹಿಡಿದ ಇಲಿಬೋನು
ವರುಷಗಳ ಬಣ್ಣ ಕಳೆದ
ಪುರಾತನ ಜೇನು ತುಪ್ಪ
ಮೀನಿನ ಗಾಳದ ಕೊಂಡಿ

ಮನೆಯ ಹೊಸ್ತಿಲಿನ ಪಂಚಲೋಹ
ವಂಡುನೀರ  ತಿಳಿಗೊಳಿಸುವ ಪಟಕ
ಗೋಡೆಗೆ ತ್ಯಾಪೆ ಮೆತ್ತುವ ಮೇಣ

ಇಡಿಕ್ಕಿರಿದಿವೆ ಮೂಲೆ ಮೂಲೆಗಳಲ್ಲಿ:

ತಾಂಡವಾಳದ ಹೆಂಚು
ತಗಡು ತಾಮ್ರದ ಬಿಲ್ಲೆ
ಭರಣಿ ಮಂಗಳ ವಸ್ತ್ರ
ಚರಕ ಚದುರಂಗದ ಚೌಕ
ಪಗಡೆ ಕವಡೆ
ಅನಾದಿ ದವಡೆ
ಉಪ್ಪಿನಕಾಯಿ ಜಾಡಿ
ತಾಯಂದಿರ ಕೈಪಿಡಿ

ಹೊಟ್ಟೆಯ ಭಟ್ಟಿಗೆ ಲಟಿಗೆ
ಉಳುಕು ತೆಗೆವ ಕೀಲೆಣ್ಣೆ
ಒಣಗಿದ ತಾವರೆ ದಂಟು
ತರೇವಾರಿ ಸಸ್ಯಗಳ ನಂಟು
ಸರ್ಪಸುತ್ತಿಗೆ ಹುತ್ತದ ಮಣ್ಣು
ಒಳಲೆ ತುಂಬ ಮಕ್ಕಳ ಬೇರು
ನಚ್ಚಗಿನ ತಾಯಿ ಬೇರು
ಮನೆ ಮದ್ದು ದೇಸಿವೈದ್ಯದ
ಕೈ ಒತ್ತು...

ಅಬ್ಬಬ್ಬ ಏನುಂಟು ಏನಿಲ್ಲ
ಕತ್ತಲ ಎತ್ತರದ ಅಟ್ಟಣಿಗೆಯಲ್ಲಿ
ಬೆಳಕ ಕಿಂಡಿಯ ಗೋಜಲು ಮೆಳೆಯಲ್ಲಿ
ಈ ಇಕ್ಕಟ್ಟಿನ ಮಾಯಾಲೋಕದಲ್ಲಿ

ಇಲ್ಲಿ ಯಾವುದಕ್ಕೂ
ಸಿದ್ಧ ಪರಿಕರವಿಲ್ಲ
ಪಟ್ಟನೆ ಪರಿಹಾರವಿಲ್ಲ
ಸೂತ್ರದ ಪಟವಿಲ್ಲ
ಈ ಹೊತ್ತಿನ ಉತ್ತರವಿಲ್ಲ


ನಾಳೆ ಅಲ್ಲದೆ ಹೋದರೇನಂತೆ
ಮೂರು ಸಂಜೆಯ ನಂತರ
ಹುಣ್ಣಿಮೆ ಅಮಾವಾಸ್ಯೆಗಳು
ಉರುಳಿದರೂ ಇದೇ ಮೂಲಕ್ಕೆ
ಮೆಟ್ಟಿಲ ಸಾವಧಾನ ಹತ್ತಿ ಬರುವ
ಬಾಗಿದ ಬೆನ್ನಿನ ಗಿರಾಕಿಗಳು...

ಸಕ್ಕರೆಗೆ ಮುತ್ತರಿಸಲು
ಶೂನ್ಯದಿಂದ ನಿರುಕಿಸಿದ
ಇರುವೆ ಸಾಲಂತೆ...

ಎಲ್ಲಿದ್ದರು ಇವರೆಲ್ಲ
ನರಳಿಕೆಯೇ ಬಿಳಲಾದವರು
ನವಿಲುಗರಿಯ ಹುಡುಕುವವರು
ನೆಮ್ಮದಿಯ ಭಿಕ್ಷೆಯ ಬೇಡುವವರು
ನಿಡಿದು ಉಸಿರಿಗೆ ಅಂಗಲಾಚುವವರು

ಧಾವಂತದ ಯುಗಕೆ ಬೆನ್ನು ಹಾಕಿ
ಕಾಲು ಮುರಿದು ಬಿದ್ದಿದೆ ಇಲ್ಲಿ ಕಾಲ–
ಸರಿವ ಸದ್ದೇ ಕಣ್ಣಾದ ಬಾವಲಿಯಂತೆ
ನಂಬಿಕೆಯ ರೆಂಬೆಗೆ ಜೋತಾಡುವ,
ಸರಿ ತಪ್ಪುಗಳ ತೆಕ್ಕೆಗೆ ಸಿಲುಕದ
ನಮ್ಮದಲ್ಲದ ಈ ಜಗದಲ್ಲಿ

**–ಪವಿತ್ರ ಪ್ರಿಯಭಾಷಿಣಿ**



ಚಿತ್ರ: ವಿಜಯಶ್ರೀ ಹಾಲಾಡಿ



## ಚಾಕು ಜಾದೂಗಾರ

ಒಂದೊಂದೆ ಚಾಕು
ಎಸೆಯುತ್ತಿದ್ದ, ಚಾಕು ಜಾದೂಗಾರ
ಸರ್ಕಸ್ಸಿನ ಆ ಹಲಗಿಗೆ
ಆತು ನಿಂತ, ಆ ಹೆಣ್ಣಿಗೆ

ಕುತ್ತಿಗೆ ಪಕ್ಕೆ
ಬಿಡಿಸಿದ ಅಗಲ ಕೈ ಅಂಗೈಗಳತ್ತ
ತಲೆ ಮೇಲೆ
ಸೊಂಟ ಸುತ್ತ ಎಸೆಯುತ್ತಿದ್ದ
ಕಣ್ಣು ಕಟ್ಟಿದ ಜಾದೂಗಾರ

ಕೂಗುತ್ತಿದ್ದರು
ಕೇಕೆ ಹಾಕುತ್ತಿದ್ದರು
'ಓಹ್' ನಿಟ್ಟುಸಿರು  ಬಡಿತ
ನಿಂತವಳು ಮಾತ್ರ ನಿಶ್ಚಲ ನಿಶ್ಚಿಂತ
(ಒಳಗುರಿಯುತಿದೆ ಚಿಂತೆ)

ಮೈ ಮರೆವ ಆಟವಲ್ಲ
ಹಲಗೆಗೆ ಆತು ನಿಂತವಳಿಗೆ
ಎದೆಯುಸಿರಿನ ಕುದಿ ಬಿಂದು ಅವಳಿಗೆ

ಸುತ್ತ ನೋಡುವವರು
ಅತ್ತಿತ್ತ ಕದಲದೇ ನೋಡುತ್ತಿದ್ದಾರೆ.
ನನಗೆ ಅವಳೊಂದು
ನೇತು ಬಿದ್ದ ಭಾರತ.
ಕ್ರಿಸ್ತನೋ ಮಾತೆ ಭಾರತಿಯೋ
ಅಗ್ನಿ ದಿವ್ಯದ ಸೀತೆಯೋ ಅನ್ನಿಸುತ್ತಿದ್ದಾಳೆ


ಚಾಕು ಎಸೆಯುವವನ
ಆಟದ ಗಮ್ಮತ್ತು
ಯಾರಿಗೂ ಗೊತ್ತಾಗುತ್ತಿಲ್ಲ
ಕಣ್ಣು ಕಟ್ಟಿದ್ದಾನೆ, ಎಲ್ಲ  ಕಣ್ಕಟ್ಟಾಟ!



ಜನ ಹುಚ್ಚಾಗಿದ್ದಾರೆ
ಇವನ ಆಟಕ್ಕೆ
ನೇತು ಬಿದ್ದ ಭಾರತದ
ಎದೆ ಮಾತ್ರ ಕಾಣುತ್ತಿಲ್ಲ

**–ಸತೀಶ್ ಕುಲಕರ್ಣಿ**

# ಜೆಕೆ ಅವರ ಚಿಂತನೆಗಳು



ಜೆಕೆ ಎಂದೇ ಜಗತ್ತಿನಾದ್ಯಂತ ಪ್ರಸಿದ್ಧರಾಗಿರುವ ಜಿಡ್ಡು ಕೃಷ್ಣಮೂರ್ತಿ ಅಥವಾ ಜೆ. ಕೃಷ್ಣಮೂರ್ತಿ (೧೮೯೫–೧೯೮೬) ಆಧುನಿಕ ಕಾಲದ ದಾರ್ಶನಿಕರೆಂದೇ ಹೆಸರಾದವರು. ಪ್ರೇತಾತ್ಮಗಳನ್ನು ನಂಬುವ ದೈವಶಾಸ್ತ್ರವೆಂದೇ ಪ್ರಸಿದ್ಧವಾದ ಥಿಯೋಸಫಿ ಆಂದೋಲನದ ನಾಯಕರಿಂದ ಎಳವೆಯಲ್ಲೇ ವಿಶ್ವಗುರು ಎಂದು ಆಯ್ಕೆಯಾಗಿ ಅನಿಬೆಸಂಟ್ ಅವರಿಂದ ಪೋಷಿಸಲ್ಪಟ್ಟ ಜೆಕೆ, ಅತಿ ಬೇಗ ತಮ್ಮದೇ ಚಿಂತನಾಕ್ರಮವನ್ನು ಬೆಳೆಸಿಕೊಂಡು ಥಿಯೋಸಫಿ ಪೋಷಣೆಯಿಂದ ದೂರವಾದರಲ್ಲದೆ 'ವಿಶ್ವಗುರು' ಮತ್ತು 'ಪೂರ್ವದ ನಕ್ಷತ್ರ' ಮುಂತಾದ ಪದವಿಗಳನ್ನು ತಿರಸ್ಕರಿಸಿದರು.

ಸಮಾಜವನ್ನು ಧರ್ಮ ಅಥವಾ ರಾಜಕಾರಣಗಳಂತಹ ಹೊರಗಿನ ಶಕ್ತಿಗಳಿಂದ ಪರಿವರ್ತನೆಗೊಳಿಸಲು ಸಾಧ್ಯವಿಲ್ಲ ಎಂದು ಭಾವಿಸಿದ್ದ ಜೆಕೆ ಮನಸ್ಸಿನ ಸ್ವಭಾವವನ್ನು ವ್ಯಕ್ತಿಯೇ ತೀವ್ರ ತನಿಖೆಗೆ ಒಳಪಡಿಸುವ ಮೂಲಕ ಮಾತ್ರ ಸಂಬಂಧಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಬಹುದು ಎಂದು ಪ್ರತಿಪಾದಿಸಿದರು. ಇದಕ್ಕೆ ಸಂಬಂಧಪಟ್ಟಂತೆ ತಮ್ಮ ಆಲೋಚನೆಗಳನ್ನು ದೊಡ್ಡ ಮತ್ತು ಸಣ್ಣ ಗುಂಪುಗಳಲ್ಲಿ ತಮ್ಮ ಭಾಷಣ ಮತ್ತು ಚರ್ಚೆಗಳ ಮೂಲಕ ಹಂಚಿಕೊಳ್ಳುತ್ತಿದ್ದರು. ಅವರ ಈ ಪ್ರಯತ್ನಗಳಿಗೆ ಪೂರಕವಾಗಿ ಜಗತ್ತಿನಾದ್ಯಂತ ಅನೇಕ ಪ್ರತಿಷ್ಠಾನ, ವೇದಿಕೆ, ಶಾಲೆ, ಸಂಸ್ಥೆ ಇತ್ಯಾದಿಗಳು ಸ್ಥಾಪಿತವಾಗಿದ್ದು ಅವು ಅವರ ಭಾಷಣ ಮತ್ತು ಚರ್ಚೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿವೆ. ಸ್ವತಃ ಜೆಕೆ ಅವರ ಮುಖ್ಯಕೃತಿಗಳೆಂದರೆ 'ದ ಫಸ್ಟ್ ಅಂಡ್ ಲಾಸ್ಟ್ ಫ್ರೀಡಮ್', 'ದ ಓನ್ಲಿ ರೆವಲ್ಯೂಷನ್ ಮತ್ತು ಕೃಷ್ಣಮೂರ್ತೀಸ್ ನೋಟ್ ಬುಕ್'. ಜೆಕೆ ಅವರ ಭಾಷಣಗಳ ಸಂಗ್ರಹಗಳು ಕನ್ನಡದಲ್ಲಿ ಲಭ್ಯವಿವೆ. ಇಲ್ಲಿ ಅವರ ವಿಚಾರಗಳಲ್ಲಿನ ಕೆಲವು ಸೂಕ್ತಿಗಳನ್ನು ಆರಿಸಿ ನೀಡಲಾಗಿದೆ.–ಸಂ.

೧. ಹಳತಾದುದೆಲ್ಲದರಿಂದ ಬಿಡುಗಡೆ ಪಡೆದಾಗ ಮಾತ್ರ ಮನಸ್ಸು ಹೊಸತನ್ನು ಕಾಣುತ್ತದೆ, ಸಂತೋಷವಾಗಿರುತ್ತದೆ.

೨. ನಮಗಿಂತ ಹಿಂದಿನ ಕಾಲದ ಸಾವಿರಾರು ಜನ ಏನು ಹೇಳಿದ್ದಾರೆ ಸ್ವಿವ ಹೊರೆಯನ್ನು ಹೊತ್ತಿದ್ದೇವೆ, ನಮ್ಮ ಸಂಕಟ, ದುರದೃಷ್ಟಗಳ ಹೊರೆ ಹೊತ್ತಿದ್ದೇವೆ, ಇವೆಲ್ಲವನ್ನು ಬೀಸಾಡುವುದರಿಂದ ಮಾತ್ರ ಏಕಾಂಗಿಗಳಾಗಲು ಸಾಧ್ಯ. ತಾನೇ ತಾನಾಗಿರುವ ಮನಸ್ಸು ಮಾತ್ರ ಮುಗ್ಧವಾಗಿರುತ್ತದೆ, ಯೌವನದ ಮನಸ್ಸಾಗಿರುತ್ತದೆ. ಈ ಯೌವನ ಕಾಲಕ್ಕೋ ವಯಸ್ಸಿಗೋ ಸಂಬಂಧಿಸಿದ್ದಲ್ಲ. ಅಂಥ ಮನಸ್ಸು ಮಾತ್ರ ಮಾತುಗಳಿಂದ ಹೇಳಲಾಗದ ಸತ್ಯವನ್ನು ಕಾಣಬಲ್ಲದು.

೩. ಧರ್ಮವೆಂದರೆ ಮನುಷ್ಯನ ಪರಿವರ್ತನೆ, ಮನುಷ್ಯನ ಹೊಸ ಹುಟ್ಟು. ಧರ್ಮವೆಂದರೆ ಎಲ್ಲ ಚೈತನ್ಯದ ಶಿಖರ. ಚತನ್ಯವೇ ಇರುವುದನ್ನು ಬದಲಾಯಿಸುವ ಶಕ್ತಿ. ಆ ಶಕ್ತಿ ಸಂಘರ್ಷದಿಂದ ಹುಟ್ಟುವುದಿಲ್ಲ. ಸಂಘರ್ಷ, ಘರ್ಷಣೆ, ವಿಭಜನೆ ನಮಗೆ ಗೊತ್ತು. ಆದರೆ ಧರ್ಮದ ಮನಸ್ಇನ ಶಕ್ತಿ ಸಂಪೂರ್ಣವಾಗಿ ಬೇರೆಯ ರೀತಿಯದು. ಅಂಥ ಮನಸ್ಸು ಇರುವುದನ್ನು ಕಾಣುವುದರಲ್ಲಿ, ಗ್ರಹಿಸುವುದರಲ್ಲಿ ತೊಡಗಿರುತ್ತದೆ.

೪. ನಾವು ಯಾವುದನ್ನು ಧರ್ಮವೆಂದು ಕರೆಯುತ್ತೇವೆಯೋ ಅದು ಕೇವಲ ಸುವ್ಯವಸ್ಥೆಗೊಂಡ ನಂಬಿಕೆಗಳು, ಅಷ್ಟೇ ನಂಬಿಕೆಯೊಡನೆ ಕುರುಡು ವಿಶ್ವಾಸ, ಆಚರಣೆ, ಮೂಢನಂಬಿಕೆ, ನಿಗೂಢಸಂಗತಿಗಳು ಇವೆಲ್ಲ ಬೆರೆತಿರುತ್ತವೆ. ಒಂದೊಂದು ಧರ್ಮಕ್ಕೂ ಒಂದೊಂದು ಪವಿತ್ರ ಗ್ರಂಥವಿದೆ, ಪ್ರವಾದಿಯಿದ್ದಾನೆ, ಪುರೋಹಿತರಿದ್ದಾರೆ; ಒಂದೊಂದು ಧರ್ಮಕ್ಕೂ ಜನರನ್ನು ಹೆದರಿಸಿ ಅಂಕೆಯಲ್ಲಿಟ್ಟುಕೊಳ್ಳುವ ತನ್ನದೇ ವಿಧಾನಗಳಿವೆ..

೫. ನಾವು ಬಹಳಷ್ಟು ಜನ ಧಾರ್ಮಿಕ ಶಿಕ್ಷಣವೆಂದು ಕರೆಯಲಾಗುವುದಕ್ಕೆ ಹೊಂದಿಕೊಂಡಿದ್ದೇವೆ, ಅದಕ್ಕೆ ಅನುಗುಣವಾಗಿ ತಿದ್ದಿಕೊಂಡಿದ್ದೇವೆ. ಈ ಶಿಕ್ಷಣ ಮನುಷ್ಯನನ್ನು ಮತ್ತೊಬ್ಬ ಮನುಷ್ಯನ ವಿರೋದಿಯಾಗಿ ನಿಲ್ಲಿಸಿದೆ, ದ್ವೇಷವನ್ನು ಹುಟ್ಟಿಸಿದೆ. ಈ ದ್ವೇಷ ತಮ್ಮದೇ ಧರ್ಮವನ್ನು ನಂಬುವವರ ಬಗ್ಗೆ ಮಾತ್ರವಲ್ಲ ಇತರ ಧರ್ಮದವರ ಬಗ್ಗೆಯೂ ಚಾಚಿಕೊಂಡಿದೆ.

೬. ಬದುಕಿನ ಒಂದಿಷ್ಟು ಸಂಗತಿಯನ್ನು ಅರಿತರೆ ಸಾಲದು ಇಡೀ ಬದುಕನ್ನು ಅರಿಯಬೇಕು. ಹಾಗಾಗಿ ನೀವು ಓದಬೇಕು, ಆಕಾಶ ನೋಡಬೇಕು, ಹಾಡಬೇಕು, ಕುಣಿಯಬೇಕು, ಕವಿತೆ ಬರೆಯಬೇಕು, ನೋವು ಅನುಭವಿಸಬೇಕು?ಇವೆಲ್ಲವೂ ಕೂಡಿಯೇ 'ಬದುದು.'

೭. ನಿಮ್ಮನ್ನು ನೀವು ಭಾರತೀಯ ಅಥವಾ ಮುಸ್ಲಿಮ್ ಅಥವಾ ಕ್ರಿಶ್ಚಿಯನ್ ಎಂದು ಕರೆದುಕೊಂಡಾಗ ನಿಮ್ಮಲ್ಲಿ ಹಿಂಸೆ ಇರುತ್ತದೆ. ಯಾಕೆ ಗೊತ್ತೇ? ನಿಮ್ಮನ್ನು ನೀವು ಮನಷ್ಯಕುಲದಿಂದ ಬೇರ್ಪಡಿಸಿಕೊಂಡಿರುತ್ತೀರಿ, ಅದಕ್ಕೆ. ಧರ್ಮದ ಕಾರಣದಿಂದಲೋ ರಾಷ್ಟ್ರೀಯತೆಯ ಕಾರಣದಿಂದಲೋ, ಪರಂಪರೆಯ ಕಾರಣದಿಂದಲೋ 'ನಾನು ಬೇರೆ' ಅನ್ನುವ ಭಾವ ಬಲಿತಾಗ ಹಿಂಸೆ ಹುಟ್ಟುತ್ತದೆ. ಹಿಂಸೆ ಎಂದರೇನು ಎಂದು ಅರಿಯಲು ಬಯಸುವ ಮನುಷ್ಯ ಯಾವುದೇ ದೇಶಕ್ಕೆ, ಧರ್ಮಕ್ಕೆ, ರಾಜಕೀಯ ಪಕ್ಷಕ್ಕೆ ಸೇರಿದವನಲ್ಲ. ಅಂಥ ಮನುಷ್ಯ ಇಡೀ ಮಾನವಕುಲವನ್ನು ಅರ್ಥಮಾಡಿಕೊಳ್ಳಲು ತೊಡಗಿರುತ್ತಾನೆ.

೮. ಅವರವರ ನಂಬಿಕೆ ಅವರಿಗೆ ಎಂದು ನನ್ನ ನಂಬಿಕೆ, ನನ್ನ ಧರ್ಮ, ನನ್ನ ಅಭಿಪ್ರಾಯ, ನನ್ನ ತಿಳಿವಳಿಕೆಗೆ ನಾನೂ, ನಿಮ್ಮದಕ್ಕೆ ನೀವೂ ಬಲವಾಗಿ ಬದ್ಧರಾಗಿದ್ದಾಗ ನಿಜವಾದ ಸಂವಾದ ಸಾಧ್ಯವಾಗುವುದೇ ಇಲ್ಲ. ಯಾಕೆಂದರೆ ಆಗ ನಮಗೆ ನಿಜವಾಗಿ ಪರಿಶೀಲಿಸುವ, ಅರಿಯುವ ಸ್ವಾತಂತ್ರ್ಯವೇ ಇರುವುದಿಲ್ಲ. ಸಂವಾದವೆಂದರೆ ನಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುವುದಲ್ಲ. ಹಂಚಿಕೊಳ್ಳುವುದಕ್ಕೆ ಏನೂ ಇಲ್ಲ, ಇರುವುದು ಸತ್ಯದ ಚೆಲುವು ಮಾತ್ರ. ಅದು ನನ್ನದೂ ಅಲ್ಲ, ನಿಮ್ಮದೂ ಅಲ್ಲ, ಯಾರದ್ದೂ ಅಲ್ಲ. ಸತ್ಯ ಸುಮ್ಮನೆ ಇರುತ್ತದೆ, ಅಷ್ಟೆ

೭. ಸ್ವಾತಂತ್ರ್ಯ ಮತ್ತು ಪ್ರೀತಿ ಒಟ್ಟಿಗೆ ಇರುತ್ತವೆ. ಪ್ರೀತಿ ಎಂದರೆ ಪ್ರತಿಕ್ರಿಯೆಯಲ್ಲ. ನೀನು ನನ್ನನ್ನು ಪ್ರೀತಿಸುತ್ತೀಯೆ, ಅದಕ್ಕೇ ನಾನು ನಿನ್ನ ಪ್ರೀತಿಸುತ್ತೇನೆ ಅಂದರೆ ಅದು ವ್ಯವಹಾರ, ಕೊಡುಕೊಳ್ಳುವಿಕೆಯೇ ಹೊರತು ಪ್ರೀತಿಯಲ್ಲ. ಪ್ರೀತಿಸುವುದೆಂದರೆ ಪ್ರತಿಯಾಗಿ ಏನನ್ನೂ ಬಯಸದಿರುವುದು, ನೀವು ಏನನ್ನೋ ಕೊಡುತ್ತಿದ್ದೀರಿ ಅಂತ ಕೂಡ ಅಂದುಕೊಳ್ಳದಿರುವುದು. ಅಂಥ ಪ್ರೀತಿ ಇದ್ದಾಗ ಮಾತ್ರ ಸ್ವಾತಂತ್ರವನ್ನು ಅರಿಯಬಲ್ಲುದು.

೮. ಸ್ಪರ್ಧೆಯ ಮನೋಭಾವ ಇಲ್ಲದಿರುವಾಗ ಮಾತ್ರ ನಿಜವಾದ ಕಲಿಕೆ ಸಾಧ್ಯವಾಗುತ್ತದೆ.

೯. ಸರ್ಕಾರಗಳಿಗೆ ತಂತ್ರಜ್ಞರು ಬೇಕು, ಮನುಷ್ಯರು ಬೇಡ. ಯಾಕೆಂದರೆ ನಿಜವಾದ ಮನುಷ್ಯರು ಸರ್ಕಾರಕ್ಕೆ ಮತ್ತು ವ್ಯವಸ್ಥಿತ ಧರ್ಮಕ್ಕೆ ಅಪಾಯಕಾರಿಗಳು. ಅದೇ ಕಾರಣಕ್ಕೆ ಸರ್ಕಾರ ಮತ್ತು ಧರ್ಮ ಶಿಕ್ಷಣದ ಮೇಲೆ ನಿಯಂತ್ರಣ ಪಡೆಯಲು ಬಯಸುತ್ತವೆ.

೧೦. ಪರಂಪರೆಯೆಂದರೆ ಸುರಕ್ಷೆ. ಮನಸ್ಸು ಸುರಕ್ಷಿತವಾಗಿರುವಾಗ ಕೊಳೆಕೊಳೆಯುತ್ತದೆ.

೧೧. ನಿಮಗೆ ಏನು ಗೊತ್ತು ಅಂದುಕೊಂಡಿದ್ದೀರೋ ಅದರ ಬಗ್ಗೆ ಮಾತ್ರ ನೀವು ಭಯಪಡಬಹುದು.

೧೨. ನನ್ನ ನಂಬಿಕೆ ಇದು ಎಂದು ಮತ್ತೆ ಮತ್ತೆ ಹೇಳುವುದು ನಿಮ್ಮ ಭಯವನ್ನು ಸೂಚಿಸುತ್ತದೆ.

೧೩. ನನ್ನನ್ನು ನಾನು ಅರ್ಥಮಾಡಿಕೊಂಡಾಗ ನೀನೂ ಅರ್ಥವಾಗುತ್ತೀಯೆ. ಈ ಅರ್ಥದಿಂದಲೇ ಪ್ರೀತಿ ಮೂಡುತ್ತದೆ. ಪ್ರೀತಿಯೇ ಮಿಸಿಂಗ್ ಲಿಂಕ್.ನಮ್ಮಲ್ಲಿ ಪ್ರೀತಿ, ಮರುಕ, ಔದಾರ್ಯ ಇಲ್ಲದಿರುವುದರಿಂದ ಸಾಮೂಹಿಕ ಕ್ರಿಯೆಯಲ್ಲಿ ತಲೆ ತಪ್ಪಿಸಿಕೊಳ್ಳುತ್ತೇವೆ, ಅದರಿಂದ ಮತ್ತಷ್ಟು ಗೊಂದಲ ಹುಟ್ಟುತ್ತದೆ, ಮತ್ತಷ್ಟು ಸಂಕಟವಾಗುತ್ತದೆ. ನಮ್ಮ ಹೃದಯಗಳಲ್ಲಿ ಭವಿಷ್ಯದ ಜಗತ್ತಿನ ನೀಲಿ ನಕ್ಷೆ ಇದೆ, ಪ್ರೀತಿಯ ಅರಿವು ಇಲ್ಲ.

೧೪. ಕರುಣೆಯೆಂದರೇನು, ಪದದ ಅರ್ಥವಲ್ಲ, ನಿಜವಾಗಿ ಕರುಣೆ ಎಂದರೇನು? ಅದು ಆಲೋಚನೆಯ, ಅಭ್ಯಾಸದ, ಯಾಂತ್ರಿಕ ಸೌಜನ್ಯ, ಮೃದುಮಾತುಗ ಸಂಗತಿಯಲ್ಲ. ಆಲೋಚನೆಗಳ ಬಂಧನಕ್ಕೆ ಒಳಗಾದ ಮನಸ್ಸು ಯಾಂತ್ರಿಕ ರಿಪಿಟಿಶನ್ಗೆ ಒಳಗಾದ ಮನಸ್ಸು, ಕರುಣೆ ತೋರಬಲ್ಲುದೇ? ಅಂಥ ಮನಸ್ಸು ಕರುಣೆಯ ಬಗ್ಗೆ ಮಾತಾಡಬಹುದು, ಸಮಾಜ ಸುಧಾರಣೆಯ ಬಗ್ಗೆ ಮಾತಾಡಬಹುದು, ಅನ್ಯ ಧರ್ಮೀಯರಿಗೆ ಮರುಕವನ್ನೂ ತೋರಬಹುದು. ಆದರೆ ಅದು ಕರುಣೆಯೇ? ಕರುಣೆಯೆಂದರೆ ಉದ್ದೇಶರಹಿತವಾದ ಕ್ರಿಯೆ. ಸ್ವಾರ್ಥ ರಹಿತವಾದ ಕ್ರಿಯೆ, ಭಯವಿಲ್ಲದ, ಸುಖದ ಅಪೇಕ್ಷೆ ಇಲ್ಲದ ಕ್ರಿಯೆ.

೧೫. ಪ್ರಶ್ನೆಯನ್ನು ನಿಜವಾಗಿ ಅರ್ಥಮಾಡಿಕೊಂಡಾಗ ಉತ್ತರವು ಪ್ರಶ್ನೆಯಿಂದಲೇ ಹೊಮ್ಮುತ್ತದೆ. ಯಾಕೆಂದರೆ ಉತ್ತರವೆನ್ನುವದು ಪ್ರಶ್ನೆಯಿಂದ ಬೇರೆಯಾಗಿ ಇರುವಂಥದಲ್ಲ.

(ಸಂಗ್ರಹ: **ಪ್ರೊ. ಓ.ಎಲ್ ನಾಗಭೂಷಣ ಸ್ವಾಮಿ**)

# ಸಾಹಿತ್ಯ-ಸಂಸ್ಕೃತಿ-ರಾಜಕಾರಣ ಇತ್ಯಾದಿ ಕೆಲ ಬಿಡಿ ಟಿಪ್ಪಣಿಗಳು

## ಹಂಪನಾ ಅವರಿಗೆ ರಾಷ್ಟ್ರಪತಿ ಪುರಸ್ಕಾರ: ಅಭಿನಂದನೆಗಳು



**ಶಾ**ಸ್ತ್ರೀಯ ಭಾಷೆಗಳ ಏಳಿಗೆಗಾಗಿ ಸಲ್ಲಿಸಿದ ಸೇವೆಗಾಗಿ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ನೀಡಲಾಗುವ ರಾಷ್ಟ್ರಪತಿಯವರ ಪುರಸ್ಕಾರ ಈ ವರ್ಷ ನಮ್ಮ ಚಿರ ಯೌವ್ವನಿಗ ವಿದ್ವಾಂಸ ಹಂಪನಾ ಅವರಿಗೆ ಸಂದಿದೆ. ಅವರಿಗೆ ಅಭಿನಂದನೆಗಳು. ವಿದ್ವತ್ತು, ಸಂಶೋಧನೆಗಳೆಂಬುವೆಲ್ಲ ಹಳ್ಳ ಹತ್ತಿ ಹೋಗುತ್ತಿರುವ ಇಂದಿನ ದಿನಗಳಲ್ಲಿ ಹಂಪನಾರಂತಹವರ ಶ್ರದ್ಧೆ ಮತ್ತು ಪರಿಶ್ರಮ ನಿಜವಾಗಿಯೂ ಇಂತಹ ಉನ್ನತ ಮಾನ್ಯತೆಗೆ ಅರ್ಹವಾದವುಗಳೇ.

ಹುಟ್ಟಿನಿಂದ ಸ್ವತಃ ಜೈನರಾದ ಅವರು ಜೈನ ಧರ್ಮಶಾಸ್ತ್ರ, ಸಾಹಿತ್ಯ ಮತ್ತು ಇತಿಹಾಸ-ಪರಂಪರೆಗಳ ಬಗ್ಗೆ ವಿಶೇಷ ಒಲವು ಸಹಜವೇ ಆಗಿದ್ದಾದರೂ, ಜೈನಮೂಲವಾದ ಕನ್ನಡ ಸಾಹಿತ್ಯಕ್ಕೆ ಇದರಿಂದ ಸಂದಿರುವ ಕೊಡುಗೆ ಕಡಿಮೆ ಅಮೂಲ್ಯವಾದ್ದೇನಲ್ಲ. ಎಂಬತ್ತಮೂರರ ಈ ಹರೆಯದಲ್ಲೂ ಅವರ ಸಂಶೋಧನಾ ಕಾರ್ಯ, ಹಲವು ಜೈನ ಸಂಶೋಧನಾ ಸಂಸ್ಥೆಗಳ ಸಾರಥ್ಯ ಮತ್ತು ಅವುಗಳಿಗೆ ಸಂಬಂಧಿಸಿದ ತಿರುಗಾಟಗಳ ಭರಾಟೆಯಲ್ಲಿ ವ್ಯಕ್ತವಾಗುವ ಜೀವನೋತ್ಸಾಹ ಎಳೆಯರನ್ನೂ ನಾಚಿಸುವಂತಹದು.

ಹಿರಿಯ ವಿದ್ವಾಂಸರಾದರೂ ಹಂಪನಾ ವಿದ್ವತ್ತಿನಿಂದ ತಲೆ ತಿರುಗಿಸಿಕೊಂಡವರಲ್ಲ. ಸಾರ್ವಜನಿಕ ಜೀವನದಲ್ಲಿ ಸಾಮಾನ್ಯರ ಜತೆ ಸಾಮಾನ್ಯರಾಗಿಯೇ ಉಳಿದಿರುವ ಅವರ ಹಾಸ್ಯಪ್ರಜ್ಞೆ ಲೋಕವಿದಿತ. ಅವರು ನನಗೆ ಪಿಯುಸಿಯಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಎರಡು ಪಿರಿಯಡ್ಡುಗಳ ಮೇಷ್ಟ್ರು! ಒಬ್ಬ ಮೇಷ್ಟ್ರು ವರ್ಗವಾದರೆಂದು ಪಾಠ ಮಾಡುಲುಬಂದ ಇವರೂ ಬಹುಬೇಗ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಆಯ್ಕೆಯಾಗಿ ಹೋದರು. ಹಂಪನಾ ಅವರ ಜೈನಬಂಧುವೂ, ನಮ್ಮ ಮೇಷ್ಟ್ರೂ ಆಗಿದ್ದ ಜಗತ್ಪ್ರಸಿದ್ಧ ಜಿ. ಬ್ರಹ್ಮಪ್ಪ ವಿರಚಿತ 'ದಾನ ಚಿಂತಾಮಣಿ ಅತ್ತಿಮಬ್ಬೆ' ಎಂಬ ಜೈನಕುಲ ಕಾದಂಬರಿಯೊಂದನ್ನು ಪಾಠ ಮಾಡಲು ಬಂದ ಹಂಪನಾ ತಮ್ಮ ಮೊದಲ ಪಿರಿಯಡ್ಡಿನಲ್ಲಿ ಹಿಂದಿನ ಮೇಷ್ಟ್ರು ಪಾಠ ಎಲ್ಲಿಗೆ ನಿಲ್ಲಿಸಿದ್ದರು? ಎಂದು ಕೇಳಿದರು. ನಾವು ವಿದ್ಯಾರ್ಥಿಗಳು ಯಾರೋ ಮುದಿ ದೊರೆ ಸತ್ತ ಪ್ರಸಂಗವನ್ನು ಹೇಳಿದೆವು. ಅವರು ಕೂಡಲೇ 'ಹಾಂ! ತಾತ ಗೋತಾ ಹೊಡೆದ ಪ್ರಸಂಗ!' ಎಂದು ಪಾಠ ಶುರು ಮಾಡಿದಾಗ ತರಗತಿ ತುಂಬ 'ಹೋ!' ಎಂಬ ನಗೆಯ ಅಬ್ಬರ! ಈ ಭಯಂಕರ ಒಣ ಕಾದಂಬರಿಯನ್ನೂ ಇಷ್ಟು ಸ್ವಾರಸ್ಯಕರವಾಗಿ ಪಾಠ ಮಾಡಬಹುದೇ ಎಂಬ ಅಚ್ಚರಿ ನಮಗೆ. ಮೋಟಗಾನಹಳ್ಳಿಯ ಯಾರೋ ಶಾಸ್ತ್ರಿಗಳು ಸಂಪಾದಿಸಿದ್ದ 'ಅಕ್ರೂರ ಚರಿತ್ರೆ' ಎಂಬ ಕ್ರೂರ ಕಾವ್ಯ ಮತ್ತು ಪ್ರಭುಶಂಕರ ಅವರ ವಿವೇಕಾನಂದ ಭಕ್ತಿ ರಸಪೂರಿತ 'ನಿವೇದಿತಾ' ಎಂಬ ಘನಘೋರ ಗಾಂಭೀರ್ಯದ ಗದ್ಯದ ಹೊಡೆತಗಳಿಂದ ಘಾಸಿಗೊಂಡು ಹಂಪನಾ ಅವರ ಪಿರಿಯಡ್ಡುಗಳಿಂದ ಒಂದಿಷ್ಟು ಪರಿಹಾರ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದ ನಮಗೆ ಅವರ ವರ್ಗಾವಣೆ ಐವತ್ತು ವರ್ಷಗಳ ನಂತರವೂ ನೆನಪಿಸಿಕೊಳ್ಳುವಷ್ಟು ಭೀಕರ ಸುದ್ದಿಯಾಗಿ ನನ್ನ ಮನದಲ್ಲಿ ಉಳಿದಿದೆ ಅಂದರೆ ಅದು ಹಂಪನಾರ ವ್ಯಕ್ತಿತ್ವದ ಲಾಘವತೆಗೆ ಸಾಕ್ಷಿ.

'ಚಾರು ವಸಂತ' ಎಂಬ ವಿಶಿಷ್ಟ ಕಾವ್ಯ ಸಂಪಾದಿಸಿಯೂ ವಿದ್ವಾಂಸರೆಂದಷ್ಟೇ ಗುರುತಿಸಲ್ಪಟ್ಟಿರುವ ಹಂಪನಾ ಅವರಲ್ಲಿ ಸಾಹಿತ್ಯ ಸೂಕ್ಷ್ಮತೆಗಳಿಗೇನೂ ಕೊರತೆ ಇಲ್ಲಎಂಬುದು ಬಹಳ ವರ್ಷಗಳ ಹಿಂದೆಯೇ ಸಾಬೀತಾಗಿತ್ತು, ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಬಂಡಾಯ ಸಾಹಿತ್ಯವೆಂಬುದು ತಲೆ ಎತ್ತಿ, ಆಗ ಧರ್ಮಸ್ಥಳದಲ್ಲಿ ಏರ್ಪಾಡಾಗಿದ್ದ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಗೋಷ್ಠಿಯೊಂದಕ್ಕೆ ಆಗ್ರಹಿಸಿದಾಗ ಅವರಿಗೆ ಪ್ರಿಯವಾದ ಪ್ರಾಸೋಲ್ಲಾಸದಲ್ಲಿ ಆಡಿದ 'ಸಾಹಿತ್ಯದಲ್ಲಿ ದಲಿತ, ಬಲಿತ, ಕಲಿತ ಎಂಬುದಿಲ್ಲ' ಎಂಬ ಮಾತು ಇಂದಿಗೂ ದಾಖಲರ್ಹವಾದ ಸಾಹಿತ್ಯ ಚಿಂತನೆಯ ಅಪೂರ್ವ ತುಣುಕೇ ಆಗಿದೆ. ಮೇಲ್ನೋಟಕ್ಕೆ ಒಳಗೆ ಹಾವಿಲ್ಲದಂತೆ ಮೌನವಾಗಿರುವ ಹಂಪನಾರಂತಹ ಸಾಹಿತ್ಯದ ಹುತ್ತಗಳಿಗೆ ಉಡಾಫೆಯಿಂದ ಕೈಹಾಕಿದರೆ ಹಾವಿನಿಂದ ಕೈ ಕಚ್ಚಿಸಿಕೊಳ್ಳುವುದು ಖಂಡಿತ!


ಆದರೆ ಹಂಪನಾ ಅವರ ಜೊತೆ ಈ ವರ್ಷ ಪುರಸ್ಕೃತರಾದವರ ಹೆಸರುಗಳನ್ನು ಗಮನಿಸಿದರೆ ಒಂದು ನಿರ್ದಿಷ್ಟ ರಾಜಕೀಯ ಪಂಥದ ವಾಸನೆ ಹೊಡೆಯುತ್ತದೆಂಬುದು ನಿಜವಾದರೂ ಹಂಪಾನಾರ ಕೊಡುಗೆ ಈ ವಾಸನೆಯನ್ನು ಮೀರಿದ್ದು..

## ಸಾಹಿತ್ಯ-ಸಂಸ್ಕೃತಿಗಳ ರಾಜಕೀಯೀಕರಣದ ಬಲಿಪಶುಗಳು!

ಸರ್ಕಾರ ಬದಲಾದ ಕೂಡಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯ ಅಕಾಡೆಮಿಗಳ ಮತ್ತು ಪ್ರಾಧಿಕಾರಗಳು ಅಧಿಕಾರ ಕಳೆದುಕೊಳ್ಳುವುದು ಕಳೆದ ಎರಡು ದಶಕಗಳಿಂದ ರೂಢಿಯಾಗಿ ಹೋಗಿದೆ. ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬರಲಾರಂಭಿಸಿದ ನಂತರದ ಬೆಳವಣಿಗೆ ಇದು. ಕಾರಣ, ಈ ಸಂಸ್ಥೆಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗಳು ಪೂರ್ಣವಾಗಿ ರಾಜಕೀಯ ನೇಮಕಾತಿಗಳೇ ಆಗತೊಡಗಿದ್ದು. ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬರಲಾರಂಭಿಸಿದಮೇಲಂತೂ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ವಲಯದಲ್ಲಿ ಎಡ ಮತ್ತು ಬಲ ಎಂಬ ಒಡಕು ನಿರ್ಣಾಯಕವಾಗುತ್ತಾ ಹೋಗಿ ಸಾಹಿತ್ಯ-ಸಂಸ್ಕೃತಿಗಳು ಹೆಚ್ಚೂ ಕಡಿಮೆ ಎರಡೂ ಕಡೆಗಳ ಪುಢಾರಿಗಳ ಪಾಲಾಗಿ ರಾಜಕೀಯ ಪ್ರಚಾರದ ಸರಕುಗಳಾಗಿಹೋದವು. ನೇಮಕಾತಿಯಲ್ಲಿ ಸಾಹಿತ್ಯ ಸಂಸ್ಕೃತಿಗಳ ಪರಿಗಣನೆ ಹಿನ್ನೆಲೆಗೆ ಸರಿದು ಅಧಿಕಾರಸ್ಥರ ರಾಜಕೀಯ ಧೋರಣೆ ಮತ್ತು ಜಾತಿ ಸಮೀಪ್ಯ ಇತ್ಯಾದಿಗಳೆ ಪ್ರಧಾನವಾಗತೊಡಗಿದವು. ಹಾಗಾಗಿಯೇ ಈ ಸಂಸ್ಥೆಗಳ ಬಹಳಷ್ಟು ಜನ ಪದಾಧಿಕಾರಿಗಳು ಸರ್ಕಾರ ಬದಲಾದೊಡನೆ ತಾವೇ ರಾಜೀನಾಮೆ ನೀಡಿ ಮರ್ಯಾದೆ ಉಳಿಸಿಕೊಳ್ಳುವಷ್ಟು ಮಾನವಂತಿಕೆಯನ್ನು ಪ್ರದರ್ಶಿಸಿದ್ದಾರೆ. ಇದರಿಂದಾಗಿ ಪಾಪ, ಯಾವ ರಾಜಕೀಯ ಪರಿಗಣನೆಯೂ ಇಲ್ಲದೆ ನೇಮಕವಾದ ಕೆಲವರು ರಾಜೀನಾಮೆ ನೀಡಲು ನಿರಾಕರಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಇವರು ಈ ರಾಜಕೀಯೀಕರಣದ ಬಲಿಪಶುಗಳು

ಅದೇನೇ ಇದ್ದರೂ, ನಮ್ಮ ಸಾಹಿತ್ಯ-ಸಂಸ್ಕೃತಿಗಳು ಈ ಪಾಟಿಯ ರಾಜಕೀಯೀಕರಣಕ್ಕೆ ಒಳಪಡಬಾರದಿತ್ತು. ಇದಕ್ಕೆ ರಾಜಕಾರಣಿಗಳೆಷ್ಟು ಕಾರಣರೋ ಅಷ್ಟೇ ನಮ್ಮ ಲೇಖಕ-ಬುದ್ಧಿಜೀಗಳ ಅಧಿಕಾರದ ಹಪಾಹಪಿಯೂ ಕಾರಣ. ಇದರಿಂದ ಈ ವಲಯಗಳಿಗೆ ಆಗಿರುವ ಆಘಾತ ಮಾತ್ರ ಸದ್ಯಕ್ಕಂತೂ ಸರಿಪಡಿಸಲಾಗದಂಥದ್ದು. ನ್ಯಾಯಾಲಯದ ಮೆಟ್ಟಿಲೇರಿದುವರಿಗೆ ನಮ್ಮ ಸಹಾನುಭೂತಿ ಮತ್ತು ಶುಭಾಶಯಗಳು!

## ಸಮಾಜವಾದಿ ಹೋರಾಟದ ಗ್ರಂಥ ರಿಯಾಯ್ತಿ ದರದಲ್ಲಿ...



ಕರ್ನಾಟಕದ ಸಮಾಜವಾದಿ ಭೂ ಸತ್ಯಾಗ್ರಹಗಳ ಪೈಕಿ ಕಾಗೋಡು ಸತ್ಯಾಗ್ರಹಕ್ಕಿಂತಲೂ ವ್ಯಾಪಕವಾಗಿ ಮತ್ತು ತೀವ್ರವಾಗಿ ಕವಿ ದಿನಕರ ದೇಸಾಯಿಯವರ ಮಾರ್ಗದರ್ಶನದಲ್ಲಿ ನಡೆದ ಉತ್ತರ ಕನ್ನಡಜಿಲ್ಲೆಯಲ್ಲಿನ ರೈತ ಸತ್ಯಾಗ್ರಹ ಬಗ್ಗೆ ವಿಷ್ಣು ನಾಯಕರಿಂದ ೨೦೦೪ರಲ್ಲೇ 'ದುಡಿಯುವ ಕೈಗಳ ಹೋರಾಟದ ಕತೆ' ಎಂಬ ಸವಿವರವಾದ ಗ್ರಂಥ ರಚನೆಯಾಗಿ ಅದು ಎಲ್ಲರ ಗಮನ ಸೆಳೆದಿತ್ತು. ಉತ್ತರ ಕನ್ನಡ ಆಗಿನ್ನೂ ಕರ್ನಾಟಕದ ಭಾಗವಾಗಿರದೆ ಹೊರಗಿದ್ದುದರಿಂದ ಈ ಆಂದೋಲನದ ಬಗ್ಗೆ ಹೆಚ್ಚು ಅರಿವಿಲ್ಲದಿದ್ದ ಹಿನ್ನೆಲೆಯಲ್ಲಿ ಈ ಪುಸ್ತಕ ಕರ್ನಾಟಕದ ಸಮಾಜವಾದಿ ಹೋರಾಟದ ಚರಿತ್ರೆಗೆ ಒಂದು ಅಮೂಲ್ಯ ಕೊಡುಗೆಯೇ ಎನಿಸಿತ್ತು ಮತ್ತು ಹಲವು ಅಧ್ಯಯನ ಮತ್ತು ಸಂಶೋಧನೆಗಳಿಗೆ ಆಕರ ಗ್ರಂಥವೂ ಆಯಿತು. ಈ ಕಾರಣದಿಂದಾಗಿಯೇ ಈ ಗ್ರಂಥಕ್ಕೆ ಈಗ ಮೂರನೇ ಆವೃತ್ತಿಯ ಭಾಗ್ಯ ದೊರಕಿದ್ದು ಇದರ ಪ್ರಕಾಶಕರಾದ ಅಂಕೋಲಾದ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ ಮೂರು ನೂರು ಐವತ್ತು ರೂಪಾಯಿಗಳ ಮುಖಬೆಲೆಯ ಈ ಗ್ರಂಥವನ್ನು ಈ ಸೆಪ್ಟಂಬರ್ ಅಂತ್ಯದವರೆಗೆ ಮೂರು ನೂರು ರೂಪಾಯಿಗಳಿಗೆ ಒದಗಿಸಲು ತೀರ್ಮಾನಿಸಿದೆ. ಆಸಕ್ತರು ಈ ಕೆಳಗಿನ ವಿವರಗಳ ಬ್ಯಾಂಕ್ ಖಾತೆಗೆ ಮೂರು ನೂರು ರೂಪಾಯಿಗಳನ್ನು ಕಳಿಸಿ ಪುಸ್ತಕವನ್ನು ಪಡೆಯಬಹುದೆಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸುತ್ತದೆ:

ಅಂಕೋಲಾದ ಸಿಂಡಿಕೇಟ್ ಬ್ಯಾಂಕ್‌ನ ಉಳಿತಾಯ ಖಾತೆ ಸಂ: 03042200090300 ಐಎಫ್‌ಎಸ್‌ಸಿ ಕೋಡ್: SYNB0000304


ಹಣ ಪಾವತಿಯ ಬಗ್ಗೆ ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ (ರಿ), 'ಪರಿಮಳ', ಅಂಬಾರಕೊಡ್ಲ, ಅಂಕೋಲಾ-೫೮೧೩೧೪ (ಉ.ಕ.) ಈ ವಿಳಾಸಕ್ಕೆ ಒಂದು ಅಂಚೆ ಕಾಡು ಹಾಕಬೇಕು. ಸಂಪರ್ಕ ದೂರವಾಣಿ ಸಂಖ್ಯೆ: 9686867601

-ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು:: **ಅತೀತ ಲೋಕದ ಮಹಾಯಾತ್ರಿಕ** ಲೇ : ಡಾ. **ಲೋಕೇಶ ಅಗಸನಕಟ್ಟೆ**ಪ್ರ: ಶ್ರೀ ವೀರ ಪ್ರತಾಪ ಮೀಡಿಯಾ ಟ್ರಸ್ಟ್ (ರಿ), ಬೆಲಗೂರು, ಪು:೩೮೪ ಬೆ ರೂ.೨೦೦/-

### ವ್ಯಕ್ತಿ ಪೂಜೆಯತ್ತ ತುಡಿಯುವ 'ಕಾದಂಬರಿ'



**ದೇ**ವರು, ಭೌತಿಕ ಜಗತ್ತು ಮತ್ತು ಜೀವಿಗಳ ಸಂಬಂಧದ ಕುರಿತಾದ ಪ್ರಶ್ನೆ ಅನಾದಿಕಾಲದಿಂದಲೂ ಮನುಷ್ಯನನ್ನು ಕಾಡಿದೆ. 'ಸೃಷ್ಟಿಗೆ ಕಾರಣವಾದ ಕರ್ತೃ ಇರುವನೊ ಇಲ್ಲವೊ' ಎಂಬ ಶಂಕೆ ಋಗ್ವೇದದಲ್ಲಿಯೇ ವ್ಯಕ್ತವಾಗಿದೆ. 'ವಿಶ್ವದ ಉಗಮಕ್ಕೆ ಕಾರಣವಾದ ಶಕ್ತಿಯೊಂದು ಇದೆಯೆಂದು ನನಗನಿಸುವುದಿಲ್ಲ' ಎಂದು ವಿಜ್ಞಾನಿ ಐನ್‌ಸ್ಟೈನ್ ಅಭಿಪ್ರಾಯಪಡುತ್ತಾರೆ. ಆದರೆ ಸೃಷ್ಟಿಯ ರಹಸ್ಯವು ವಿಜ್ಞಾನಕ್ಕೆ ಮೀರಿದ ಸತ್ಯವೆಂಬುದು ಒಂದು ವರ್ಗದ ಬಲವಾದ ನಂಬಿಕೆ. ಸಕಲ ಜೀವರಾಶಿಗಳೂ ಸೃಷ್ಟಿಯ ಒಂದಂಶವೇ ಆಗಿದ್ದು ನಿರಂತರ ಯೋಗ, ಧ್ಯಾನದ ಮೂಲಕ ಆ ಸೃಷ್ಟಿ ಮೂಲಶಕ್ತಿಯನ್ನು ಸಂಪರ್ಕಿಸಲು ಸಾಧ್ಯವೆಂದು ಅನೇಕರು ಅನುಭವದಿಂದ ಕಂಡು ಕೊಂಡಿದ್ದಾರೆ.ಲೋಕೇಶ ಅಗಸನಕಟ್ಟೆಯವರ 'ಅತೀತಲೋಕದ ಮಹಾಯಾತ್ರಿಕ' ಇಂತಹ ವಸ್ತುವನ್ನು ಹೊಂದಿದ ಮಹತ್ವಾಕಾಂಕ್ಷೆಯ ಕಾದಂಬರಿ.

ದೈವೀಶಕ್ತಿ ಅವಾಹನೆಯಾಗುವ ಬಿಂದುಮಾಧವ ಈ ಕಾದಂಬರಿಯ ನಾಯಕ. ಈಗಲೂ ಬದುಕಿರುವ ಇವರ ಕುರಿತು 'ನಾನು ದೇವರೂ ಅಲ್ಲ, ದೇವಮಾನವನೂ ಅಲ್ಲ' ಎಂಬ ಜೀವನ ಚರಿತ್ರೆಯನ್ನು ಇದೇ ಲೇಖಕರು ಬರೆದಿರುವರು. ಈ ದೃಷ್ಟಿಯಿಂದ ಇದು ವಾಸ್ತವವಾದಿ ಕಾದಂಬರಿ. 'ಆಧುನಿಕನಾಗುವುದೆಂದರೆ ಸ್ವಾರ್ಥಿಯೂ, ಲೋಭಿಯೂ, ಮೋಹಿಯೂ ಆದಂತೆ, ಪ್ರಾಚೀನನಾದರೆ ಇವೆಲ್ಲವನ್ನು ಮೀರಿದ ಮನುಷ್ಯತ್ವಕ್ಕಾಗಿ ಬಾಳಬಹುದು.' ಇದು ದೇವಸ್ಥಾನದ ಕೈಂಕರ್ಯಗಳಿಗೆ ಬದ್ಧನಾಗುವ ಬಿಂದುವಿನ ತಾತ್ವಿಕ ನಿಲುವು. ಬ್ರಹ್ಮಚಾರಿಯಾಗಿ ಉಳಿದರೂ ಬಂಧು ಮನೆ ಮಠ ತೊರೆದು ಹಿಮಾಲಯಕ್ಕೆ ಹೋಗುವುದಿಲ್ಲ. ಆದರೆ ಸಾಮಾಜಿಕರಿಗೆ ಧಾರ್ಮಿಕ ಅನುಭೂತಿಯನ್ನು ನೀಡುವ ಸದುದ್ದೇಶದಿಂದಲೇ ಅಸ್ತಿತ್ವದಲ್ಲಿರುವ ಸಾವಿರಾರು ಮಠ ಮಂದಿರಗಳು ಶೋಷಣೆಯನ್ನೂ ಮಾಡಿವೆ. ಆ ಮೂಲಕ ಭ್ರಷ್ಟತೆ ಅನೈತಿಕತೆಗೆ ಅಭಯ ಹಸ್ತ ನೀಡಿದೆ.

'ದೇವರನ್ನು ಒಲಿಸಿಕೊಳ್ಳಲು ಅದರದ್ದೇ ಆದ ಶಾಸ್ತ್ರೋಕ್ತ ಮಾರ್ಗವಿದೆಯಲ್ಲಾ, ಅದರ ಬಗ್ಗೆ ಬಿಂದುವಿಗೆ ಅಪಾರ ಶ್ರದ್ಧೆ. ಅದು ಹೇಗೆ ಆಗಬೇಕೊ ಹಾಗೆಯೇ ಆಗಬೇಕು. ಋಕ್ಕುಗಳಲ್ಲಿ ಅಡಗಿರುವ ದೇವರುಗಳನ್ನು ಋಕ್ಕುಗಳಿಂದಲೇ ಒಲಿಸಿಕೊಳ್ಳಬೇಕು. ಈ ಬಗ್ಗೆ ಅವನದ್ದು ಶ್ರದ್ಧಾವಂತ ನಡೆ' - ಈ ಮಾತುಗಳು ಅಂಥ ಶ್ರದ್ಧೆಯ ಆಚರಣೆಗಳಿಗೆ ಸಮರ್ಥನೆಯಂತಿವೆ.


'ದೇವರು ಸಾಮ್ರಾಜ್ಯದ ಸಮಾಜವಾದಿ ಸಂತನ ರೂಪಾತ್ಮಕ ಕಾದಂಬರಿ' ಎಂದು ಕೃತಿಯ ಬಗ್ಗೆ ಹೇಳಿಕೊಳ್ಳಲಾಗಿದೆ. ಶ್ರೀಮಂತ ಭಕ್ತರ ದೇಣಿಗೆಯಿಂದ ಒಂದಾದ ಮೆಲೊಂದು ಕಟ್ಟಡಗಳನ್ನು ಕಟ್ಟುತ್ತಾ ಹೋಮ, ಹವನ, ಸಮಾರಾಧನೆಯ ಮೂಲಕ ಭಕ್ತರಿಗೆ ಅನ್ನಸಂತರ್ಪಣೆ ಮಾಡುವುದು ಸಮಾಜವಾದವಾಗಲು ಸಾಧ್ಯವೇ? ಹರಿಜನ ಯುವಕರನ್ನು ಹತ್ತಿರ ಕೂರಿಸಿಕೊಳ್ಳುವುದು ಸ್ವತಃ ಸಸ್ಯಾಹಾರಿಯಾದರೂ ಮಾಂಸಹಾರಿಗಳಿಗೆ ಬಾಡೂಟದ ವ್ಯವಸ್ಥೆ ಮಾಡುವುದು, ದೇವಸ್ಥಾನದ ದತ್ತಿ ಜಮೀನನ್ನು ಸ್ವತಃ ಉಳುಮೆ ಮಾಡುವುದು ಇವೆಲ್ಲ ಜಡ್ಡುಗಟ್ಟಿದ ಸಮಾಜದಲ್ಲಿ ಕ್ರಾಂತಿಕಾರಕವಾಗಿ ಕಾಣುತ್ತವೆ ನಿಜ. ಆದರೆ ಕಾದಂಬರಿಯಲ್ಲಿ ಇವು ಕ್ವಚಿತ್ತಾದ ಪ್ರಸಂಗಳೇ ಹೊರತು ಸಹಜ ಜೀವನ ಶೈಲಿಯಾಗಿಲ್ಲ.

ಕಾದಂಬರಿ ಸುಂದರವಾದ ಬರವಣಿಗೆ ಶೈಲಿಯಲ್ಲಿದ್ದರೂ ಉದ್ದಕ್ಕೂ ಅತಿಮಾನವ ಶಕ್ತಿಯನ್ನು ವೈಭವೀಕರಿಸುತ್ತ ವ್ಯಕ್ತಿಪೂಜೆಗಿಳಿಯುವುದು ಕಾದಂಬರಿಯಲ್ಲಿ ಎದ್ದು ಕಾಣುವ ದೌರ್ಬಲ್ಯ. ಗಂಭೀರವಾದ ಮುನ್ನುಡಿಯನ್ನು ಬರೆದಿರುವ ಬಿದರಹಳ್ಳಿ ನರಸಿಂಹಮೂರ್ತಿಯವರು ಇದನ್ನು 'ಗತಿಸ್ಥಿತಿ', 'ಸಂಸ್ಕಾರ' ಕಾದಂಬರಿಗಳು ಎತ್ತುವ ಪ್ರಶ್ನೆಗಳಿಗೆ ಉತ್ತರ ಎಂದಿರುವುದು ಆಶಯವನ್ನು ಮಾತ್ರ ಮುನ್ನೆಲೆಗೆ ತಂದು ಕೃತಿಗಳ ಶಿಲ್ಪ ಮತ್ತು ಸಾಹಿತ್ಯಿಕ ಮೌಲ್ಯವನ್ನು ಬದಿಗೆ ಸರಿಸಿದಂತಿದೆ.

**-ಎನ್.ಎಂ. ಕುಲಕರ್ಣಿ**

ಪು: **'ಬೇರು'**( ಕಾದಂಬರಿ) ಲೇ: **ಶ್ರೀಧರ ಬನವಾಸಿ** ಪ್ರ: **ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್**, ಬೆಂಗಳೂರು., ಪು: ೩೭೬ ಬೆಲೆ: ರೂ. ೩೩೦/-

### ಸಾತತ್ಯ ತಪ್ಪಿದ ಕಥನ



**ಕೇಂ**ದ್ರ ಸಾಹಿತ್ಯ ಅಕಾಡೆಮಿಯ ೨೦೧೮ರ ಯುವ ಪುರಸ್ಕಾರ್ತ ಪಡೆದಿರುವ ಫಕೀರ ಎಂಬ ಅಂಕಿತನಾಮದೊಂದಿಗೆ ಸಾಹಿತ್ಯ ರಚಿಸುವ ಶ್ರೀಧರ ಬನವಾಸಿಯವರ ಈ ಕಾದಂಬರಿ ಮೊದಲಿಗೆ ನಮ್ಮ ಗಮನ ಸೆಳೆಯುವುದು, ಅದರ ಭಾಷೆ ಮತ್ತು ವಸ್ತುವಿನಿಂದಾಗಿ. ಆದರೆ ಇವನ್ನು ಸರಿಯಾಗಿ ಬಳಸಿಕೊಳ್ಳದೇ ಸೋತಿರುವುದೂ ನಿಜ.. 'ಬೇರು' ಕಥನ ಸಮಕಾಲೀನ ಅಂಶಗಳತ್ತ ಮುಖ ಮಾಡಿದರೂ ಅವುಗಳನ್ನು ಕಾದಂಬರಿಯ ಚೌಕಟ್ಟಿನಲ್ಲಿ ಹೊಸದಾಗಿ ನಿರೂಪಿಸುವ ಹಾದಿಯಲ್ಲಿ ಹೆಜ್ಜೆ ಹೆಜ್ಜೆಗೂ ದಿಕ್ಕು ತಪ್ಪುತ್ತದೆ.

ಇಲ್ಲಿನ ವಸ್ತು 'ಕರುಣಾಶ್ರಯ' ಆಸ್ಪತ್ರೆಯ ಸುತ್ತ ಹಲವು ಬದುಕುಗಳು ತೆರೆದುಕೊಳ್ಳುವುದರಲ್ಲಿದೆ.. ಇಲ್ಲಿ ರೋಗವೇ ಬದುಕು. ಈ ರೋಗವೆಂಬ ಬದುಕಿನಲ್ಲಿ ಹಲವರ ತೀರ್ಮಾನಗಳು ಗಟ್ಟಿಗೊಳ್ಳುತ್ತವೆ ಮತ್ತೂ ಕೆಲವರ ಜೀವನಕ್ರಮಗಳು ಮಾಗುವುದಿಲ್ಲ. ಕರುಣಾಶ್ರಯವನ್ನು ಕೇವಲ ಆಸ್ಪತ್ರೆಯಾಗಿರದೆ, ಅಲ್ಲಿ ಸಮಕಾಲೀನ ಭ್ರಷ್ಟ ಸಮಾಜ, ವಿಕೃತ ಮನಸ್ಸುಗಳು ಮತ್ತು ಇದರ ಜೊತೆಯಲ್ಲಿಯೇ ಮಾನವೀಯ ಗುಣಗಳು ಮಡುಗಟ್ಟಿವೆ. 'ಕರುಣಾಶ್ರಯ' ಶಿವಶಂಕರ ದಂಪತಿಗಳು ಬಡವರಿಗಾಗಿ ನಿರ್ಮಿಸಿರುವ ಆಸ್ಪತ್ರೆ, ಆದರೆ, ಅವರ ಸಾವಿನ ನಂತರ 'ಕರುಣಾಶ್ರಯ' ಕ್ರೌರ್ಯದತ್ತ ತಿರುಗಿದರೂ ಕೆಲವು ಪಾತ್ರಗಳು ಅದನ್ನು ಮೇಲೆತ್ತುವಂತೆ ಮಾಡುತ್ತವೆ. ಇಲ್ಲಿ ಬದುಕು ಕಾಣುವ ಪಾತ್ರಗಳು ಅನೇಕವಿದ್ದರೂ ಗಮನಕ್ಕೆ ಬರುವುದು ಕುಂತಮ್ಮ, ಈರಮ್ಮ, ಬಾಬುರಾವ್, ರಾಮಸ್ವಾಮಿ, ಚಂದ್ರಶೇಖರ ಮುಂತಾದವರು. ಎಂಡೋಸಲ್ಫಾನ್ ರೋಗಕ್ಕೆ ತುತ್ತಾಗಿ ಕಾಲು ಸ್ವಾಧೀನವಿಲ್ಲದಿರುವ ಕುಂತಮ್ಮನ ಮಗಳು ಸಂಧ್ಯಾ; ಸರ್ಕಾರದ ಪರಿಹಾರ ದೊರೆಯದೇ ವಿವಿಧ ಕಾರಣಕ್ಕೆ ರೋಗಕ್ಕೆ ಒಳಗಾದ ಈರಮ್ಮನ ಗಂಡ ಭರಮಪ್ಪ; ಚಿಕ್ಕ ವಯಸ್ಸಿಗೆ ಕ್ಯಾನ್ಸರ್ ಖಾಯಿಲೆಗೆ ತುತ್ತಾಗಿರುವ ಬಾಬುರಾವ್‌ನ ಮಗ, ಇವರೆಲ್ಲರೂ ಸೇರುವುದು ಬೆಂಗಾಡಿಯ ''ಕರುಣಾಶ್ರಯ'ದಲ್ಲಿ.

ಇದೇ ಕೇಂದ್ರವಾಗಿ ಅವರ ಬದುಕುಗಳನ್ನು ಅನಾವರಣಗೊಳಿಸುತ್ತಾ ಕಥನ ಸಾಗುತ್ತದೆ. ಆದರೆ, ಲೇಖಕರು ತಮ್ಮ ಕಥನದಲ್ಲಿ ಪಾತ್ರಗಳ ಬದುಕಿನ ವಿವರಗಳನ್ನು ಹೇಗೆ ಬಳಸಿಕೊಳ್ಳಬೇಕು? ಅದಕ್ಕೆ ತನ್ನದೇ ಬಗೆಯ ತಾತ್ವಿಕ ಆಯಾಮಗಳನ್ನು ಜೋಡಿಸುವ ರೀತಿ ಯಾವುದು? ಕೊಂಡಿಗಳನ್ನು ಪರಸ್ಪರ ಬೆಸೆಯುವುದು ಹೇಗೆ? ಮುಂತಾದ ಕಾದಂಬರಿಯ ಶಿಲ್ಪದ ವಿಚಾರಗಳಲ್ಲಿ ಇದು ಹೊಸದೇನನ್ನೂ ಹೇಳುವುದಿಲ್ಲ. ಹಾಗೆ ನೋಡಿದರೇ ಮೇಲುನೋಟಕ್ಕೆ ಕಾಣಿಸುವ ವಿಜ್ಞಾನ ಮತ್ತು ಆಧ್ಯಾತ್ಮಿಕ ವಿಚಾರಗಳ ದಂದ್ವಗಳನ್ನು ಬಾಬುರಾವ್‌ರಂಥ ಪಾತ್ರಗಳ ಮೂಲಕ ನಿರೂಪಿಸುವ ಅವಕಾಶ ಹಾಗು ವೈದ್ಯಕೀಯ ಲೋಕದ ಮಾಫಿಯಾವನ್ನು ರಾಮಸ್ವಾಮಿ ಮೂಲಕ, ಗ್ರಾಮದ ರಾಜಕಾರಣದ ವಿಕೃತತೆಯನ್ನು, ಈರಮ್ಮ ಮತ್ತು ಭರಮಪ್ಪನ ಬದುಕುಗಳ ಮೂಲಕ ಕಟ್ಟುವ ಎಲ್ಲ ತಾತ್ವಿಕ ಅವಕಾಶಗಳನ್ನು ಈ ಕಥನ 'ಕೈಯಾರೆ' ಕಳೆದುಕೊಂಡಿದೆ. ಇದಕ್ಕೆ ಬಹುದೊಡ್ಡ ಕಾರಣ ಲೇಖಕರಿಗೆ ತಾನು ಬರೆಯುತ್ತಿರುವುದು ಕಾದಂಬರಿಯೋ? ಅಥವಾ ಸಿನೆಮಾ ದೃಶ್ಯಗಳೋ? ಎಂಬ ಅರಿವು ಇರದಿರುವುದು. ಹಾಗಾಗಿಯೇ ಕಾದಂಬರಿಗೆ ಇರಬೇಕಾದ ನಿರೂಪಣಾ ಸಾತತ್ಯ ಇಲ್ಲಿ ಗೈರುಹಾಜರಿಯಾಗಿದೆ. ಪದೇ ಪದೇ ಕಿರಿ ಕಿರಿ ಎನಿಸುವ ಮಾತುಗಳ ಪುನರಾವರ್ತನೆಗಳು ಕಥನದ ಗಂಭೀರತೆಯನ್ನು ಮರೆಮಾಚಿಸಿವೆ. ವರದಿಯ ಅಂಶಗಳನ್ನು ಕಥನಕ್ಕೆ ಒಗ್ಗಿಸಿಕೊಂಡು ಜೀವನದರ್ಶನವನ್ನು ಕಟ್ಟುವ ಕುಶಲತೆಯನ್ನು ಶ್ರೀಧರ ಇನ್ನೂ ಕಲಿಯಬೇಕಾಗಿದೆ. ಬದುಕಿನ ವಿವವಗಳನ್ನು ವಿಶಿಷ್ಟ ನಿರೂಪಣಾ ಮಾದರಿಗಳ ಮುಖೇನ ಜೀವನ ಕಾಣ್ಕೆಯನ್ನು ನಿರ್ಮಿಸುವ ಕಾರಂತರಂಥ ಲೇಖಕರಿಂದ ನಮ್ಮಂತಹ ಹೊಸಬರು ಕಲಿಯಬೇಕಿದೆ. ಹೊಸದನ್ನು ಕಟ್ಟಬೇಕಾದರೂ ಹಳೆಯದನ್ನು ಓದಬೇಕಲ್ಲವೇ?. ಕಾದಂಬರಿ ಕ್ಷೇತ್ರದಲ್ಲಿ ಗಮನಿಸಬೇಕಾದ ವಸ್ತುಗಳು ಬರುತ್ತಿವೆ. ಉದಾ: 'ಹಿಜಾಬ್', 'ಟೈರ್‌ಸ್ವಾಮಿ', 'ರೊಟ್ಟಿ ಮುಟಗಿ', 'ಹುಲಿಕಾನು', 'ಅಸ್ಪೃಶ್ಯ ಗುಲಾಬಿ', 'ಉರಿವ ಜಲ', 'ಕೃಷ್ಣಮುದ್ರಿಕೆ', 'ನ್ಯಾಸ' ಮುಂತಾದವು. ವಸ್ತುವನ್ನು ಕಾದಂಬರಿ ಮಾಡುವ ಕುಶಲತೆ ಇನ್ನು ಸಾಕಷ್ಟು ಸಿದ್ಧಿಸಬೇಕಿದೆ.

**-ಸುರೇಶ್ ನಾಗಲಮಡಿಕೆ**

ಪು: **ಕಸೂತಿಯಾದ ನೆನಪು**(ಪ್ರಬಂಧಗಳು) ಲೇ: **ಎಂ. ಆರ್. ಕಮಲ** ಪ್ರ: **ಕಥನ ಪ್ರಕಾಶನ**, ಬೆಂಗಳೂರು ಪು: **೧೮೦** ಬೆಲೆ: ರೂ. **೧೭೫/-**

## ಆತ್ಮೀಯ ನೆನಪುಗಳ ಕಸೂತಿ




**ಕ**ಸೂತಿಗೂ ಹೆಣ್ಣಿಗೂ ಅವಿನಾಭಾವ ಸಂಬಂಧ. ಸ.ಉಷಾ ರವರ **'ಕಸೂತಿ'** ಎಂಬ ಕೃತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕಸೂತಿಯ ಹೆಣಿಗೆಗಿರಬೇಕಾದ ತಾದಾತ್ಮ್ಯ, ಸೂಕ್ಷ್ಮ ಕಲೆಗಾರಿಕೆ ಮತ್ತು ಅದರಿಂದ ಸಿಗುವ ಖುಷಿ, ಸೃಜನಶೀಲ ಬರಹಕ್ಕೆ ಹೋಲಿಸಬಹುದೇನೋ. ಕಮಲಾರವರೂ **'ಬಾಲ್ಯದ ಸವಿ ಅಜಂತದ'** ಗವಿ ಎಂಬ ಮಾತಿನಂತೆ ತಮ್ಮ ಬಾಲ್ಯದಲ್ಲಿ ಕಳೆದ ಆವರಣಗಳನ್ನೂ ನೆನಪುಗಳನ್ನೂ ಈ ಕೃತಿಯಲ್ಲಿ ಎಳೆ ಎಳೆಯಾಗಿ ಪೋಣಿಸಿ ಹೆಣೆಯುತ್ತಾ ಸಾಗಿದ್ದಾರೆ. ಇವು ಪ್ರಬಂಧಗಳಾದರೂ ಆತ್ಮಚರಿತ್ರೆಯ ತುಣುಕುಗಳಂತೆ ಕಾಣುತ್ತವೆ.

ಸುಮಾರು ಐವತ್ತೆಂಟು ಪ್ರಬಂಧಗಳನ್ನು ಒಳಗೊಂಡ ಇವುಗಳಲ್ಲಿ ನೆನಪೇ ಪ್ರಧಾನ ಅಂಶ. ಆ ನೆನಪುಗಳಾದರೋ ಆತ್ಮೀಯ, ಸೂಕ್ಷ್ಮ ಒಳನೋಟಗಳನ್ನು ಒಳಗೊಂಡು, ವೈಯಕ್ತಿಕವಾದರೂ ಸಮಷ್ಟಿಯ ನೆನಪುಗಳಾಗಿಬಿಡುತ್ತವೆ. ಲೇಖಕಿ ಬಾಲ್ಯ ಕಳೆದ **'ಮೇಟಿಕುರ್ಕೆ'** ಎಂಬ ಹಳ್ಳಿಯ ಮಧ್ಯಮವರ್ಗದ ತುಂಬು ಕುಟುಂಬ, ಮನೆತುಂಬ ಜನ, ಕೆಲಸ–ಕಾರ್ಯಗಳು, ಹಬ್ಬ–ಹರಿದಿನ, ಜಾತ್ರೆ ಇವುಗಳೊಂದಿಗೆ ಲೇಖಕಿಯ ಅನನ್ಯ ಬೆಸುಗೆ ಮತ್ತು ಭಾವುಕ ಅನುಭವವಾದ ಅವರ ಮನೆ. ಗೋಡೆಗಳಿಲ್ಲದ ಬದುಕಿನಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಬದುಕುವ, ರಹಸ್ಯಗಳಿಲ್ಲದ, ಸುಳ್ಳು ಹೇಳಲಾಗದ, ಅಪ್ರಾಮಾಣಿಕತೆಯಿಲ್ಲದ ವ್ಯಕ್ತಿತ್ವವನ್ನು ರೂಪಿಸಬಲ್ಲ ಶಕ್ತಿ ಅಂತಹ ಮನೆಗಳಿಗಿರುತ್ತದೆ. ಮತ್ತೆ ಅಲ್ಲಿ ಬಾಳಿಬದುಕಿದವರಲ್ಲಿ ಇವು ಅರಿವಿಲ್ಲದೆ ಮೌಲ್ಯಗಳಾಗಿ ಅಡಕವಾಗಿಬಿಡುತ್ತವೆ. **'ಚಿಕ್ಕಮನೆಯಲ್ಲಿ ಚಕ್ಕೆ ತುಂಬಿದೆ'** ಎಂಬ ಪ್ರಬಂಧವಂತೂ ಒಂದು ಮನೆಯ ಚಿಕ್ಕ ಕೋಣೆ ಹೇಗೆ ಎಲ್ಲರ ಆತ್ಮೀಯ ಜಾಗವಾಗುತ್ತದೆಂಬುದನ್ನು, ರಾತ್ರಿಯಲ್ಲಿ ಬಿಚ್ಚಿಕೊಂಡ ಹಾಸಿಗೆಗಳು ಬೆಳಗಿನಲ್ಲಿ ಸುತ್ತಿಕೊಳ್ಳುವ ಮನಸ್ಸಿನಂತೆ ಚಿಕ್ಕ ಮನೆ ಎಂದು ಹೇಳುತ್ತಾ ಒಂದು ರೂಪಾತ್ಮಕತೆಯನ್ನೂ ಪಡೆದುಕೊಂಡು ಒಂದು ಅತ್ಯುತ್ತಮ ಪ್ರಬಂಧವಾಗಿಬಿಡುತ್ತದೆ. ಈ ನೆನಪುಗಳ ಕಸೂತಿಯಲ್ಲಿ ಢಾಳಾಗಿ ಕಾಣಿಸುವ ಒಂದು ಎಳೆ **'ಅಮ್ಮ'**. ಅವಳ ತಾಳ್ಮೆ, ಮೌನ ಮನೆಯನ್ನು ಮಕ್ಕಳನ್ನು ಕಾಪಿಡುವ, ಸಲಹುವ ಪರಿ, ಅವರ **'ಅಮ್ಮ ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ'** ಎಂಬ ಕವಿತೆಯಲ್ಲಿ ಮುಂದುವರಿದಿದೆ ಎನ್ನಬಹುದು.

**'ಹಬ್ಬಗಳೆಂಬ ನರಕ'**ಎಂಬ ಪ್ರಬಂಧವು ಹಬ್ಬದ ಖುಷಿಯ ಜೊತೆಗೆ, ಈಗ ಕೇವಲ ಆಚರಣೆಗಾಗಿ ಆಚರಣೆಯಾಗಿ ಉಳಿದಿರುವ ಪದ್ಧತಿಗಳ ಬಗ್ಗೆ ಚಿಕಿತ್ಸಕ ನೋಟವನ್ನೂ ಬೀರಿದೆ.. ಹಬ್ಬಗಳೆಂದರೆ ಹೆಂಗಸರು ಮಾತ್ರ ಅಡಿಗೆ ಮನೆಯಲ್ಲಿ ಬೇಯುವ ನರಕವೇನೋ ಎಂದು ಯೋಚಿಸುತ್ತಾರೆ. ಮನುಷ್ಯ ಸ್ವಭಾವದಲ್ಲಿ ಅಡಗಿದ ತಣ್ಣಗಿನ ಕ್ರೌರ್ಯಗಳಾದ ಹೀಗಳೆಯುವುದು, ಅವಮಾನಿಸುವುದು, ನಿಂದಿಸುವುದು, ವ್ಯಕ್ತಿತ್ವದ ಮೇಲೆ ಅದರಲ್ಲೂ ಅರಳುವ ಮನಸ್ಸುಗಳನ್ನು ಮುದುಡಿಸಿಬಿಡುತ್ತವೆ ಎಂದು, ಹದಿಹರೆಯದ ಮನಸ್ಸುಗಳ ಶಿಕ್ಷಕರಿಗಿರಬೇಕಾದ ಸೂಕ್ಷ್ಮತೆಯನ್ನು **'ನಿಂತ ನೀರ ಕಲಕಬೇಡಿ'** ಎಂಬ ಪ್ರಬಂಧದಲ್ಲಿ ತೋರುತ್ತಾರೆ.


ವಿದ್ಯಾರ್ಥಿಗಳೊಂದಿಗೆ ಅವರು ಬೆರೆತ ಅನುಭವ, ಆ ವಯಸ್ಸಿನವರೊಂದಿಗೆ ಬೆರೆಯಬೇಕಾದರೆ, ನಾವು ಅಳವಡಿಸಿಕೊಳ್ಳಬೇಕಾದ ವರ್ತನೆ ಭಾಷೆಗಳಿಂದ ಯುವ ಮನಸ್ಸುಗಳನ್ನು ಹೇಗೆ ಗೆಲ್ಲಬಹುದು ಎಂಬ ಅನುಭವವನ್ನು ಬರೆಯುತ್ತಾರೆ. ವೃಂದಗಾನದಲ್ಲಿ ನಮ್ಮ ದನಿ ಕೇಳುವುದೇ ಇಲ್ಲ ಎಂಬ ಪ್ರಬಂಧದಲ್ಲಿ ಇಡೀ ಬದುಕು ವೃಂದಗಾನವಲ್ಲ, ಆದ್ದರಿಂದ ವೈಯಕ್ತಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂಬ ಅರಿವು ಮೂಡಿಸುತ್ತಾರೆ.

ಒಟ್ಟಾರೆ ಆತ್ಮೀಯವೆನಿಸುವ ಬರಹಗಳ ಈ ಸಂಕಲನವು ಅನೇಕ ಬಣ್ಣಗಳ ನೂಲಿನ ನೆನಪುಗಳ ಕಸೂತಿಯಾಗಿದ್ದು ಇದು ಕಮಲಾ ಅವರು ಮುಂದೆ ಬರೆಯಬಹುದಾದ ಆತ್ಮಚರಿತ್ರೆಯ ಸಿದ್ಧತೆಯೂ ಆಗಿದೆ ಎನ್ನಿಸದಿರದು.

**–ಮಂಜುಳಾ ಎಂ. ರಾಜು**

ಪು: **ರಾಮಮಂದರ ಏಕೆ ಬೇಡ?** ಲೇ: **ಕೆ.ಎಸ್. ಭಗವಾನ್** ಪ್ರ: **ಅಭಿಶ್ರುತಿ ಪ್ರಕಾಶನ** , ಮೈಸೂರು ಪು: **೧೬೮** ಬೆಲೆ: **ರೂ. ೧೬೦/-**

## ಬಹು ರೂಪಿ ರಾಮನನ್ನು ಮರೆತ ರಾಮ ಜಿಜ್ಞಾಸೆ




**ಪ್ರ**ಕಟವಾದ ಒಂದು ವರ್ಷದೊಳಗೆ ಮೂರನೇ ಮುದ್ರಣ ಕಾಣುತ್ತಿರುವ ಈ ಕೃತಿಯು ಶಿವನೊಂದಿಗೆ ರಾಮನನ್ನು ಹೋಲಿಸುತ್ತಾ ವಾಲ್ಮೀಕಿ ರಚಿಸಿದ ಈ ರಾಮ ಶಿವನ ಎತ್ತರಕ್ಕೆ ಏರುವುದಿಲ್ಲ ಎನ್ನುತ್ತ ರಾಮನನ್ನು ಅತ್ಯಂತ ನಿಷ್ಠುರ ನುಡಿಗಳಿಂದಲೇ ವಿಮರ್ಶಿಸುತ್ತಾರೆ.

ರಾಮನ ಅಸ್ತಿತ್ವ ಚಿತ್ರಣಗಳಲ್ಲಿ ಚಾತುರ್ವರ್ಣ ವ್ಯವಸ್ಥೆ ಆಳವಾಗಿ ಬೇರು ಬಿಟ್ಟಿದೆ. ಪುರೋಹಿತಶಾಹಿ ಬಲಗೊಂಡು ಅನೇಕ ವಧೆ, ಸಂಹಾರ ನಡೆಸುವ ರಾಮನ ಚಿತ್ರವನ್ನು ಕುಬ್ಜಗೊಳಿಸಿವೆ. ಭಗವಾನರು ತಾಟಕಿ, ಮಾರೀಚ, ಸುಬಾಹು, ಖರ–ದೂಷಣ, ಶಂಬೂಕ, ವಾಲಿ, ಮಾಯಮೃಗ– ಹೀಗೆ ವಧೆಗಳ ಪಟ್ಟಿ ಬೆಳೆಸುತ್ತಾರೆ. ದೈವತ್ವದ ಮೂಲ ನೆಲೆಯ ಸಂಪರ್ಕವಿರದ ಬೇರೆಯೇ ಆದ ರಾಮ ಇಲ್ಲಿ ಕಾಣಿಸುತ್ತಾನೆ. ಲೇಖಕರು ರಾಮನ ಮಾನವೀಯ ಸಂಬಂಧದ ಘಟನೆಗಳು ಕಾವ್ಯದಲ್ಲಿ ಅಪಾರವಾಗಿದ್ದರೂ ಇಲ್ಲಿನ ಉದ್ದೇಶಕ್ಕಾಗಿ ಅವನ್ನು ಯಾಕೆ ಸೇರಿಸಿಲ್ಲವೊ ತಿಳಿಯದು.

ಇಲ್ಲಿ ರಾಮ ಮಂದಿರ ನಿರ್ಮಾಣದ ರಾಜಕಾರಣದ ತಂಟೆಗೆ ಹೋಗದೆಯೇ ರಾಮನನ್ನಷ್ಟೇ ಕೇಂದ್ರೀಕರಿಸಿದ್ದರೂ ಧ್ವಂಸಮಯೀ ರಾಮನನ್ನಷ್ಟೆ ಚಿತ್ರಿಸಿದ್ದಾರೆ. ರಾಮನನ್ನು ಮನುಷ್ಯನಾಗಿಯಷ್ಟೇ ನೋಡಿರುವುದರಿಂದಾಗಿ ಲೇಖಕರು ವಿವಾದಗಳನ್ನು ಸಭೆ ಸಮಾರಂಭಗಳಲ್ಲಿ ಮೈಮೇಲೆ ಎಳೆದುಕೊಂಡಂತೆ ಇಲ್ಲಿಯೂ ಎಳೆದುಕೊಂಡಿದ್ದಾರೆ. ಭಾರತೀಯ ಮನಸ್ಸಿನೊಳಗೆ ಭಾರತೀಯ ಬಹುಭಾಷೆಗಳಲ್ಲಿ ಚಿತ್ರಿತವಾಗಿರುವ ಬಹುರೂಪಿ ರಾಮನಿರುವಾಗ ಇವರು ವಾಲ್ಮೀಕಿಯ ಆಚೆ ಈಚೆ ಹೋಗುವುದಿಲ್ಲವೇಕೆ?

ಶಂಬೂಕ ವಧೆ, ಸೀತಾ ಪರಿತ್ಯಾಗ ಇವರೆಡೂ ಪ್ರಸಂಗಗಳು ರಾಮನ ವ್ಯಕ್ತಿತ್ವವನ್ನು ಕಳೆಗುಂದಿಸಿರುವುದಷ್ಟೇ ಅಲ್ಲ ದೈವದ ನೆಲೆಯಲ್ಲಿ ರಾಮನನ್ನು ನೋಡುವ ಮನಸ್ಸುಗಳಿಗೆ ಇಷ್ಟವಾಗುವುದಿಲ್ಲ. ಈ ಬಗ್ಗೆ ಕೃತಿಕಾರರು ವಿಷಾದ ಹೊಂದಿರದೆ ದಲಿತತ್ವ ಮತ್ತು ಸ್ತ್ರೀ ನಿರ್ಬಲೀಕರಣಗಳೆರಡೂ ರಾಮನ ವಿರುದ್ಧದ ಬಹುದೊಡ್ಡ ದೌರ್ಬಲ್ಯಗಳೋ ಎಂಬಂತೆ ಚಿತ್ರಿಸಿದ್ದಾರೆ. ರಾಮರಾಜ್ಯ ಇಲ್ಲಿ ನಿರಾಕರಿಸಲಾಗುತ್ತದೆ. ರಾಮ ಮತ್ತು ಕೃಷ್ಣ ಇಬ್ಬರೂ ಯುದ್ಧವನ್ನು ಬೆಂಬಲಿಸಿದವರಾದ್ದರಿಂದ ದೈವತ್ವದ ವ್ಯಕ್ತಿ ಯುದ್ಧಪಿಪಾಸಿಯೆ? ಎಂಬ ಪ್ರಶ್ನೆ ನಮ್ಮೆದರು ನಿಲ್ಲುತ್ತದೆ. ಹಾಗಾದರೆ ಗಾಂಧಿ, ಲೋಹಿಯಾ, ವಿವೇಕಾನಂದರೂ ಕಂಡ ರಾಮ ಯಾವ ಬಗೆಯವನಾಗಿದ್ದ ಎಂಬ ಹೊಸ ಪ್ರಶ್ನೆಯನ್ನು ಹುಟ್ಟು ಹಾಕುತ್ತದೆ. ಲೇಖಕರಿಗೆ ಆ ರಾಮ ಬೇಕಿಲ್ಲ.

ರಾವಣನಾದರೋ ಶಿವ ಭಕ್ತ. ರಾಮನಾದರೋ ದುಷ್ಟ ಶಿಕ್ಷಣದ ಪ್ರತಿಪಾದಕ. ಹಾಗಾದರೆ ಭಕ್ತಿ ಯಾರನ್ನು ಹೇಗೆ ಪ್ರಚೋದಿಸುತ್ತದೆ? ಹೇಗೆ ಆವಿರ್ಭಸುತ್ತದೆ? ಹೀಗಾಗಿ ಜನಪದರಲ್ಲಿ ಉಳಿದಿರುವ ರಾಮ ಭಗವಾನರ ರಾಮ ಇಬ್ಬರೂ ಉತ್ತರ–ದಕ್ಷಿಣ ಆಗುತ್ತಾರೆ. ಈ ವೈರುಧ್ಯದಲ್ಲಿ ಮತ್ತೆ ಮತ್ತೆ ಸೀತೆಯ ವ್ಯಕ್ತಿತ್ವ, ಚಾರಿತ್ರ್ಯ ಮಸುಕಾಗಿ ಬಿಡುತ್ತದೆ. ಭಗವಾನರು ಆ ದಿಸೆಯಲ್ಲಿ ಯೋಚಿಸದೆ ಹೆಚ್ಚಿನ ಪಾಲು ರಾಮನ ಯುದ್ಧೋನ್ಮಾದದ ವಿವರಗಳಿಗೆ ಮೀಸಲಿಟ್ಟು ಬಿಟ್ಟಿದ್ದಾರೆ ಎನಿಸುತ್ತದೆ.

೧೬೮ ಪುಟಗಳ ಈ ಕೃತಿ ರಾಮ ಮಂದಿರ ಏಕೆ ಬೇಡವೆಂದು ಹೇಳುವಾಗ ಇವರ ನಿರೂಪಣೆ ಮತೀಯ ಮೂಲಭೂತವಾದಿಗಳ ವಿರುದ್ಧ ತಿರುಗುತ್ತದೆ. ಆದರೆ. ಆದರೆ ಇದೇ ವೇಳೆಯಲ್ಲಿ ರಾಮನನ್ನು ಭಾರತೀಯ ಬಹು ಸಂಸ್ಕೃತಿಯ ಮಾನವೀಯ ನೆಲೆಗಲ್ಲಿ ಗ್ರಹಿಸುವುದರ ಕಡೆಗೆ ಲೇಖಕರು ಕಣ್ಣೆತ್ತಿಯೂ ನೋಡಿಲ್ಲ. ಹಾಗಾಗಿ ಇಲ್ಲಿ ಸೌಹಾರ್ದ ನೆಲೆಯ ಭಾರತೀಯ ರಾಮ, ಧಾರ್ಮಿಕ ರಾಮ, ಜಾನಕಿ ವಲ್ಲಭ ರಾಮ ಇಲ್ಲಿ ಅದೃಶ್ಯವಾಗಿದ್ದಾರೆ. ಭಗವಾನರ ರಾಮ ಮೇಲ್ಮುಖ ಚಲನೆಯ ಬದಲು ನಿರಾಕರಣೆಯೆಡೆಗೆ ಹೆಚ್ಚು ವಾಲಿದ್ದಾನೆ. ಹೀಗಾಗಿಯೆ ಗ್ರಹಿಕೆಗಳಿಗೆ ಇಲ್ಲಿ ಗ್ರಹಣ ಹಿಡಿದಂತಾಗಿದೆ. ಕಾಲಕಾಲಕ್ಕೆ ರಾಮ ಕಾವ್ಯದ ಪ್ರಕ್ಷಿಪ್ತಗಳಲ್ಲಿ ವೈಭವೀಕರಣಕ್ಕೆ ಗುರಿಯಾದರೆ, ಈ ಇನ್ನೊಂದು ತುದಿಯಲ್ಲಿ ಸಂಹಾರಕನಾಗಿಯಷ್ಟೆ ಉಳಿದದ್ದರಿಂದ ಅವನ ಬಹುಮುಖಿ ಗುಣಕ್ಕೆ ಇಲ್ಲಿ ಕತ್ತಲೆ ಆವರಿಸಿದೆ.

**–ಎಂ. ಚಂದ್ರಶೇಖರಯ್ಯ**


ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ
ದೃಢ ಹೆಜ್ಜೆಗಳು
ಕರ್ನಾಟಕ ಸರ್ಕಾರ
"ರಾಜ್ಯದ ಜನತೆಯ ಆಶಯದಂತೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅಭಿವೃದ್ಧಿಯೇ ನಮ್ಮ ಗುರಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನವೇ ನಮ್ಮ ಆದ್ಯತೆ."
ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು
ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ನೇತೃತ್ವದ ರೈತ ಪರ ಸರ್ಕಾರದ
ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ನೆರವು, ಮೀನುಗಾರರ ಸಾಲಮನ್ನಾ, ನೇಕಾರರ ಸಾಲಮನ್ನಾ
ಈ ಕೊಡುಗೆಗಳು ಸರ್ಕಾರದ ಕ್ರಿಯಾಶೀಲತೆ ಮತ್ತು ಜನಪರ ನಿಲುವಿಗೆ ಸಾಕ್ಷಿಯಾಗಿವೆ.
ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರ ಸರ್ಕಾರದ ಜೊತೆಗೆ ರಾಜ್ಯದ ಕೊಡುಗೆ
ಅರ್ಹ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ 6000/– ರೂ. ಗಳ ಜೊತೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ 4000/– ರೂ. ಬ್ಯಾಂಕ್ ಖಾತೆಗೆ ನೇರ ವರ್ಗಾವಣೆಗೆ ಕ್ರಮ.
60 ಲಕ್ಷಕ್ಕೂ ಹೆಚ್ಚು ರೈತರಿಗೆ ನೆರವು.
ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಗಳಿಗೆ ಹೆಚ್ಚುವರಿಯಾಗಿ ರಾಜ್ಯ ಸರ್ಕಾರ ಘೋಷಿಸಿರುವ 4000/– ರೂ. ಗಳಲ್ಲಿ ಮೊದಲ ಕಂತಿನ 2000/– ರೂ. ಗಳನ್ನು ತಕ್ಷಣ ಬಿಡುಗಡೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ.
ರೈತರು ಬೆಳೆದ ಹಸಿರು ಮೇವು ಖರೀದಿ ದರ ಪ್ರತಿ ಟನ್‌ಗೆ 3000/– ರೂ. ನಿಂದ 4000/– ಸಾವಿರ ರೂ.ಗಳಿಗೆ ಹೆಚ್ಚಳ.
ಮೀನುಗಾರರ ಸಾಲಮನ್ನಾ
ಮೀನುಗಾರರ 60 ಕೋಟಿ ರೂ. ಸಾಲ ಮನ್ನಾ.
23000 ಕ್ಕೂ ಹೆಚ್ಚು ಮೀನುಗಾರರಿಗೆ, ವಿಶೇಷವಾಗಿ ಮಹಿಳಾ ಮೀನುಗಾರರಿಗೆ ಪ್ರಯೋಜನ.
ನೇಕಾರರ ಸಾಲಮನ್ನಾ
ನೇಕಾರರ 98 ಕೋಟಿ ರೂ. ಸಾಲ ಮನ್ನಾ.
29000 ಕ್ಕೂ ಹೆಚ್ಚು ನೇಕಾರರಿಗೆ ಪ್ರಯೋಜನ.
ಪ್ರಕೃತಿ ವಿಕೋಪ ಪರಿಹಾರಕ್ಕೆ ಆದ್ಯತೆ
ಪ್ರವಾಹದಲ್ಲಿ ಮನೆ ಕಳೆದುಕೊಂಡವರಿಗೆ ಮನೆ ನಿರ್ಮಿಸಿಕೊಳ್ಳಲು 5 ಲಕ್ಷ ರೂ.ಗಳ ಆರ್ಥಿಕ ನೆರವು
ತೀವ್ರ ಪ್ರಕೃತಿ ವಿಕೋಪದಿಂದಾಗಿ ನೊಂದ ಎಲ್ಲಾ ಸಂತ್ರಸ್ತರಿಗೆ ನೆರವಾಗುವುದು ಸರ್ಕಾರದ ಮೊದಲ ಆದ್ಯತೆ ಆಗಿದೆ
ಪ್ರವಾಹ ಸಂತ್ರಸ್ತರಿಗೆ ನೆರವಾಗಲು ಸರ್ಕಾರದೊಂದಿಗೆ ಸಹಾಯಹಸ್ತ ಚಾಚಬಯಸುವ ಸಹೃದಯ ದಾನಿಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ. 37887098605, IFSC Code : SBIN0040277. "Chief Minister Relief Fund Natural Calamity" ಗೆ ಆನ್‌ಲೈನ್ ಮೂಲಕ ದೇಣಿಗೆ ಸಂದಾಯ ಮಾಡಬಹುದು ಅಥವಾ ಚೆಕ್/ಡಿಡಿಯನ್ನು "Chief Minister Relief Fund Natural Calamity" ಹೆಸರಿಗೆ ತಯಾರಿಸಿ ನಂ.೨೩೫–ಎ, ೨ನೇ ಮಹಡಿ, ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆ, ವಿಧಾನಸೌಧ, ಬೆಂಗಳೂರು–೫೬೦ ೦೦೧ ಈ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಬಹುದು. ಈ ರೀತಿ ಸಲ್ಲಿಸುವ ದೇಣಿಗೆಗೆ ಆದಾಯ ತೆರಿಗೆ ಕಾಯ್ದೆ ೮೦ಜಿ (೨)ಯಡಿ ತೆರಿಗೆ ವಿನಾಯಿತಿ ಇರುತ್ತದೆ. ಆದಾಯ ತೆರಿಗೆ ವಿನಾಯಿತಿ ಪಡೆಯಲು PAN No. : AAAGC1692P ಅಥವಾ GGGGG0000G ಅನ್ನು ಬಳಸಬಹುದು.
ಅಭಿವೃದ್ಧಿಯೇ ಆಡಳಿತ ಮಂತ್ರ
ಪ್ರಕಟಣೆ: ಆಯುಕ್ತರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಕರ್ನಾಟಕ ವಾರ್ತೆ

**‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ**
**ಹೊಸ ವರ್ಷದ ಹಾರ್ದಿಕ ಶುಭಾಶಯಗಳು!**





**ಅವಿರತ ಪ್ರತಿಷ್ಠಾನ**

**#೭೩, ೩ನೇ ಘಟ್ಟ,**

**೨ ನೇ ಮುಖ್ಯ ರಸ್ತೆ, ವಿನಾಯಕ ನಗರ**

**ವಿಜಯನಗರ,** ಬೆಂಗಳೂರು – ೫೬೦ ೦೪೦

## ಕೊನೆಯ ಸಾಲುಗಳು



ಪರರ ತಿಳಿವ ಜಾಣ; ತನ್ನ ತಿಳಿವ ಮೌನಿ
ಪರರ ಗೆಲುವ ಶೂರ; ತನ್ನ ಗೆಲುವ ಯೋಗಿ
ತೃಪ್ತಿ ಉಳ್ಳವ ಶ್ರೀಮಂತ.

–ತಾವೋ ಗುರು ಲಾವೋತ್ಸೆ

***ಶುಭಾಶಯಗಳೊಂದಿಗೆ,***

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/20119-21**

ಇವರಿಗೆ \ To

If undelivered, please return to D.S. Nagabhushana, Editor,
‘Hosa Manushya’, ’HIG-5, ‘Nudi’, Kallahalli Extension,
Vinoba Nagara, Shivamogga -577204( Karnataka)